
ಸಂಪುಟ 22 ಸಂಚಿಕೆ 21 ಮೇ 17-23, 1999 ರೂ. 3.00 ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ



ಅಸ್ಥಿರತೆಯ ಕೂಗು

ಅಧ್ಯಕ್ಷ ಮಾದರಿಯ ಕಪಟ ಚಿಕಿತ್ಸೆ

ಜನತಾದಳದ
ಐಕ್ಯ ನಿಲುವಿನ ಪ್ರಾಮುಖ್ಯತೆ



ಬಿಜೆಪಿ ದುಷ್ಟಕೂಟದ ಕಾರಸ್ಥಾನಗಳ ವಿರುದ್ಧ ಈಗ ಚುನಾವಣಾ ಯುದ್ಧ



ಕೃಷಿಕೂಲಿಕಾರರ ಬಾಳ ಕತ್ತಲೆಯನ್ನು ನೀಗಿಸಲು

ಜನತಾದಳದ ಐಕ್ಯ ನಿಲುವಿನ ಪ್ರಾಮುಖ್ಯತೆ

ಜನತಾದಳದ ರಾಷ್ಟ್ರಮಟ್ಟದ ಅಧ್ಯಕ್ಷ ಶರದ್ ಯಾದವ್ ರವರ ಸಮ್ಮುಖದಲ್ಲಿ ರಾಜ್ಯದ ಪ್ರಮುಖ ನಾಯಕರು - ಅಂದರೆ ದೇವೇಗೌಡರು, ಜೆ.ಎಚ್.ಪಟೇಲ್, ಸಿದ್ಧರಾಮಯ್ಯ, ಬೊಮ್ಮಾಯಿ, ಸಿಂಧ್ಯಾ, ಶಂಕರ್, ಭೈರೇಗೌಡ ಮುಂತಾದವರು ಸೇರಿ ರಾಜ್ಯದಲ್ಲಿ ಚುನಾವಣಾ ತಂತ್ರದ ಬಗ್ಗೆ ಚರ್ಚಿಸಿದರು. ಕರ್ನಾಟಕದಲ್ಲಿ ಜನತಾದಳ ಮುಂದಿನ ಚುನಾವಣೆಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ (ಐ) ಎರಡನ್ನೂ ವಿರೋಧಿಸಬೇಕು. ಮೈತ್ರಿ ಕೇವಲ ಎಡಪಕ್ಷಗಳೊಡನೆ ಮಾತ್ರ ಎಂದು ಪಕ್ಷದ ಪರವಾಗಿ ರಾಜ್ಯ ಅಧ್ಯಕ್ಷ ಸಿದ್ಧರಾಮಯ್ಯ ತಿಳಿಸಿದರು. ಇದು ಜನತಾದಳದಲ್ಲಿನ ಭಿನ್ನಾಭಿಪ್ರಾಯದ ಬಗ್ಗೆ, ಒಂದು ಕಾಂಗ್ರೆಸ್‌ನ ಜೊತೆ ಮತ್ತೊಂದು ಲೋಕಶಕ್ತಿಯ ಜೊತೆ ಹೋಗುವ ಬಗ್ಗೆ ಇದ್ದ ಊಹಾಪೋಹಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. ಇನ್ನೇನು ನಾಳೆ ಒಡೆದೇ ಹೋಗುತ್ತದೆ ಎನ್ನುವ ಮಾತನ್ನಂತೂ ನಿಲ್ಲಿಸಿತು. ನಂತರ ಜನತಾದಳದ ನಾಯಕರು ಹಲವರು ಸೇರಿ ಒಂದಾದ ಮೇಲೊಂದು ಸಭೆಗಳನ್ನು ನಡೆಸಿದರು. ಹಲವು ಕಾಲ ಪರಸ್ಪರ ಹೊಂದಾಣಿಕೆ ಇಲ್ಲದ ಹಾಗೂ ಇತ್ತೀಚೆಗೆ ಬಿಜೆಪಿಯ ಸರ್ಕಾರವನ್ನು ಬೀಳಿಸುವ ವಿಷಯದಲ್ಲಿಯೂ ಭಿನ್ನ ನಿಲುವುಗಳನ್ನು ತಳೆದಿದ್ದ ದೇವೇಗೌಡ-ಜೆ.ಎಚ್.ಪಟೇಲರು ಪರಸ್ಪರರನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಊಟ ಉಪಹಾರ ನಡೆಸಿದ್ದು ಹಾಗೂ ದೇವೇಗೌಡರು ತಮ್ಮ ವಿರುದ್ಧ ದನಿಯೆತ್ತಿದ್ದ ಸಚಿವರನ್ನು ಭೇಟಿ ಮಾಡಿ ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದ್ದು ಹಲವು ರೀತಿಯ ಅಭಿಪ್ರಾಯಗಳಿಗೆ, ಪತ್ರಿಕಾ ಬರಹಗಳಿಗೆ ಕಾರಣವಾಯಿತು. ದೇವೇಗೌಡರ ರಾಜಕೀಯ ತಂತ್ರದ ಬಗ್ಗೆ ಅವರು ಜೆ.ಎಚ್.ಪಟೇಲರ ಕಾಲಿಗೆ ಬಿದ್ದರು ಇತ್ಯಾದಿ ರೀತಿ ಬರಹಗಳು ಬಂದವು.

ಕೆಲವೇ ದಿನಗಳಲ್ಲಿ ಎಂ.ಎಸ್.ಪಾಟೀಲರ ಅಪಸ್ವರ, ಸಮಾನ ಮನಸ್ಕರ ಭೇಟಿಯ ಸುದ್ದಿ, ಇದರ ಹಿಂದೆ ಜೆ.ಎಚ್.ಪಟೇಲರೇ ಇದ್ದಾರೆ ಎಂಬ ಊಹಾಪೋಹಗಳು ಬಂದವು. ಆದರೆ ಜೆ.ಎಚ್.ಪಟೇಲರ ನೆಚ್ಚಿನ ಭಂಟ ಎಂ.ಪಿ.ಪ್ರಕಾಶ್ ಎಂ.ಎಸ್.ಪಾಟೀಲರನ್ನು ಭೇಟಿ ಮಾಡಿದರು. ಅವರನ್ನು ಈ ಸಭೆ ನಡೆಸದಿರುವಂತೆ ಮನವೊಲಿಸಲು ಪ್ರಯತ್ನಿಸಿದರು. ನಂತರ ಪತ್ರಿಕೆಗಳಲ್ಲಿ ಜನತಾದಳ ಒಗ್ಗಟ್ಟಾಗಿ ಚುನಾವಣೆ ಸ್ಪರ್ಧಿಸುತ್ತದೆ, ಯಾರಾದರೂ ಭಿನ್ನಸ್ವರ ತೆಗೆಯುವವರು, ಜನತಾದಳದಿಂದ ಹೊರ ಹೋಗುವವರು ಈಗಲೇ ಹೋಗಲಿ ಎಂದು ಘೋಷಿಸಿದ್ದೊಂದು ವಿಶೇಷ. ನಂತರದ ದಿನಗಳಲ್ಲಿ ಜೆ.ಎಚ್.ಪಟೇಲರು ಪತ್ರಿಕಾ ಸಂದರ್ಶನಗಳಲ್ಲಿ ಹಾಗೂ ಗೋಷ್ಠಿಗಳಲ್ಲಿ ಸ್ಪಷ್ಟವಾಗಿ ಹೇಳಿದರು. "ಹೆಗ್ಗಡೆಯವರು ನನ್ನ ಮಿತ್ರ ನಿಜ. ಆದರೆ ಅವರ ರಾಜಕೀಯವನ್ನು ನಾನು ಒಪ್ಪುವುದಿಲ್ಲ"

ನಮ್ಮ ಪತ್ರಿಕೆ ಜೆ.ಎಚ್.ಪಟೇಲರು ಬಿಜೆಪಿ ಸರ್ಕಾರದ ವಿಶ್ವಾಸಮತದ ಸಂದರ್ಭದಲ್ಲಿ ಜನತಾದಳ ನಿರ್ಲಿಪ್ತ ನಿಲುವು ತಳೆಯಬೇಕೆಂದು ಪ್ರತಿಪಾದಿಸಿದ್ದರ ಬಗ್ಗೆ ಅದು ನಿರ್ಲಿಪ್ತ

ಸಂಪಾದಕೀಯ

ನಿಲುವಲ್ಲ ನೇರವಾಗಿ ಬಿಜೆಪಿಯನ್ನು ಅವರ ಕೋಮುವಾದಿ ತಂತ್ರಗಳನ್ನು ಬೆಂಬಲಿಸುವ ಎಡಬಿಡಂಗಿತನದ ನಿಲುವು. ಕರ್ನಾಟಕದ ಜನತೆಗೆ ಮಾಡುತ್ತಿರುವ ದ್ರೋಹದ ತುತ್ತತುದಿ ಎಂದು ಖಾರವಾಗಿ ಟೀಕಿಸಿತ್ತು. ಅದೇ ಸಮಯದಲ್ಲಿ ಜೆ.ಎಚ್.ಪಟೇಲರ ನಿಲುವಿಗೆ ವ್ಯತಿರಿಕ್ತವಾಗಿ ಲೋಕಸಭೆಯ ಎಂಪಿಗಳು ವಿಶ್ವಾಸನಿರ್ಣಯದ ವಿರುದ್ಧ ಮತದಾನ ಮಾಡಿದುದನ್ನು ಹಾಗೂ ಸಿದ್ದರಾಮಯ್ಯ ಹಾಗೂ ಸಿಂಧ್ಯಾ ಜೆ.ಎಚ್.ಪಟೇಲರ ನಿಲುವನ್ನು ನಿರಾಕರಿಸುವುದನ್ನು ಸ್ವಾಗತಿಸಿತ್ತು. ಈ ಹೇಳಿಕೆಗಳು ಕರ್ನಾಟಕದಲ್ಲಿ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವ ದಿಸೆಯಲ್ಲಿ ಉತ್ತಮ ಕಾಣಿಕೆ ಎಂದು ಶ್ಲಾಘಿಸಿತ್ತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯೂ ಜನತಾದಳ ತಮ್ಮ ಗುಂಪುಗಾರಿಕೆಯ ಸಂಕುಚಿತ ದೃಷ್ಟಿಯನ್ನು ಮೀರಿ ಕೋಮುವಾದಿಗಳ ವಿರುದ್ಧ ನಿಲುವು ತಳೆಯಬೇಕು ಎಂದು ಕರೆ ನೀಡಿತು.

ಜಾತ್ಯಾತೀತ(ಧರ್ಮನಿರಪೇಕ್ಷ ಎಂಬ ಅರ್ಥದಲ್ಲಿ) ಪಕ್ಷವಾದ ಜನತಾದಳ ಒಗ್ಗಟ್ಟಾಗಿ ಉಳಿಯಬೇಕು ಹಾಗೂ ಕಾಂಗ್ರೆಸ್ ಬಿಜೆಪಿ ನೀತಿಗಳನ್ನು ವಿರೋಧಿಸಬೇಕು ಎಂದು ಜಾತ್ಯಾತೀತತೆಯನ್ನು ದೃಢವಾಗಿ ಪ್ರತಿಪಾದಿಸುವ ನಮ್ಮ ಪತ್ರಿಕೆ ಬಯಸುತ್ತದೆ. ಜನತಾದಳದ ರಾಜಕೀಯ ಬೆಳವಣಿಗೆ ಮತ್ತು ಅಸ್ತಿತ್ವಕ್ಕೆ ನೆಲೆಯಿರುವುದೇ ಈ ನಿಲುವಿನಲ್ಲಿ. ಈ ನಿಲುವಿನಲ್ಲಿ ಸಡಿಲತೆ, ವಿಚಲತೆಯುಂಟಾದರೆ ಜನತಾ ದಳವೇ ಇರುವುದಿಲ್ಲ ಎನ್ನುವ ಪರಿಸ್ಥಿತಿ ಉಂಟಾಗುವುದು ಸಹಜ. ಆದ್ದರಿಂದ ಈ ಧೋರಣೆಯ ಬೆಳವಣಿಗೆಯಿಂದಲೇ ಜನತಾದಳವೂ ಬೆಳೆಯುವುದಕ್ಕೆ ರಾಜಕೀಯ ಅವಕಾಶ ನೀಡುವುದು.

ರಾಜ್ಯದಲ್ಲಿ ಜಾತ್ಯಾತೀತ ಶಕ್ತಿಗಳು ಬಲವಾಗಿರುವುದಕ್ಕೆ ಜನತಾದಳದ ಅಸ್ತಿತ್ವ ಒಂದು ಪ್ರಬಲ ಕಾರಣ ಎಂಬುದನ್ನು ಎಷ್ಟು ಮಾತ್ರಕ್ಕೂ ಮರೆಯಬಾರದು: ಕಾಂಗ್ರೆಸ್‌ನ ಜನ ವಿರೋಧಿ ನೀತಿಗಳು ಜನರಲ್ಲಿ ಉಂಟು ಮಾಡುತ್ತಿದ್ದ ಅತೃಪ್ತಿ ರಾಜ್ಯದಲ್ಲಿ ಮತ್ತೊಂದು ಜಾತ್ಯಾತೀತ ವಿರೋಧ ಪಕ್ಷವಾಗಿ ಜನತಾದಳ ಅಸ್ತಿತ್ವದಲ್ಲಿರುವುದರಿಂದಲೇ ಜನತಾದಳದ ಕಡೆಗೆ ಜನರನ್ನು ಸೆಳೆಯಿತು. ಇಲ್ಲದಿದ್ದರೆ ಅನೇಕ ರಾಜ್ಯಗಳಲ್ಲಾದಂತೆ ಈ ಅತೃಪ್ತಿಯ ಪ್ರಯೋಜನವನ್ನು ಬಿಜೆಪಿ ಪಡೆಯುತ್ತಿತ್ತು. ಇದಕ್ಕೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ವಿರುದ್ಧದ ಅತೃಪ್ತಿಯನ್ನು ಬಳಸಿಕೊಂಡೆ ದೇಶದ ರಾಜಕೀಯದಲ್ಲಿ ಬಿಜೆಪಿ ಇಂದು ಪ್ರಬಲ ಶಕ್ತಿಯಾಗಿ ಬೆಳೆದಿದೆ ಮತ್ತು ಪ್ರಭುತ್ವದ ಮೇಲೆ ಹಿಡಿತ ಸಾಧಿಸುವ ಪ್ರಯತ್ನದಲ್ಲಿ ಯಶಸ್ವಿಯಾಯಿತು ಎನ್ನುವುದರ ಮೂಲಕ ಗಮನಿಸಬಹುದು.

ಅದರ ಜೊತೆಗೆ ಕಾಂಗ್ರೆಸ್ ತನ್ನ ನೀತಿಗಳ ಕಾರಣವಾಗಿಯೇ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಕಾರಣವಾಗಿಯೇ ಜನತೆಯಿಂದ ದೂರ ಮಾಡಲ್ಪಟ್ಟು ಬಿಜೆಪಿ ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಿತು. ಕಾಂಗ್ರೆಸ್ ಈ ನೀತಿಗಳ ಬಗ್ಗೆ ಪುನರ್ವಿಮರ್ಶೆ ಮಾಡಿಕೊಳ್ಳದಿರುವುದು ಹಾಗ ಇತ್ತೀಚೆಗೆ ಬಿಜೆಪಿಯೊಡನೆ ಸೇರಿ ಪೇಟೆಂಟ್ ಕಾನೂನು ಹಾಗೂ ವಿಮಾ ಖಾಸಗೀಕರಣಕ್ಕೆ ಸಂಬಂಧಿಸಿದ ಮಸೂದೆಗೆ ಬೆಂಬಲ ನೀಡಿದುದನ್ನು ಗಮನಿಸಬಹುದು. ಆದ್ದರಿಂದ ಕಾಂಗ್ರೆಸ್‌ನ ಈ ನೀತಿಗಳು ಮತ್ತೆ ಬಿಜೆಪಿಯ ಬೆಳವಣಿಗೆಗೆ ಆಸ್ಪದ ನೀಡುತ್ತಿದೆಯೆಂಬುದರಲ್ಲಿ ಯಾವ ಸಂಶಯವೂ ಬೇಕಿಲ್ಲ.

ಆದ್ದರಿಂದ ಬಿಜೆಪಿಯ ಬೆಳವಣಿಗೆಯನ್ನು ತಡೆಯುವುದಕ್ಕೆ ಇರುವ ಒಂದೇ ಮಾರ್ಗ ಹೊಸ ಆರ್ಥಿಕ ನೀತಿಗಳಿಗೆ ಕಾಂಗ್ರೆಸ್ ಹಾಗೂ ಬಿಜೆಪಿಯ ನೀತಿಗಳಿಗೆ ವಿರುದ್ಧವಾದ ಮೂರನೇ ಪರ್ಯಾಯದ ರಚನೆಗಾಗಿ ಪ್ರಯತ್ನ. ಈ ಪರ್ಯಾಯದ ರಚನೆ ಸಿಪಿಐ(ಎಂ) ಪಕ್ಷದ ಇತ್ತೀಚಿನ ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿದಂತೆ ದೀರ್ಘ ಕಾಲೀನ ಹೋರಾಟ.

ಪುಟ 8 ನೋಡಿ

ಒಂದೇ ಚುನಾವಣಾ ಪ್ರಣಾಳಿಕೆ

ಬಿಜೆಪಿಯ ಹೊಸ ಕಪಟೋಪಾಯ

ಬಿಜೆಪಿ ಮುಂದಿನ ಲೋಕಸಭಾ ಚುನಾವಣೆಗಳಿಗೆ ತನ್ನ ಪಕ್ಷದ ಪ್ರತ್ಯೇಕ ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸುವುದಿಲ್ಲವಂತೆ. ತನ್ನೆಲ್ಲಾ ಮಿತ್ರ ಪಕ್ಷಗಳೊಂದಿಗೆ ಸೇರಿಕೊಂಡು ಒಂದೇ ಪ್ರಣಾಳಿಕೆ ಹೊರಡಿಸುತ್ತದಂತೆ. ಇದರರ್ಥ ಬಿಜೆಪಿ- ಆರ್‌ಎಸ್‌ಎಸ್ ತಮ್ಮ ಕೋಮುವಾದಿ ಅಜೆಂಡಾ ಬಿಟ್ಟಿವೆಯೆಂದೇ? ಕೆಲವು ಅದರ ಉದಾರ ಬೆಂಬಲಿಗರು ಬಯಸುವಂತೆ ತನ್ನ ಹಿಂದುತ್ವ ತತ್ವವನ್ನು ಅದು ಬಿಟ್ಟು ಕೊಟ್ಟಿದೆಯೆ? ಖಂಡಿತಾ ಇಲ್ಲ, ಈ ಮೂಲಕ ಅದು ಇನ್ನೊಂದು ಚುನಾವಣಾ ಕಪ ಟೋಪಾಯ ಬಳಸಿದೆ ಎಂದು ಸಿಪಿಐ(ಎಂ) ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಹೇಳಿದೆ.

1998 ರಲ್ಲಿ ಬಿಜೆಪಿ ಅಧಿಕಾರ ಗಿಟ್ಟಿಸಲು ಅತ್ಯಂತ ಸಮಯಸಾಧಕ ಕೂಟ ಏರ್ಪಡಿಸಿಕೊಂಡಿತು. ಚುನಾವಣೆಯ ನಂತರ 'ರಾಷ್ಟ್ರೀಯ ಆಡಳಿತ ಅಜೆಂಡಾ' ಎಂಬ ಘನ ಶಬ್ದಾವಳಿಯನ್ನು ಮುಂದಿಟ್ಟಿತು. ಆದರೆ ಇದು ಅದಕ್ಕೆ ಹಿಂದುತ್ವ ಅಜೆಂಡಾವನ್ನು ಜಾರಿ ಮಾಡಲು ಒಂದು ನೆಪವಷ್ಟೇ ಆಗಿತ್ತು ಎಂಬುದು ಅದರ 13 ತಿಂಗಳ ಆಳ್ವಿಕೆಯಿಂದ ಸ್ಪಷ್ಟವಾಗಿದೆ. ಕ್ರೈಸ್ತರ ಮೇಲೆ ನಿರಂತರ ಧಾಳಿ ಇದಕ್ಕೊಂದು ಉದಾಹರಣೆ.

ವಿಶ್ವಾಸಮತ ಗೆಲ್ಲಲು ನೀತಿಬಾಹಿರ ಪ್ರಯತ್ನಗಳನ್ನೆಲ್ಲಾ ಮಾಡಿದ ಈ ಪಕ್ಷ, ಅದರಲ್ಲಿ ಸೋತ ಮೇಲೂ ಮತ್ತೆ ಸರಕಾರ ರಚಿಸುವ ಹತಾಶ ಪ್ರಯತ್ನ ನಡೆಸಿತು. ಅದು ಸಾಗದಾದಾಗ ಜೂನ್‌ನಲ್ಲೇ ಚುನಾವಣೆ ನಡೆಸಬೇಕೆಂಬ ತಂತ್ರ ಹೂಡಿತು. ಚುನಾವಣಾ ಆಯೋಗದಿಂದಾಗಿ ಈ ತಂತ್ರ ಫಲಿಸಲಿಲ್ಲ. ಈ ಹಿನ್ನೆಲೆಯಲ್ಲಿ 'ಒಂದೇ ಪ್ರಣಾಳಿಕೆ' ತಂತ್ರ ಪ್ರಯೋಗಿಸಿದೆ. ತನ್ನ 13 ತಿಂಗಳ ಶೋಚನೀಯ, ಅಸ್ಥಿರ ಕಾರ್ಯ ನಿರ್ವಹಣೆಯನ್ನು ತೋರಿಸಲಾಗದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಈ ತಂತ್ರ. 'ಸಮರ್ಥ ಪ್ರಧಾನಿ, ಸ್ಥಿರ ಸರ್ಕಾರ' ದ ಘೋಷಣೆಯನ್ನು ಜನ ಮರೆಯುವಂತೆ ಮಾಡಲು 'ಏಕ ಮುಖಂಡ, ಏಕ ಮೈತ್ರಿಕೂಟ, ಏಕ ಕಾರ್ಯಕ್ರಮ' ದ ಘೋಷಣೆ ಕೂಡ ಲಾಗಿದೆ. ಆದರೆ ಜನ ಆ ಘೋಷಣೆಯನ್ನು ಮರೆತಿಲ್ಲ.

ಆರ್.ಎಸ್.ಎಸ್. ಈ 'ಏಕಪ್ರಣಾಳಿಕೆ' ಯ ತಂತ್ರಕ್ಕೆ ಅನುಮೋದನೆ ನೀಡಿದೆ. ಏಕೆಂದರೆ ಮತ್ತೆ ಸರಕಾರ ಪಡೆಯುವುದು ಅದಕ್ಕೆ ಮುಖ್ಯ. ಈ ಮೂಲಕ ಕೋಮುವಾದಿ ಶಕ್ತಿಗಳನ್ನು ಕೇಂದ್ರ ಸರ್ಕಾರದಲ್ಲಿ ತೂರಿಸುವ ಕೆಲಸ ಮುಂದು ವರೆಸಬಹುದು. ಚುನಾವಣಾ ಪ್ರಚಾರದಲ್ಲಿ ಹಿಂದುತ್ವವನ್ನು ವಿಹೆಚ್‌ಪಿ, ಭಜರಂಗದಳ ಇತ್ಯಾದಿ ಮಾಡುತ್ತವೆ.

ಜಾರ್ಜ್ ಫರ್ನಾಂಡೀಸ್‌ರಂತಹ ಧರ್ಮನಿರಪೇಕ್ಷ ಮಿತ್ರರಿಗೆ ಈಗ ಇಂತಹ ಕಪಟ ತಂತ್ರಗಳನ್ನು ನುಂಗಿಕೊಳ್ಳುವುದು ಅಭ್ಯಾಸವಾಗಿ ಬಿಟ್ಟಂತೆ ಕಾಣುತ್ತದೆ. ಅಲ್ಲದೆ ಸಾಮ್ರಾಜ್ಯಶಾಹಿಯ ಹಾಗೂ ದೊಡ್ಡ ಬಂಡವಾಳಶಾಹಿ ಬೆಂಬಲವಿರುವಾಗ ರಾಮ ದೇವಸ್ಥಾನ, ಅಲ್ಪಸಂಖ್ಯಾತರ ದೂಷಣೆ ಇವೆಲ್ಲಾ ಚುನಾವಣೆ ಗೆಲ್ಲಲು ತನಗೆ ಬೇಕಿಲ್ಲ ಎಂದು ಬಿಜೆಪಿಗೆ ವಿಶ್ವಾಸ ಬಂದಂತಿದೆ. ಆರ್.ಎಸ್.ಎಸ್. ಅಜೆಂಡಾವನ್ನು ಬೇರೆ ರೀತಿಯಲ್ಲಿ ಜ್ಯಾರಿಗೆ ತರಬಹುದು. 'ಏಕ ಪ್ರಣಾಳಿಕೆ' ಹಿಂದುತ್ವದ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಇವೆಲ್ಲಾ ಬದಲಾಗಬಹುದು ಎಂದು ಮೂರ್ಖರು ಮಾತ್ರ ನಂಬಿಯಾರು.

ಆದರೆ ಬಿಜೆಪಿಯ ಈ ಕಪಟ ತಂತ್ರವೂ ಫಲಿಸದು. ಏಕೆಂದರೆ ಅದರ 13 ತಿಂಗಳ ದುರಾಡಳಿತವನ್ನು ಜನಗಳ ಮನಸ್ಸಿನಿಂದ ಅಳಿಸಲು ಸಾಧ್ಯವಿಲ್ಲ. 'ಒಂದೇ ದೇಶ, ಒಂದೇ ಸಂಸ್ಕೃತಿ, ಒಂದೇ ಜನ' ಎಂಬ ಆರ್‌ಎಸ್‌ಎಸ್ ಧ್ಯೇಯ ವಾಕ್ಯವನ್ನು ಶಿರಸಾವಹಿಸಿ ಪಕ್ಷ ಈಗ 'ಒಂದೇ ಮುಖಂಡ, ಒಂದೇ ಮೈತ್ರಿಕೂಟ, ಒಂದೇ ಕಾರ್ಯಕ್ರಮ' ಎಂದು ಘೋಷಿಸುತ್ತಿದ್ದಾರೆ. ಅದರಿಂದೇನೂ ಬದಲಾಗುವುದಿಲ್ಲ. ಜನ ಇಂತಹ ಕಪಟೋಪಾಯಗಳಿಗೆ ಬಲಿ ಬೀಳುವುದಿಲ್ಲ ಎಂದು 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಹೇಳಿದೆ.

ಬಂಡವಾಳಶಾಹಿಗಳ ರಾಜಕೀಯ ಸರ್ವಾಧಿಕಾರಶಾಹಿಯ ಪ್ರದರ್ಶನ

ವಿಮಾ ಸುಗ್ರೀವಾಜ್ಞೆ ಹೊರಡಿಸಲು ಸಿಐಐ ಆಗ್ರಹ!

12ನೇ ಲೋಕಸಭೆಯ ವಿಸರ್ಜನೆಯಿಂದ ನನೆಗುದಿಗೆ ಬಿದ್ದಿರುವ ವಿಮಾ ಪ್ರಾಧಿಕಾರ ಮಸೂದೆ ಮತ್ತಿತರ ಮಸೂದೆಗಳ ಬಗ್ಗೆ ಸುಗ್ರೀವಾಜ್ಞೆಯನ್ನು ಹೊರಡಿಸಬಹುದು ಎಂದು ಸಿಐಐ (ಭಾರತೀಯ ಉದಿಮೆಗಳ ಒಕ್ಕೂಟ) ಅಧ್ಯಕ್ಷ ರಾಹುಲ್ ಬಜಾಜ್ ಆಗ್ರಹ ಪಡಿಸಿದ್ದಾರಂತೆ. ಇಂತಹ ಒಂದು ಕ್ರಮ ಒಪ್ಪತಕ್ಕಂತದ್ದಲ್ಲ ಹಾಗೂ ಪ್ರಜಾಪ್ರಭುತ್ವ ವಿರೋಧಿ ಯಾದದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ..

ವಾಜಪೇಯಿ ಸರಕಾರ ಲೋಕಸಭೆಯಲ್ಲಿ ಸೋತು ರಾಜಿನಾಮೆ ನೀಡಿದೆ, ಹೊಸ ಚುನಾವಣೆಗಳು ನಡೆಯುವವರೆಗಷ್ಟೆ ಮುಂದುವರಿಯುತ್ತದೆ ಎಂದು ಸಿಐಐ ಅಧ್ಯಕ್ಷರಿಗೆ ಖಂಡಿತಾ ಗೊತ್ತಿದೆ. ಇಂತಹ ಉಸ್ತುವಾರಿ ಸರಕಾರ ಯಾವುದೇ ಮೂಲಭೂತ ಧೋರಣೆಯ ಕ್ರಮವನ್ನು ಆರಂಭಿಸುವಂತಿಲ್ಲ. ಅಥವಾ ಜಾರಿಗೆ ತರುವಂತಿಲ್ಲ. ವಿಮಾ ಮಸೂದೆ ಮತ್ತು ಇಂತಹ ಖಾಸಗೀಕರಣ ಹಾಗೂ ದೊಡ್ಡ ಬಂಡವಾಳಿಗರ ಪರವಾದ ಆರ್ಥಿಕ ಕ್ರಮಗಳು ಚುನಾವಣೆ ಪ್ರಚಾರದ ವಿಷಯಗಳೂ ಆಗಿವೆ ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಿಐಐ ಪ್ರದರ್ಶಿಸಿರುವ ನಿಲುವಿನಲ್ಲಿ ರಾಜಕೀಯ ಸರ್ವಾಧಿಕಾರ ಶಾಹಿಯ ವಾಸನೆ ಹೊಡೆಯುತ್ತಿದೆ ಎಂದಿದೆ. ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ತಿರಸ್ಕಾರವನ್ನು ತೋರಿಸುವ ಈ ನಿಲುವು ಜನಗಳ ಮತ್ತು ಪ್ರಜಾಪ್ರಭುತ್ವ ಹಿತಾಸಕ್ತಿಗಳಿಗಿಂತ ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳಿಗೇ ಆದ್ಯತೆ ನೀಡಬೇಕೆಂದು ಆಗ್ರಹ ಪಡಿಸುವ ನಿಲುವು ಎಂದು ಸಿಪಿಐ(ಎಂ) ಖಂಡಿಸಿದೆ.

ಇಂಡಿಯನ್ ಏರ್‌ಲೈನ್ಸ್ : ವಿದೇಶಿ - ದೇಶೀ ಬಂಡವಾಳಶಾಹಿಗೆ ಅಗ್ಗದರದಲ್ಲಿ ಮಾರಿ ತಿನ್ನಲು

ಉಸ್ತುವಾರಿ ಸರಕಾರದ ಸಲ್ಲದ ಹುನ್ನಾರ

ಕೇಂದ್ರದಲ್ಲಿ ಉಸ್ತುವಾರಿ ಸರ್ಕಾರ ಭಾರತದ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಇಂಡಿಯನ್ ಏರ್‌ಲೈನ್ಸ್‌ನ್ನು ಖಾಸಗೀಕರಿಸುವ ಪ್ರಯತ್ನವನ್ನು ಭರದಿಂದ ನಡೆಸಿದೆ.

ದೇಶೀ ಹಾಗೂ ವಿದೇಶಿ ಗುತ್ತೇದಾರಿ ಬಂಡವಾಳಿಗರ ಪ್ರಯೋಜನಕ್ಕಾಗಿ ಸಾರ್ವಜನಿಕ ಸಂಪತ್ತನ್ನು ಸೂರೆ ಮಾಡುವ ಬಿಜೆಪಿ ಸರಕಾರದ ನಿಲುವು ಇಲ್ಲಿ ಮತ್ತೊಮ್ಮೆ ಬಯಲಾಗಿದೆ. ಶೇರು ಮಾರುಕಟ್ಟೆ ಇಳಿಮುಖವಾಗಿರುವಾಗ ಇಂಡಿಯನ್ ಏರ್‌ಲೈನ್ಸ್‌ನ ಬಹುಪಾಲು ಶೇರುಗಳನ್ನು ಮಾರುವ ಸರಕಾರದ ನಿರ್ಣಯ ಇದನ್ನೇ ಎತ್ತಿ ತೋರಿಸಿದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಖಂಡಿಸಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಇಂಡಿಯನ್ ಏರ್‌ಲೈನ್ಸ್‌ನ ಬಲ ಹೆಚ್ಚಿಸುವ ನೆವದಲ್ಲಿ ಸಾರ್ವಜನಿಕ ಖಜಾನೆಯ 325 ಕೋಟಿ ರೂ.ಗಳನ್ನು ಇದೇ ವೇಳೆಗೆ ಸರಕಾರ ತೊಡಗಿಸುತ್ತಿದೆ. ಇದರ ನಿಜ ಉದ್ದೇಶ ಈ ಸಂಸ್ಥೆಯನ್ನು ದೇಶೀ-ವಿದೇಶೀ ಖಾಸಗಿ ಕಂಪನಿಗಳಿಗೆ ಇದರ ಶೇರುಗಳನ್ನು ಆಕರ್ಷಕಗೊಳಿಸುವುದು. ಇಂಡಿಯನ್ ಏರ್ ಲೈನಿನ ಶೇರುಗಳ ನಿಜ ಬೆಲೆಗಿಂತ ಕಡಿಮೆ ದರದಲ್ಲಿ ಅವನ್ನು ಮಾರುತ್ತಿದೆ. ಬಿಜೆಪಿ ಸರಕಾರಕ್ಕೆ ಈ ಸಾರ್ವಜನಿಕ ಉದ್ದಿಮೆಯ ಅಥವಾ ದೇಶದ ಹಿತಾಸಕ್ತಿ ಮುಖ್ಯವಲ್ಲ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ದೇಶೀ ಗುತ್ತೇದಾರಿಗಳ ಹಿತಾಸಕ್ತಿಗಳನ್ನು ಅತ್ಯಂತ ವಿಧೇಯತೆಯಿಂದ ಈಡೇರಿಸುವುದೇ ಮುಖ್ಯ ಎಂಬುದು ಇದರಿಂದ ಬಯಲಾಗುತ್ತದೆ. ಸರಕಾರದ ಇಂತಹ ಕ್ರಮವನ್ನು ಉಸ್ತುವಾರಿ ಸರ್ಕಾರದ ದುಷ್ಟ ತಂತ್ರವನ್ನು ಕಾರ್ಮಿಕ ವರ್ಗ ಮತ್ತು ಎಲ್ಲಾ ದೇಶಪ್ರೇಮಿ ಜನಗಳು ಒಗ್ಗಟ್ಟಿನಿಂದ ಪ್ರತಿಭಟಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

'ಐಕ್ಯರಂಗ'ದಲ್ಲಿ ಓದುಗರಿಗಾಗಿ ಹೊಸ ಅಂಕಣಗಳು

ಹೊಸ ಸ್ವರೂಪದ 'ಐಕ್ಯರಂಗ' ಈಗಾಗಲೇ ನಿಮ್ಮ ಕೈಸೇರಲಾರಂಭಿಸಿದೆ. ಈ ದಿಕ್ಕಿನಲ್ಲಿ ಇನ್ನಷ್ಟು ವಿಸ್ತಾರಗೊಳ್ಳಲು ಕೆಲವು ಹೊಸ ಅಂಕಣಗಳನ್ನು ಪ್ರಾರಂಭಿಸಬೇಕೆಂದಿದ್ದೇವೆ. ಇದರಲ್ಲಿ ನಮ್ಮ ಓದುಗರ ಸಕ್ರಿಯ ಸಹಕಾರ ನಮಗೆ ಅಗತ್ಯ. ನಿಮ್ಮ ಅನಿಸಿಕೆಗಳನ್ನು ತಿಳಿಸುವ 'ಓದುಗರ ಓಲೆಗಳು' ಹಾಗೂ ನಿಮ್ಮ ಪ್ರಶ್ನೆಗಳಿಗೆ ಮೀಸಲಾದ 'ಪ್ರಶ್ನೋತ್ತರ' ಅಂಕಣಗಳನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ. ನಿಮ್ಮ ಪತ್ರಗಳನ್ನು, ಪ್ರಶ್ನೆಗಳನ್ನು ಆದಷ್ಟು ಬೇಗನೇ ನಮಗೆ ಕಳಿಸಿ. ಜತೆಗೆ 'ಐಕ್ಯರಂಗ' ನಿಮ್ಮ ಬಂಧುಗಳೂ, ಗೆಳೆಯರು ಓದುವಂತೆ ಪ್ರೇರೇಪಿಸಿ.

- ಸಂಪಾದಕರು

'ಐಕ್ಯರಂಗ' ಕ್ಕೆ ವರದಿ ಕಳಿಸುವವರ ಗಮನಕ್ಕೆ

ರಾಜ್ಯದ ವಿವಿಧ ಕಡೆಗಳಲ್ಲಿ ದುಡಿಯುವ ಜನಗಳ ಹೋರಾಟದ ವರದಿಗಳು ನಮಗೆ ಬರುತ್ತಿರುತ್ತವೆ. ಆದರೆ ಇವುಗಳನ್ನು ಪ್ರಕಟಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯಕಾರಣ ಈ ವರದಿಗಳ ಸ್ವರೂಪ. ಬೇರೆ ದಿನಪತ್ರಿಕೆಗಳಿಗೆ ಕಳಿಸುವ ಸುದ್ದಿಗಳನ್ನೇ ನಮ್ಮಂತಹ ಪತ್ರಿಕೆಗೆ ಕಳಿಸಿದರೆ ನಮ್ಮ ಓದುಗರಿಗೆ ಅದರಿಂದ ಪ್ರಯೋಜನವಾಗದು. ನಮಗೆ ಕಳಿಸುವ ಇಂತಹ ವರದಿಗಳಲ್ಲಿ ನಿರ್ದಿಷ್ಟ ಹೋರಾಟದ/ ಪ್ರತಿಭಟನೆಯ ಹಿನ್ನೆಲೆಯಲ್ಲಿಯ ಸಮಸ್ಯೆಯ ಹಾಗೂ ಹೋರಾಟ/ ಪ್ರತಿಭಟನೆಯನ್ನು ಹೇಗೆ ಸಂಘಟಿಸಲಾಯಿತು ಎಂಬ ಒಂದು ಚಿತ್ರ ರಾಜ್ಯದ ಇತರ ಓದುಗರಿಗೂ ಸಿಗುವಂತೆ ಆಕರ್ಷಕವಾಗಿ ಬರೆದು ಕಳಿಸಿದ ವರದಿಗಳಿಗಷ್ಟೇ ಇನ್ನು ಮುಂದೆ ಆದ್ಯತೆ ನೀಡಲಾಗುವುದು ಎಂಬುದನ್ನು ಗಮನಿಸಬೇಕಾಗಿ ಕೋರಿಕೆ.

- ಸಂಪಾದಕರು.

ಬಿಜೆಪಿ ದುಷ್ಟಕೂಟದ ಕಾರಸ್ಥಾನಗಳ ವಿರುದ್ಧ ಚುನಾವಣಾ ಯುದ್ಧಕ್ಕೆ ಸಿದ್ಧರಾಗಿರಿ

ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆ

ಕಳೆದ 13 ತಿಂಗಳುಗಳಿಂದ ದೇಶಕ್ಕೆ ಗ್ರಹಣ ಹಿಡಿದಂತಾಗಿತ್ತು. ಬಿಜೆಪಿ ದುಷ್ಟಕೂಟದ ಸರ್ಕಾರ ಪತನವಾಗುವುದರೊಂದಿಗೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಭಾರೀ ಅನಾಹುತದಿಂದ ಪಾರಾದಂತಾಗಿದೆ. ಆದರೆ ದೇಶಕ್ಕೆ ಕೋಮುವಾದಿ ಶಕ್ತಿಗಳ ಅಪಾಯ ಇನ್ನೂ ತಪ್ಪಿದಂತಾಗಿಲ್ಲ. ಮರಳಿ ದಾಳಿಮಾಡಲು ಅವುಗಳು ಜನ ಬೆಂಬಲ ಗಿಟ್ಟಿಸಿಕೊಳ್ಳಲು ಹತಾಶ ಪ್ರಯತ್ನವನ್ನು ಮಾಡುವುದು ಖಚಿತ. ಅಂತಹ ಎಲ್ಲ ಕಾರಸ್ಥಾನಗಳನ್ನು ವಿಫಲಗೊಳಿಸುವ ಚುನಾವಣಾ ಯುದ್ಧಕ್ಕೆ ಸಿದ್ಧರಾಗಬೇಕೆಂದು ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳಿಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆನೀಡಿದೆ.

ಬಿಜೆಪಿಯು ಅನುಕಂಪದ ಅಲೆಯೊಂದು ತನ್ನ ನೆರವಿಗೆ ಬರುವುದೆಂದು ನಿರೀಕ್ಷಿಸುತ್ತಿದೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಪಿತೂರಿ ಮಾಡಿ ಒಳ್ಳೆಯ ಒಂದು ಸರ್ಕಾರವನ್ನು ಉರುಳಿಸಿವೆ ಎಂದು ಪ್ರಚಾರಮಾಡುತ್ತಿದೆ. ಕೇವಲ ಒಂದೇ ಒಂದು ಮತದ ಅಂತರದಿಂದ ಸರ್ಕಾರವನ್ನು ಅನಾವಶ್ಯಕವಾಗಿ ಕೆಡವಲಾಯಿತು ಎಂದು ಹೇಳಿ ಮತದಾರರ ಸಹಾನುಭೂತಿ ಪಡೆಯುವ ಪ್ರಯತ್ನ ಆರಂಭವಾಗಿದೆ. ಮಾಧ್ಯಮಗಳಲ್ಲಿ ಒಂದು ವಿಭಾಗವೂ ಸಹ ಇಂತಹ ಅಭಿಪ್ರಾಯಗಳಿಗೇ ಪ್ರಚಾರ ನೀಡುತ್ತಿವೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರದಲ್ಲಿ ಹೆಚ್ಚು ಕಾಲ ಮುಂದುವರೆದಷ್ಟು ದೇಶಕ್ಕೆ ಅಪಾಯ ಹೆಚ್ಚು ಎಂಬುದು ಸಿಪಿಐ(ಎಂ)ನ ನಿಲುಮೆಯಾಗಿದ್ದರೂ, ಸರ್ಕಾರದ ಪತನಕ್ಕೆ ಸಿಪಿಐ(ಎಂ) ಆಗಲಿ ಎಡಪಕ್ಷಗಳಾಗಲಿ ಕಾರಣವಲ್ಲ. ಬಿಜೆಪಿ ಸರ್ಕಾರ ಅದರ ಅಂತರಿಕ ವೈರುಧ್ಯಗಳಿಂದಾಗಿಯೇ ಕುಸಿದಿದೆ ಎಂಬುದನ್ನು ಜನತೆ ಮರೆಯಲು ಸಾಧ್ಯವಿಲ್ಲ. ಬಿಜೆಪಿಯ ಅತಿದೊಡ್ಡ ಮಿತ್ರಪಕ್ಷವಾದ ಎ.ಐ.ಡಿ.ಎಂ.ಕೆ. ತನ್ನ ಬೆಂಬಲವನ್ನು ಹಿಂತೆಗೆದು ಕೊಳ್ಳದಿದ್ದರೆ ಸರ್ಕಾರ ಬೀಳುತ್ತಿರಲಿಲ್ಲ ಎಂಬುದನ್ನು ಮರೆಮಾಚಲಾಗುತ್ತಿದೆ. ವ್ಯಾಪಕ ಕುದುರೆ ವ್ಯಾಪಾರದ ನಂತರವೂ ಬಿ.ಜೆ.ಪಿ.ಗೆ ಅವಶ್ಯಕ ಬೆಂಬಲವನ್ನು ಕ್ರೋಢೀಕರಿಸಲು, ಸಾಧ್ಯವಾಗಲಿಲ್ಲ. ಚೌತಾಲರ ಲೋಕದಳದ 4 ಜನ ಸಂಸತ್ ಸದಸ್ಯರನ್ನು ತಲಾ 2 ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಕಾಂಗ್ರೆಸ್ ಪಕ್ಷವು ತನಗೆ ಬದಲಿ ಸರ್ಕಾರ ರಚಿಸಲು ಸಾಧ್ಯವಾಗುವುದಿಲ್ಲ ಎಂದು ರಾಷ್ಟ್ರಪತಿಯವರಿಗೆ ಸ್ಪಷ್ಟಪಡಿಸಿದಾಗ ರಾಷ್ಟ್ರಪತಿಯವರು ಮತ್ತೆ ವಾಜಪೇಯಿಯವರನ್ನು ಕರೆದು ಸಂಸತ್ತಿನಲ್ಲಿ ಅವರನ್ನು ಬೆಂಬಲಿಸುವ ಸಂಸತ್ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆಯೇ ಎಂದು ವಿಚಾರಿಸಿದರೂ, ಡಿ.ಎಂ.ಕೆ. ಯಂತಹ ಪಕ್ಷಗಳು ಬಿಜೆಪಿಯ ನೆರವಿಗೆ ಬಂದರೂ ಬಹುಮತದ ಸಂಖ್ಯಾಬಲ ಮೂಡಲಿಲ್ಲ. ಬಿಜೆಪಿ ಸೋಲೊಪ್ಪಲೇ ಬೇಕಾಯಿತು.

ಬಿಜೆಪಿ ನೇತೃತ್ವದ ಈ 13 ತಿಂಗಳ ಸರ್ಕಾರ ಒಂದು ಒಳ್ಳೆಯ ಸರ್ಕಾರ ಆಗಿತ್ತು ಎಂಬ ಚಿತ್ರವನ್ನು ಮತದಾರರ ಮನಸ್ಸಿನಲ್ಲಿ ಮುದ್ರಿಸುವ ಪ್ರಯತ್ನ ನಡೆದಿದೆ. ಮನುಷ್ಯನಿಗೆ ಮರೆವು ಸಹಜವಾದದ್ದು. ಪ್ರಕೃತಿ ಸಹಜವಾದ ಈ ದೌರ್ಬಲ್ಯವನ್ನು ಬಳಸಿಕೊಳ್ಳುವ ತಂತ್ರ ಇದಾಗಿದೆ. ಬಿಜೆಪಿ ಸರ್ಕಾರದ ಒಂದು ವರ್ಷದ ವಿನಾಶಕಾರಿ ಆಡಳಿತವನ್ನು ಮರೆತು ಬಿಡುವುದು ಅಷ್ಟೇನು ಸುಲಭಸಾಧ್ಯವಲ್ಲ. ಜನಸಾಮಾನ್ಯರ ಮೇಲೆ ಬೆಲೆಏರಿಕೆಯ ಹೊರೆ ಹೇರಿ ಲಾಭಕೋರ ವ್ಯಾಪಾರಸ್ಥರ ಖಜಾನೆಗಳನ್ನು ತುಂಬಿಸಿದ್ದು, ಅಲ್ಪಸಂಖ್ಯಾತರ ಮೇಲೆ ಮುಖ್ಯವಾಗಿ ಕ್ರಿಶ್ಚಿಯನರ ಮೇಲೆ, ಅವರ ಮಿಶನರಿಗಳ ಮೇಲೆ ಹರಿಬಿಟ್ಟ ದಾಳಿ, ಸಂವಿಧಾನದ 356 ನೇ ಕಲಮಿನ ದುರುಪಯೋಗಮಾಡಿ ಬಿಹಾರ ಸರ್ಕಾರವನ್ನು ಕಿತ್ತೊಗೆದದ್ದು, ಭಾರತ ಶಿಕ್ಷಣ ಸೇವೆ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಆ ಮೂಲಕ ದೇಶದ ಶೈಕ್ಷಣಿಕ ಸಂಸ್ಥೆಗಳ ಎಲ್ಲ ಉನ್ನತ ಹುದ್ದೆಗಳಿಗೆ ಆರ್.ಎಸ್.ಎಸ್. ಬೆಂಬಲಿಗರನ್ನು ನೇಮಿಸುವ ಹುನ್ನಾರ, ವಿವಿಧ ಇಲಾಖೆಗಳ ಕಾರ್ಯದರ್ಶಿಗಳನ್ನು ಮತ್ತು ಉನ್ನತ ಅಧಿಕಾರಿಗಳನ್ನು ತಮಗೆ ಅನುಕೂಲವಾಗುವಂತೆ ವರ್ಗಾವಣೆಮಾಡಿದ್ದು, ಬಾಯಲ್ಲಿ ಸ್ವದೇಶಿ ಮಂತ್ರವನ್ನು ಪಠಿಸುತ್ತಾ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶಗಳನ್ನು ನೀಡುತಾ ಬಂದದ್ದು ದೇಶದ ಕೃಷಿ, ಕೈಗಾರಿಕೆಗಳನ್ನು ದಿವಾಳಿಗೆಬ್ಬಿಸಲು ಸಾವಿರಾರು ಗ್ರಾಹಕ ವಸ್ತುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವ ನೀತಿಯನ್ನು ಅಂಗೀಕರಿಸಿದ್ದು ಪೇಟೆಂಟ್ ಕಾಯ್ದೆ ತಿದ್ದುಪಡಿ ಮಾಡುವ ಮೂಲಕ ಔಷಧಿಗಳ ತೀವ್ರ ಬೆಲೆ ಏರಿಕೆಗೆ ಕಾರಣವಾದದ್ದು ಇದೆಲ್ಲವನ್ನು ಜನತೆ ಮರೆತು ಬಿಡುವುದು ಸಾಧ್ಯವೆ?

ಪೋಖ್ರಾನ್ ಬಾಂಬ್ ಸ್ಫೋಟ ಬಿಜೆಪಿಯ ಭಾರೀ ದೊಡ್ಡ ಸಾಧನೆ ಎಂದು ಇನ್ನೂ ಪ್ರಚಾರ ಮಾಡಲಾಗುತ್ತಿದೆ. ಈ ಪ್ರಯೋಗದ ನಂತರ ದೇಶ ಬಲಶಾಲಿಯಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ವಾಸ್ತವವಾಗಿ ಜಾಗತಿಕ ಮಟ್ಟದಲ್ಲಿ ದೇಶದ ಬಲ ಕುಂದಿದೆ, ದೇಶದ ಮೇಲೆ ಹೇರಲಾದ ದಿಗ್ಬಂಧನಗಳಿಂದಾಗಿ ಆರ್ಥಿಕ ಬಿಕ್ಕಟ್ಟು ತೀವ್ರವಾಗಿದೆ. ಅಮೇರಿಕದ ಒತ್ತಡಗಳು ಹೆಚ್ಚಾಗಿವೆ. ಅಂತಹ ವಿದೇಶಿ ಒತ್ತಡಗಳನ್ನು ಎದುರಿಸುವ ಶಕ್ತಿಯನ್ನು ಕಳೆದುಕೊಂಡು ಸಿಟಿಬಿಟಿ ಯಂತಹ ತಾರತಮ್ಯದ ಒಪ್ಪಂದಕ್ಕೆ ಭಾರತ ಸಹಿ ಹಾಕುವ ಪರಿಸ್ಥಿತಿ ಉಂಟಾಗಿದೆ.

ಬಿಜೆಪಿ ನೇತೃತ್ವದ ಸರ್ಕಾರದ ಕೈಯಲ್ಲಿ ದೇಶದ ರಕ್ಷಣಾ ವ್ಯವಸ್ಥೆಯೇ ಅಪಾಯದಲ್ಲಿದೆ ಎಂಬುದು ಎಡ್ಮಿರಲ್ ವಿಷ್ಣು ಭಾಗವತ್ ಅವರ ಉಚ್ಚಾಟನೆಯಿಂದ ಬಯಲಿಗೆ ಬಂತು. ರಕ್ಷಣಾ ಸಿಬ್ಬಂದಿಯ ಕರ್ತವ್ಯನಿಷ್ಠೆಯೊಂದಿಗೆ ಇವರು ಆಟವಾಡಲು ಪ್ರಯತ್ನ ಪಟ್ಟದ್ದು ದೊಡ್ಡ ದುರಂತವಾಗಿದೆ. ತಮ್ಮ ತಾಳಕ್ಕೆ ತಕ್ಕಂತೆ ಕುಣಿಯಲು ನಿರಾಕರಿಸುವ ಸೈನ್ಯದ ಹಿರಿಯ ಅಧಿಕಾರಿಗಳನ್ನು ಮನಸ್ಸಿಗೆ ಬಂದತೆ ಉಚ್ಚಾಟಿಸುವುದರಿಂದ ರಕ್ಷಣಾ ಸಿಬ್ಬಂದಿಯ ಮನೋಸ್ಥೈರ್ಯವನ್ನು ಕುಗ್ಗಿಸಿದಂತಾಗುತ್ತದೆ ಮತ್ತು ಅದರಿಂದ ದೇಶದ ರಕ್ಷಣಾ ವ್ಯವಸ್ಥೆಗೆ ಧಕ್ಕೆಯಾಗುತ್ತದೆ ಎಂಬ ಕಾಳಜಿ ಈ ಸರ್ಕಾರಕ್ಕೆ ಇರಲಿಲ್ಲ ಎಂಬುದು ಸಾಬೀತಾಗಿದೆ. ಸ್ವತಃ ರಕ್ಷಣಾ ಮಂತ್ರಿ ಜಾರ್ಜ್ ಫೆರ್ನಾಂಡಿಸ್ ಅವರ ಬಗ್ಗೆ ಹಲವು ಗಂಭೀರ ಸ್ವರೂಪದ ಪ್ರಶ್ನೆಗಳು ಬೆಳಕಿಗೆ ಬಂದಿದ್ದು ವಾಜಪೇಯಿ ಸರ್ಕಾರವು ಜಾರ್ಜ್ ಫೆರ್ನಾಂಡಿಸ್ ಅವರನ್ನು ಗಟ್ಟಿಯಾಗಿ ಬೆಂಬಲಿಸಿದ್ದು ಅನೇಕ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಪಾರ್ಲಿಮೆಂಟಿನಲ್ಲಿ ವಿವರವಾದ ಚರ್ಚೆಯಾಗಲು ಅವಕಾಶವಾಗಿದ್ದರೆ ಫೆರ್ನಾಂಡಿಸರ ನಿಜ ಬಣ್ಣ ಬಯಲಾಗುತ್ತಿತ್ತು.

ಬಿಜೆಪಿ ನೇತೃತ್ವದ ಸರ್ಕಾರ ಎಷ್ಟರ ಮಟ್ಟಿಗೆ ಭ್ರಷ್ಟಾಚಾರದಿಂದ ದೂರ ಇತ್ತು ಎಂಬುದನ್ನು ಹಣಕಾಸು ಸಚಿವರ ಸಲಹೆಗಾರ, ಬಿಜೆಪಿಯ ಹಿತೈಷಿ ಮೋಹನ್ ಗುರುಸ್ವಾಮಿ ಬಯಲಿಗೆಳೆದಿದ್ದಾರೆ. ಸುಮಾರು 5000 ಕೋಟಿ ರೂಪಾಯಿಗಳ ಹಗರಣಗಳಲ್ಲಿ ಅಡ್ವಾನಿ, ಜಸ್ವಂತ್ ಸಿಂಗ್, ಮಹಾಜನ್ ರಂತಹ ಪ್ರಮುಖರ ಮುಖಗಳನ್ನು ಅವರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಬಿಜೆಪಿ ಮಾತ್ರ ತನ್ನ ನೈತಿಕತೆಗೆ ಹೊಸ ವ್ಯಾಖ್ಯಾನ ನೀಡಲು ಹೊರಟಿದೆ. ಕತೆಕಟ್ಟುವುದರಲ್ಲಿ ಇವರು ಗೋಬೆಲನನ್ನು ಮೀರಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರವು ಅಂತರಿಕ ಕಿತ್ತಾಟದಿಂದಲೂ ನರಳುತ್ತಿತ್ತು ಅದ್ವಾನಿ ಮತ್ತು ವಾಜಪೇಯಿ ಬೆಂಬಲಿಗರ ನಡುವಿನ ವೈರುಧ್ಯಗಳು ಹೆಚ್ಚುತ್ತಲೇ ಇದ್ದವು. ಅನೇಕಸಲ ಪ್ರಯತ್ನ ಪಟ್ಟರೂ ಮಂತ್ರಿ ಮಂಡಲ ವಿಸ್ತಾರಣೆಗೆ ಕೈಹಾಕಲು ವಾಜಪೇಯಿಯವರಿಗೆ ಸಾಧ್ಯವಾಗಲೇ ಇಲ್ಲ. ಸರ್ಕಾರಕ್ಕೂ ಬಿ.ಎಂ.ಎಸ್. ಸ್ವದೇಶಿ ಜಾಗರಣ ಮಂಚ ಮೊದಲಾದ ಸಂಘಪರಿವಾರದ ಅಂಗಗಳಿಗೆ ಪರಸ್ಪರ ಹೊಂದಾಣಿಕೆ ಇರಲಿಲ್ಲ- ಮಮತ, ಸಮತ ಮತ್ತು ಜಯಲಲಿತರವರ ಎಳೆತ ಸೆಳೆತಗಳಿಂದ ಸರ್ಕಾರ ಬಿದ್ದುಹೋಗುವ ಹಂತಕ್ಕೆ ತಲಪಿತ್ತು. ವಿಷ್ಣು ಭಾಗವತ ಪ್ರಕರಣಕ್ಕೆ ಸಂಬಂಧಿಸಿ ಜಯಲಲಿತ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವದಾಗಿ ಘೋಷಿಸಿದಾಗ ಅಂತಿಮವಾಗಿ ಈ ರಾಜಕೀಯ ಬಿಕ್ಕಟ್ಟು ಸ್ಫೋಟಗೊಂಡಿತು.

ಬಿಜೆಪಿ ಮತ್ತು ಅದರ ಸಮಯಸಾಧಕ ಮಿತ್ರಪಕ್ಷಗಳ ಒಕ್ಕೂಟದ ಸರ್ಕಾರ ತನ್ನ ಭಾರದಿಂದಾಗಿ ಕುಸಿಯುವುದು ಖಚಿತವೆಂದು ಸಿಪಿಐ(ಎಂ) ಮೊದಲೇ ಕಂಡು ಕೊಂಡಿತ್ತು. ಹಾಗೇನಾದರೂ ಸರ್ಕಾರ ಬಿದ್ದುಹೋದರೆ ಜನತೆಯ ಮೇಲೆ ಇನ್ನೊಂದು ಚುನಾವಣೆಯನ್ನು ಹೇರುವ ಬದಲು ಒಂದು ಜಾತ್ಯಾತೀತ ಬದಲಿ ಸರ್ಕಾರ ರಚನೆಯಾಗುವಂತೆ ಶ್ರಮಿಸಲು ಪಕ್ಷ ನಿರ್ಧರಿಸಿತ್ತು. ಬಿಜೆಪಿಯ ನಂತರ ಅತಿ ದೊಡ್ಡ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷ ಸರ್ಕಾರ ರಚಿಸಲು ಮುಂದಾಗಬೇಕೆಂದೂ, ಕಾಂಗ್ರೆಸ್ ಸರ್ಕಾರಕ್ಕೆ ಸಿಪಿಐ(ಎಂ) ಹೊರಗಿನಿಂದ ವಿಷಯಾಧಾರಿತ ಬೆಂಬಲ ನೀಡುವುದೆಂದೂ ನಿರ್ಧರಿಸಲಾಗಿತ್ತು.

ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿಯನ್ನು ಅಧಿಕಾರದಿಂದ ಕೆಳಗೆ ಇಳಿಸುವ ಬಗ್ಗೆ ಆರಂಭದಲ್ಲಿ ಆಸಕ್ತಿ ಇರಲಿಲ್ಲ. ಚುನಾವಣೆಯಲ್ಲಿ ತಾನೇ ಬಹುಮತ ಸಂಪಾದಿಸಿ ಅಧಿಕಾರಕ್ಕೆ ಬಂದುಬಿಡಬಹುದೆಂಬ ಭ್ರಮೆ ಕಾಂಗ್ರೆಸಿನಲ್ಲಿ ಇನ್ನೂ ಆಳವಾಗಿರುವುದು ಅದರ ಗುಣವಾಗದ ಕಾಯಿಲೆ. ಸಮತಾ ಪಕ್ಷದಲ್ಲಿ ಒಡಕು, ಬಿಜು ಜನತಾ ದಳದಲ್ಲಿ ಭಿನ್ನಮತೀಯ ಬೆಳವಣಿಗೆ, ಅಕಾಲಿ ದಳದಲ್ಲಿ ಬಿಕ್ಕಟ್ಟು, ರಸಗೊಬ್ಬರದ ಸಬ್ಸಿಡಿ ಕಡಿತದ ವಿಷಯದಲ್ಲಿ ಬೆಂಬಲ ಹಿಂತೆಗೆದುಕೊಳ್ಳುವ ಚೌತಾಲರ ಬೆದರಿಕೆ, ಜಯಲಲಿತಾರು ತೀವ್ರಗೊಳಿಸಿದ ಒತ್ತಡ ಇತ್ಯಾದಿಗಳಿಂದ ವಾಜಪೇಯಿ ಸರ್ಕಾರದಲ್ಲಿ ಬಿರುಕು ಕಾಣಿಸಿಕೊಳ್ಳಲು ಆರಂಭವಾದಾಗಷ್ಟೇ ಕಾಂಗ್ರೆಸ್ ಕಾರ್ಯೋನ್ಮುಖವಾಗತೊಡಗಿತು,

ಈ ಹಂತದಲ್ಲಿ ಡಿ.ಎಂ.ಕೆ. ಪಕ್ಷವು ಬಿಜೆಪಿಯ ನೆರವಿಗೆ ಧಾವಿಸಿದ್ದು ಬದಲಿ ಸರ್ಕಾರ ರಚನೆಯ ಪ್ರಯತ್ನಕ್ಕೆ ಭಾರೀ ಪೆಟ್ಟು ಕೊಟ್ಟಿತು. ಡಿ.ಎಂ.ಕೆ.ಗೆ ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿ ಸ್ಥಾನಗಳ ಮೇಲೆ ಕಣ್ಣಿತ್ತು. ಮುಲಾಯಂ ಸಿಂಗ್ ಅಂತಹವರಿಗೂ ಮಂತ್ರಿಯಾಗಬೇಕಾಗಿತ್ತು. ಆದರೆ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರಚನೆಗೆ ಸಿದ್ಧವಿರಲಿಲ್ಲ. ಸಮಾಜವಾದಿ ಪಕ್ಷದೊಂದಿಗೆ ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಪಕ್ಷಗಳ ತಪ್ಪು ನಿಲುಮೆಯಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಅವಶ್ಯಕ ಬೆಂಬಲ ದೊರೆಯದಂತಾಗಿ ಕಾಂಗ್ರೆಸ್ಸಿಗೆ ಬದಲಿ ಸರ್ಕಾರ ರಚನೆ ಸಾಧ್ಯವಾಗಲಿಲ್ಲ. ಮುಲಾಯಂ ಸಿಂಗ್ ಅವರ ಹಟಮಾರಿ ಧೋರಣೆಯಿಂದಾಗಿ ದೇಶದ ಮೇಲೆ ದುಬಾರಿ ಮಧ್ಯಂತರ ಚುನಾವಣೆ ಹೇರಲ್ಪಟ್ಟಿತಲ್ಲದೆ ಬೆಂಬಲ ಕಳೆದುಕೊಂಡ ಬಿಜೆಪಿ ನೇತೃತ್ವದ ಸರ್ಕಾರ ಚುನಾವಣೆಯವರೆಗೂ ಮುಂದುವರೆಯುವಂತಾಯಿತು. ಕಾಂಗ್ರೆಸ್ ಪಕ್ಷಕ್ಕೆ ಸರ್ಕಾರ ರಚಿಸಲು ಸಾಧ್ಯವಾಗದಿದ್ದಾಗ ಬದಲಿ ಸರ್ಕಾರಕ್ಕೆ ಬೆಂಬಲ ನೀಡಲೂ ಅದು ಮುಂದಾಗದಿದ್ದದ್ದು ಈ ಪ್ರಯೋಗದ ವಿಫಲತೆಗೆ ಇನ್ನೊಂದು ಕಾರಣವಾಯಿತು.

ಈ ಮಧ್ಯದಲ್ಲಿ ಕಾಮ್ರೆಡ್ ಜ್ಯೋತಿಬಸು ಅವರು ಪ್ರಧಾನಿಯಾಗಬೇಕು ಎಂಬ ಮಾತು ಪ್ರಚಾರಕ್ಕೆ ಬಂತು. ಸಿಪಿಐ(ಎಂ) ಈ ಸೂಚನೆಗೆ ಸಮ್ಮತಿಸಿದೆ ಎಂದು ಸಹ ಪ್ರಚಾರಮಾಡಲಾಯಿತು. ಆದರೆ ಸಿಪಿಐ(ಎಂ) ಈ ಸಲ ಯಾವ ಹಂತದಲ್ಲೂ ಜ್ಯೋತಿ ಬಸು ಅವರ ಉಮೇದ್ವಾರಿಕೆಯ ಬಗ್ಗೆ ಚರ್ಚಿಸಿರಲಿಲ್ಲ. ಕಾಂಗ್ರೆಸ್ ಪಕ್ಷವೇ ಸರ್ಕಾರ ರಚಿಸಬೇಕೆಂದು ಸಿಪಿಐ(ಎಂ) ಮೊದಲಿನಿಂದಲೂ ನಿಲುಮೆತಾಳಿತ್ತು. ಪ್ರಧಾನ ಮಂತ್ರಿಯಾಗಲು, ಮಂತ್ರಿಗಳಾಗಲು ಹವಣಿಸುತ್ತಿದ್ದ ಮುಲಾಯಂ ಸಿಂಗ್, ಸುಬ್ರಮಣ್ಯಂಸ್ವಾಮಿ, ಜಯಲಲಿತಾ ಮೊದಲಾದ ಎಲ್ಲರೂ ಜ್ಯೋತಿಬಸು ಅವರ ಹೆಸರನ್ನು ಮುಂದೆಮಾಡಿ ಬದಲಿ ಸರ್ಕಾರ ರಚನೆಯಾಗುವ ಸಾಧ್ಯತೆಗೆ ಕಲ್ಲುಹಾಕಿದರು.

ಈಗಂತೂ ಚುನಾವಣೆ ಸಾರಲಾಗಿದೆ. ಆದರೆ ವಾಜಪೇಯಿ ನೇತೃತ್ವದ ಉಸ್ತುವಾರಿ ಸರ್ಕಾರ ಹದ್ದು ಮೀರಿ ವರ್ತಿಸುತ್ತಿದೆ. ಪಶ್ಚಿಮ ಬಂಗಾಲ ಮತ್ತು ಅರುಣಾಚಲ ಪ್ರದೇಶದ ರಾಜ್ಯಪಾಲರನ್ನು ಕಿತ್ತುಹಾಕಿರುವ ರೀತಿಯನ್ನು ಗಣನೆಗೆ ತೆಗೆದುಕೊಂಡರೆ ಅಪಾಯದ ಆಳ ಅಂದಾಜಾಗುತ್ತದೆ. ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳ ಎಡ ರಂಗ ಸರ್ಕಾರಗಳನ್ನು ಅಸ್ಥಿರಗೊಳಿಸಲು ರಾಜ್ಯಪಾಲ ಹುದ್ದೆಗಳನ್ನು ಬಳಸಿಕೊಳ್ಳಲು ಅದು ಹಿಂಜರಿಯದು. ಬಿಜೆಪಿಯ ಇಂತಹ ಕಾರಸ್ಥಾನಗಳನ್ನು ವಿರೋಧಿಸಿ ಸೋಲಿಸಲು ನಿರ್ಣಾಯಕ ಚುನಾವಣಾಯುದ್ಧಕ್ಕೆ ದೇಶದ ಎಲ್ಲ ಎಡ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ಸನ್ನದ್ಧರಾಗಬೇಕಾಗಿದೆ.

ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರೊಂದಿಗೆ ನಿಂತಿರುವ ಪಕ್ಷಗಳನ್ನು ಸೋಲಿಸುವುದು ಸಿಪಿಐ(ಎಂ) ನ ಪ್ರಮುಖ ಗುರಿಯಾಗಿದೆ. ಆದರೆ ಕಾಂಗ್ರೆಸ್ ವಿರುದ್ಧ ನಮ್ಮ ಹೋರಾಟವನ್ನು ಸಡಿಲು ಗೊಳಿಸುವುದು ಎಂದು ಇದರ ಅರ್ಥವಲ್ಲ. ಕಾಂಗ್ರೆಸಿನ ಜನವಿರೋಧಿ ಆರ್ಥಿಕ ಧೋರಣೆಗಳನ್ನು ಅದರ ಸಮಯ ಸಾಧಕ ನಿಲುಮೆಗಳನ್ನು ಜನರ ನಡುವೆ ಬಯಲಿಗೆಳೆಯುವ ಕಾರ್ಯ ಮುಂದುವರೆಯಲಿದೆ. ಆದರೆ ಕೆಲವು ರಾಜ್ಯಗಳಲ್ಲಿ ಬಿಜೆಪಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ನೇರವಾದ ಸ್ಪರ್ಧೆ ನಡೆಯುವಂತಿದ್ದರೆ ಬಿಜೆಪಿಯನ್ನು ಸೋಲಿಸುವ ಉದ್ದೇಶಕ್ಕಾಗಿ ಕಾಂಗ್ರೆಸಿಗೆ ಮತನೀಡುವಂತೆ ಮತದಾರರನ್ನು ಕೋರಲಾಗುವುದು. ಒಂದೊಂದು ರಾಜ್ಯದಲ್ಲಿ ಪರಿಸ್ಥಿತಿ ಒಂದೊಂದು ತರನಾಗಿರುತ್ತದೆ. ಕರ್ನಾಟಕದ ರಾಜಕೀಯ ಪರಿಸ್ಥಿತಿಯ ಕುರಿತು ಕರ್ನಾಟಕ ಸಿಪಿಐ(ಎಂ) ರಾಜ್ಯ ಸಮಿತಿ ನೀಡುವ ವರದಿಯ ಆಧಾರದಲ್ಲಿ ಕರ್ನಾಟಕಕ್ಕೆ ಪಕ್ಷದ ಚುನಾವಣಾ ತಂತ್ರವನ್ನು ರೂಪಿಸಲಾಗುವುದು. ಸಿಪಿಐ(ಎಂ)ನ ಬಲವನ್ನು ಹೆಚ್ಚಿಸುವುದು, ಎಡ ಪಕ್ಷಗಳ ಒಟ್ಟು ಬಲ ಹೆಚ್ಚಾಗುವಂತೆ ನೋಡಿಕೊಳ್ಳುವುದು, ತೃತೀಯ ಪರ್ಯಾಯ ರಂಗವನ್ನು ಮತದಾರರ ಮುಂದಿಟ್ಟು ಬೆಂಬಲ ಪಡೆಯುವುದು ಪಕ್ಷದ ಮುಂದಿರುವ ದೊಡ್ಡ ಜವಾಬ್ದಾರಿಯಾಗಿದೆ.

-ನಿತ್ಯಾನಂದ ಸ್ವಾಮಿ



ಪ್ರಾಣಿ ಪಕ್ಷಿಗಳಿಗೆ ಇರುವ ರಕ್ಷಣೆಯೂ ಕೃಷಿ ಕೂಲಿಕಾರರಿಗೆ ಇಲ್ಲ

- ಕಾಂ. ವಿಜಯರಾಘವನ್

ಸಮಯದ ಮಿತಿಯೇ ಇಲ್ಲದೇ, ಮಳೆ ಬಿಸಿಲೆನ್ನದೆ ದುಡಿಯುವ ಕೃಷಿ ಕೂಲಿಕಾರರು ಬದುಕಲು ಅಗತ್ಯವಾದ ಕನಿಷ್ಠ ಕೂಲಿಯಿಲ್ಲದೆ, ಸ್ವಂತ ಭೂಮಿಯಿಲ್ಲದೆ, ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾರೆ. ದೇಶದಲ್ಲಿ ಅವರಿಗೆ ಪ್ರಾಣಿ-ಪಕ್ಷಿಗಳಿಗೆ ಇರುವ ರಕ್ಷಣೆಯೂ ಇಲ್ಲ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯಸಭಾ ಸದಸ್ಯರೂ ಆದ ಕಾಂ. ವಿಜಯರಾಘವನ್ ಹೇಳಿದರು. ಅವರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 2ನೇ ರಾಜ್ಯ ಸಮ್ಮೇಳನದ ಅಂಗವಾಗಿ ಮೇ 8 ರಂದು ನಗರದ ಚಿಕ್ಕಲಾಲ್‌ಬಾಗಿನಲ್ಲಿ ನಡೆದ ಕೃಷಿಕೂಲಿಕಾರರ ಬೃಹತ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಕೃಷಿ ಕಾರ್ಮಿಕರು ಕಾರ್ಮಿಕ-ರೈತರು ಭಾಗವಹಿಸುವಂತಾದ ನಂತರವೇ ಹೋರಾಟವು ತೀವ್ರತೆಯನ್ನು ಪಡೆದುಕೊಂಡಿತು. 1957 ರಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಭೂಮಾಲೀಕರು ಕೃಷಿಕೂಲಿಕಾರರಿಗೆ ಕೆಲಸ ನಿರಾಕರಿಸುವುದರ ವಿರುದ್ಧ ಆಜ್ಞೆ ಹೊರಡಿಸಿದ ಹಿರಿಮೆ ಇ.ಎಂ.ಎಸ್. ನಂಬೂದರಿಪಾಡ್ ಸರಕಾರದ್ದು. ಆದರೆ ಕೃಷಿಕೂಲಿಕಾರರಿಗೆ ಕೇಂದ್ರ ಕಾನೂನು ಬರಬೇಕೆಂಬ ಬೇಡಿಕೆ 50 ವರ್ಷಗಳ ನಂತರವೂ ಜಾರಿಯಾಗಿಲ್ಲ. ಈ ಸಂಬಂಧ 7-8 ಪುಟಗಳ ತಿದ್ದುಪಡಿಗಳು 19 ವರ್ಷವಾದರೂ ಜಾರಿಗೆ ಬರದೆ, ನೆನೆಗುದಿಗೆ ಬಿದ್ದಿದೆ. ಕೃಷಿ ಕೂಲಿಕಾರರೆಂದರೆ ಕೇವಲ 'ಓಟು ಬ್ಯಾಂಕ್' ಎಂದು ಪರಿಗಣಿಸಲಾಗಿದೆ ಎಂದು ಅವರು ತಿಳಿಸಿದರು.

ಕೇರಳ ರಾಜ್ಯದಲ್ಲಿ ಕೃಷಿಕೂಲಿಕಾರರಿಗೆ 80-100-120 ವರೆಗೆ ದಿನಕ್ಕೆ ಕೂಲಿ ಇದೆ. ಭೂಸುಧಾರಣೆಯ ಮೂಲಕ ಲಕ್ಷಾಂತರ ಜಮೀನನ್ನು ಕೂಲಿಕಾರರಿಗೆ ಹಂಚಲಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಅಗತ್ಯ ವಸ್ತುಗಳನ್ನು ಪೂರೈಸಲಾಗುತ್ತಿದೆ. ಕೂಲಿಕಾರರ ಮೇಲೆ ಭೂ ಮಾಲಕ ದಬ್ಬಾಳಿಕೆಗೆ ಅವಕಾಶವಿಲ್ಲ, ಅಸ್ಪೃಶ್ಯತೆ ಕೂಡಾ ಆಚರಣೆಯಲ್ಲಿಲ್ಲ. ಇದನ್ನು ಹೋರಾಟದ ಮೂಲಕ ಸಾಧಿಸಲಾಗಿದೆ. ಕೇರಳದಲ್ಲಿ ಅಧಿಕಾರ ನಡೆಸಿದ ಎಡರಂಗ ಸರ್ಕಾರಗಳು ಇದಕ್ಕೆ ಪೂರಕವಾಗಿ ಕೆಲಸ ಮಾಡಿವೆ. ಆದರೆ ಕಾಂಗ್ರೆಸ್, ಬಿಜೆಪಿ ಮುಂತಾದ ಸರಕಾರಗಳು ಅಧಿಕಾರ ನಡೆಸಿದ ಕಡೆಗಳಲ್ಲಿ ಕೃಷಿಕೂಲಿಕಾರರಿಗೆ ಯಾವುದೇ ರಕ್ಷಣೆಯಿಲ್ಲ. ಮಹಾರಾಷ್ಟ್ರ, ಉತ್ತರ ಪ್ರದೇಶಗಳಂತಹ ಕಡೆ ಕೃಷಿಕೂಲಿಕಾರರ ಬದುಕು ಅತಂತ್ರವಾಗಿದೆ ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಶಾಸಕರೂ, ಸಿಪಿಐ(ಎಂ) ಮುಖಂಡರೂ ಆದ ಜಿ.ವಿ.ಶ್ರೀರಾಮರೆಡ್ಡಿ ರಾಜ್ಯದಲ್ಲಿ ಶೇ 40 ರಷ್ಟು ಕೂಲಿಕಾರರಿದ್ದಾರೆ, ದೇಶದಲ್ಲಿ ಸಂವಿಧಾನಕ್ಕೆ ಇದುವರೆಗೆ 82 ತಿದ್ದುಪಡಿ ಮಾಡಲಾಗಿದೆ, ಆದರೆ ಕೃಷಿಕೂಲಿಕಾರರಿಗಾಗಿ ಒಂದೇ ಒಂದು ತಿದ್ದುಪಡಿಯೂ ಇಲ್ಲ ಎಂದರು. ದೇಶದಲ್ಲಿ ಭೂ ಸುಧಾರಣೆಯ ಮೂಲಕ ಹಂಚಲಾಗಿರುವ 14 ಲಕ್ಷ ಹೆಕ್ಟೇರ್ ಭೂಮಿಯಲ್ಲಿ 11 ಲಕ್ಷ ಹೆಕ್ಟೇರ್‌ನಷ್ಟು ಕೇವಲ ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ ಹಂಚಲಾಗಿದೆ. ಕರ್ನಾಟಕದಲ್ಲಿ ಭೂ ಮಾಲಕರು, ಮನೆಯ ನಾಯಿ, ವಿದೇಶದಲ್ಲಿ ಓದುವ ಮಕ್ಕಳು ಮುಂತಾದ ಹೆಸರಿನಲ್ಲಿ ಜಮೀನು ತೋರಿಸಿ ಭೂಸುಧಾರಣೆ ಜಾರಿಯಾಗದಂತೆ ನೋಡಿಕೊಳ್ಳಲಾಗಿದೆ. ಹೀಗಾಗಿ 1972 ರಲ್ಲಿನ ದೇವರಾಜ ಅರಸ್ ಅವರ ಭೂಸುಧಾರಣೆ ಹೆಚ್ಚಿನದೇನನ್ನೂ ಸಾಧಿಸಿಲ್ಲ ಎಂದು ತಿಳಿಸಿದರು. ನಾಲೆ ಸೇತುವೆ ಮುಂತಾದ ಯೋಜನೆಗಳಲ್ಲಿ ಹಣ ಕೊಳ್ಳೆ ಹೊಡೆಯುವ ಇಂಜಿನಿಯರುಗಳ ಹಿತ ರಕ್ಷಣೆಗಾಗಿ, ಬಡ್ತಿ ಮೀಸಲಾತಿಯ ಪರ-ವಿರೋಧವಾಗಿ ಮಂತ್ರಿಗಳು, ಶಾಸಕರು, ರಾಜೀನಾಮೆ ಕೊಡುವುದಾಗಿ ಬೆದರಿಕೆ ಹಾಕುತ್ತಾರೆ. ಆದರೆ ಕಡು ಬಡವ ಕೃಷಿಕೂಲಿಕಾರರ ಪರವಾಗಿ ಕಾನೂನು ಜಾರಿಗೆ ತರಲು, ಕನಿಷ್ಠ ಕೂಲಿ ಕೊಡಿಸಲು ಏಕೆ ಮಂತ್ರಿಗಳು, ಶಾಸಕರು ರಾಜೀನಾಮೆ ಕೊಡುವುದಿಲ್ಲ? ಜನತಾದಳ ಸರ್ಕಾರ ಶ್ರೀಮಂತರ ಪರವಾಗಿ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದಾಗ ಏಕೆ ಪ್ರತಿಭಟಿಸಲಿಲ್ಲ ಎಂದು ಅವರು ಪ್ರಶ್ನಿಸಿದರು. ಕೃಷಿ ಕೂಲಿಕಾರರು ದಲಿತರು ಸ್ವಾಭಿಮಾನ- ಸ್ವಾವಲಂಬನೆ ಸಾಧಿಸಬೇಕಾದರೆ ಅವರ ಕೈಗೆ ಭೂಮಿ ಸಿಗಬೇಕು ಎಂದು ಅವರು ತಿಳಿಸಿದರು. ದೇಶದಲ್ಲಿ ಜಾರಿಗೆ ತರಲಾಗುತ್ತಿರುವ ಉದಾರೀಕರಣ ನೀತಿಯಿಂದ ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿದೆ, ಇದರಿಂದ ಕೃಷಿ ಕೂಲಿಕಾರರ ಕೂಲಿಯು ಕುಸಿಯುತ್ತಿದೆ ಎಂದು ಅವರು ತಿಳಿಸಿದರು.

ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ.ನಿತ್ಯಾನಂದ ಸ್ವಾಮಿಯವರು ಮಾತನಾಡಿ ಚಿಕ್ಕಮಗಳೂರು, ಹಾಸನ ಮುಂತಾದೆಡೆ ಪ್ಲಾಂಟೇಶನ್ ಮಾಲೀಕರು ಬೆಳೆಸಿರುವ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರಕ್ಕೆ ತುಂಬಾ ಆಸಕ್ತಿ ಇದೆ. ಆದರೆ ಬದುಕಿಗಾಗಿ ಅರಣ್ಯ ಭೂಮಿಯಲ್ಲಿ ಉಳುಮೆ ಮಾಡುವ ಬಡವರ ಭೂಮಿಯನ್ನು ಸಕ್ರಮಗೊಳಿಸುವುದು ಈ ಸರಕಾರಕ್ಕೆ ಬೇಕಿಲ್ಲ. ಕೃಷಿಕೂಲಿಕಾರರ ಮೇಲೆ ಅರಣ್ಯ ಇಲಾಖೆಯು ದಬ್ಬಾಳಿಕೆ ನಡೆಸುತ್ತಿದೆ. ಅರಣ್ಯ ಬೆಳೆಸುವ ಹೆಸರಿನಲ್ಲಿ ಲಕ್ಷಾಂತರ ರೂ ವೆಚ್ಚ ಮಾಡಲಾಗುತ್ತಿದೆ. ವಾಸ್ತವದಲ್ಲಿ ಅರಣ್ಯ ನಾಶದಲ್ಲಿ ಅರಣ್ಯ ಇಲಾಖೆಯೂ ಕೈಜೋಡಿಸಿದೆ. ಬಡವರು ಸಾಗುವಳಿ ಮಾಡುವ ಜಮೀನು ಅವರ ಕೈ ತಪ್ಪುತ್ತಿದೆ. ಇಂತಹ ನೀತಿಯ ವಿರುದ್ಧ ಈ ಹಿಂದೆ ಹೋರಾಟದಲ್ಲಿ ಸಾವಿರಾರು ಜನ ಜೈಲುವಾಸ ಅನುಭವಿಸಿದ್ದಾರೆ. ಕೂಲಿಕಾರರ ಈ ಹೋರಾಟವನ್ನು ತೀವ್ರಗೊಳಿಸುವ ಕುರಿತು ಸಮ್ಮೇಳನ ಚರ್ಚಿಸಿ ತೀರ್ಮಾನಿಸುತ್ತದೆ ಎಂದ ಅವರು ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದರು.

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯದ ಅಧ್ಯಕ್ಷರೂ ಆದ ಜಿ.ಎನ್.ನಾಗರಾಜ್‌ರವರು 200 ವರ್ಷಗಳ ಹಿಂದೆಯೇ ಟಿಪ್ಪು ಸುಲ್ತಾನ್ 'ಉಳುವವರಿಗೆ ಭೂಮಿ' ಎಂಬ ಘೋಷಣೆ ಕೊಟ್ಟಿದ್ದನು, ಆದರೆ ಇಂದೂ ಕೃಷಿಕೂಲಿಕಾರರು 'ಯಪ್ಪಾ', 'ಯವ್ವಾ' ಎಂದು ದೈನ್ಯದಿಂದ ಬದುಕಬೇಕಾದ ಪರಿಸ್ಥಿತಿ ಇದೆ ಎಂದರು. 50 ವರ್ಷಗಳ ನಂತರವೂ ದೇಶದಲ್ಲಿ ಕೃಷಿ ಕೂಲಿಕಾರರಿಗೆ ಕೇಂದ್ರ ಕಾನೂನಿಲ್ಲ ರಕ್ಷಣೆಯಿಲ್ಲ ಎಂದ ನಾಗರಾಜ್‌ರವರು ಕೃಷಿ ಕೂಲಿಕಾರರ ಹಕ್ಕುಗಳನ್ನು ರಕ್ಷಿಸಲು ಪ್ರತ್ಯೇಕ ಇಲಾಖೆಯನ್ನು ಸರಕಾರ ರಚಿಸಬೇಕು, ಸಮಗ್ರ ಭೂಸುಧಾರಣೆ ಜಾರಿಗೆ ತರಬೇಕು, ವಸತಿ-ಶಿಕ್ಷಣ-ಆರೋಗ್ಯ ಸೌಲಭ್ಯ ಒದಗಿಸಬೇಕು, ಕೃಷಿಕೂಲಿಕಾರರಿಗೆ ನಿವೃತ್ತಿ ವೇತನ ಜೀವನಕ್ಕೆ ಭದ್ರತೆ ಒದಗಿಸಬೇಕೆಂದು ಆಗ್ರಹಿಸಿದರು. ಜಾತಿ ಮತಗಳ ಹೆಸರಿನಲ್ಲಿ ಒಡಕು ಕೃಷಿಕೂಲಿಕಾರರ ಬದುಕಿಗೆ ಮಾರಕ ಎಂದು ಅವರು ಈ ಸಂದರ್ಭದಲ್ಲಿ ಎಚ್ಚರಿಸಿದರು.

ಕೃಷಿಕೂಲಿಕಾರರ ಸಂಘದ ಮುಖಂಡರಾದ ಚಂದ್ರಪ್ಪ ಹೊಸ್ಕೆರಾ ವಂದಿಸಿದರು. ಪುಟ್ಟಮಾದು ವಂದಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಾವಿರಾರು ಜನ ಕೃಷಿಕೂಲಿಕಾರರು ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಸ್ಪೃಶ್ಯತೆ ಮತ್ತು ಜಾತಿಭೇದ ವಿರುದ್ಧ ರಾಜ್ಯ ಸಮಾವೇಶ

ಮಸಣಕ್ಕೂ ಎರಡು ರಸ್ತೆಗಳು - ಹೆಣದೊಂದಿಗೂ ಅಸ್ಪೃಶ್ಯತೆ

ಆಂಧ್ರ ಪ್ರದೇಶದಲ್ಲಿ ದಲಿತರು ಹಳ್ಳಿ ರಸ್ತೆಗಳಲ್ಲಿ ಸೈಕಲ್ ಮೇಲೆ ಹೋಗುವಂತಿಲ್ಲ. ಯಾಕೆ, ಚಪ್ಪಲಿ ಹಾಕಿಕೊಂಡು ಹೋಗುವಂತೂ ಇಲ್ಲ. ಪೆರಿಯಾರ್ ರಂತಹ ಮಹಾನ್ ನಾಯಕರು ಜಾತಿಭೇದದ ವಿರುದ್ಧ ಶತಮಾನದ ಆದಿಯಲ್ಲೇ ಹೋರಾಟ ನಡೆಸಿದ ತಮಿಳುನಾಡಿನಲ್ಲೂ ಇವತ್ತು ಹಲವು ಹಳ್ಳಿಗಳಲ್ಲಿ ಎರಡು ಹಾದಿಗಳಿವೆಯಂತೆ ಮಸಣಕ್ಕೆ-ಒಂದು ಸವರ್ಣೀಯರಿಗೆ, ಇನ್ನೊಂದು ದಲಿತರಿಗೆ ಅಸ್ಪೃಶ್ಯರಿಗೆ-ಅಂದರೆ ಸತ್ತ ಹೆಣದೊಂದಿಗೂ ಅಸ್ಪೃಶ್ಯತೆ ಆಚರಿಸುತ್ತಾರಂತೆ. ಹಳ್ಳಿ ಬಾವಿಗಳಲ್ಲಿ ದಲಿತರು ನೀರು ಸೇದುವಂತಿಲ್ಲ, ಹಳ್ಳಿ ತೋಟಗಳಲ್ಲಿ ದಲಿತರಿಗೆ ಪ್ರತ್ಯೇಕ ಗ್ಲಾಸು. ಅದನ್ನು ಅವರೇ ತೊಳೆದುಕೊಳ್ಳಬೇಕು. ಹಳ್ಳಿ ದೇವರಿಗೆ ತಮ್ಮಟೆ ಬಾರಿಸುವ ದಲಿತರ ಕೇರಿಗೆ ದೇವರು ಬರುವುದಿಲ್ಲ, ದೇವರು ಅಸ್ಪೃಶ್ಯತೆ ಆಚರಿಸುತ್ತಾನೆ. ಬಾವಿಗಳಿಂದ ಬೋರ್‌ವೆಲ್‌ಗಳತ್ತ ಸಾಗಿರುವ ಹಳ್ಳಿಗಳಲ್ಲಿ ಬೋರ್‌ವೆಲ್ ದಲಿತರ ಕೇರಿಗಳಲ್ಲಿ ಬಿದ್ದಾಗಲೂ, ಬೇರೆ ಬಾವಿಗಳು ಬತ್ತಿದಾಗಲೂ ಬೋರ್‌ವೆಲ್‌ನ್ನು 'ಶುದ್ಧಿಕರಿಸಿ' ನೀರು ತೆಗೆದುಕೊಳ್ಳುವ ಸವರ್ಣೀಯರು, ಸವರ್ಣೀಯರೆಂದು ತಮ್ಮ ಜಾತಿ ಬಗ್ಗೆ ಸುಳ್ಳುಹೇಳಿ ಬೆಂಗಳೂರಿನಂತಹ ನಗರಗಳಲ್ಲಿ ಬಾಡಿಗೆ ಮನೆ ಪಡೆದು ಬದುಕುತ್ತಿರುವ ಲಕ್ಷಾಂತರ ದಲಿತರು, ತಮಿಳುನಾಡಿನ ಕೆಲವು ಬಾಲವಾಡಿಗಳಲ್ಲಿ ದಲಿತ ಮಕ್ಕಳ ಮಲ ಮೂತ್ರ ತೊಳೆಯಲು ನಿರಾಕರಿಸುವ ಆಯಾ.

ಇಡೀ ದೇಶವೇ ಜೈಲು!

ಇದು ಸ್ವಾತಂತ್ರ್ಯ ಬಂದು 51 ವರ್ಷಗಳ ನಂತರ, ಅಸ್ಪೃಶ್ಯತೆ ನಿವಾರಣಾ ಕಾನೂನು (1955) ಪಾಸುಮಾಡಿ 45 ವರ್ಷಗಳ ನಂತರ ನಮ್ಮ ದೇಶದಲ್ಲಿ ಇನ್ನೂ ವ್ಯಾಪಕವಾಗಿ ಪ್ರಚಲಿತವಿರುವ ಅಸ್ಪೃಶ್ಯತೆಯ ಚಿತ್ರ. ಈ ಚಿತ್ರ ಮೂಡಿ ಬಂದದ್ದು ಮೇ 7 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಬೆಂಗಳೂರಿನ ಸೆನೆಟ್ ಹಾಲಿನಲ್ಲಿ ಹಮ್ಮಿಕೊಂಡಿದ್ದ ವಿಶಿಷ್ಟ ರಾಜ್ಯಮಟ್ಟದ ಸಮಾವೇಶದಲ್ಲಿ. ಸಮಾವೇಶ ಅಸ್ಪೃಶ್ಯತೆ ಮತ್ತು ಜಾತಿ ಭೇದದ ವಿರುದ್ಧವಾಗಿತ್ತು.

1955ರ ಕಾನೂನನ್ನು ನಿಜವಾಗಿಯೂ ಜಾರಿ ಮಾಡಿದರೆ ಇವತ್ತು ಅದರಿಂದ 70 ಕೋಟಿ ಜನರನ್ನು ಜೈಲಿಗೆ ಹಾಕಬೇಕಿತ್ತು. ಇಡೀ ದೇಶವೇ ಒಂದು ಜೈಲಾದೀತು. ಅಷ್ಟರಮಟ್ಟಿಗೆ ಸವರ್ಣೀಯರು ಒಂದಲ್ಲ ಒಂದು ರೂಪದಲ್ಲಿ ಅಸ್ಪೃಶ್ಯತೆ ಆಚರಿಸುತ್ತಿದ್ದಾರೆ ಎಂದು ಒಬ್ಬರ ಉದ್ಗಾರ.

ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದವರು ಜಾತಿಬೇಧ ಮತ್ತು ಅಸ್ಪೃಶ್ಯತೆಯ ವಿರುದ್ಧ ಭಾರತದಲ್ಲಿ ಹುಟ್ಟಿಕೊಂಡ ಚಳುವಳಿಗಳ ಮೂರು ಧಾರೆಗಳಿಗೆ - ದಲಿತ, ಸಮಾಜವಾದಿ, ಕಮ್ಯುನಿಷ್ಟ್ - ಸೇರಿದವರು. ಚಂದ್ರಶೇಖರ್ ಪಾಟೀಲ, ಎಲ್. ಹನುಮಂತಯ್ಯ ಸಮಾಜವಾದಿ, ದಲಿತ ಚಳುವಳಿಗೆ ಸೇರಿದವರಾದರೆ, ವಿಜಯರಾಘವನ್, ತಿರುವಾಕ್ಕರಸು, ನಿತ್ಯಾನಂದಸ್ವಾಮಿ, ಜಿ.ಎನ್. ನಾಗರಾಜ್ ಕಮ್ಯುನಿಷ್ಟ ಚಳುವಳಿಯಲ್ಲಿ ಮೂಡಿ ಬಂದ ನಾಯಕರು.

ಇಂದಿನ ಸ್ಥಿತಿಯಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಡುವುದು ಹೇಗೆ ಇದರ ಬಗ್ಗೆ ಸಮಾವೇಶದಲ್ಲಿ ಮಾತನಾಡಿದವರು ಜಿಜ್ಞಾಸೆ ನಡೆಸಿದರು. ಗಾಂಧೀಜಿ ಮತ್ತು ಅವರ ನಾಯಕತ್ವದ ಆಳುವ ವರ್ಗಗಳು ಅಸ್ಪೃಶ್ಯತೆ ಕೆಟ್ಟದು. ಆದರೆ ಜಾತಿ ಪದ್ಧತಿಯಲ್ಲಿ ಅಂತಹ ದೊಡ್ಡ ತಪ್ಪೇನಿಲ್ಲ ಎಂಬ ಸೈದ್ಧಾಂತಿಕ ಗೋಜಲು ಇಂದಿನ ಪರಿಸ್ಥಿತಿಗೆ ಕಾರಣವಾಗಿವೆ ಎಂದು ಎಲ್ಲರೂ ಗಮನಿಸಿದರು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯ ರಾಘವನ್ ಇದಕ್ಕೆ ಸಮಗ್ರ ಉತ್ತರ ನೀಡಿದರು. ಕಮ್ಯುನಿಷ್ಟ್ ಚಳುವಳಿಯ ನಾಯಕತ್ವದಲ್ಲಿರುವ ಕೇರಳ, ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ ಮಾತ್ರ ನಿಜವಾಗಿಯೂ ಅಸ್ಪೃಶ್ಯತೆಯನ್ನು ತೊಡೆದುಹಾಕಿ ದಲಿತರು, ಆದಿವಾಸಿಗಳು ತಲೆಎತ್ತಿ ಗೌರವವಾಗಿ ಮರ್ಯಾದೆಯಿಂದ ಬದುಕಲು ಸಾಧ್ಯವಾಗಿರುವುದು, ಕೇರಳದ ಹಾದಿಯೇ ಅಸ್ಪೃಶ್ಯತೆ ಜಾತಿಭೇಧದ ವಿರುದ್ಧ ಹೋರಾಡಲು ಇರುವ ದಾರಿ ಎಂದರು ವಿಜಯ ರಾಘವನ್.

ಕೇರಳದ ಹಾದಿ

ಕೇರಳದ ಚಳುವಳಿಯ ಮೂರು ಹಂತಗಳ ಬಗ್ಗೆ ವಿವರವಾಗಿ ತಿಳಿಸಿದರು ವಿಜಯರಾಘವನ್. 1900ರಲ್ಲಿ ವಿವೇಕಾನಂದ ಕೇರಳಕ್ಕೆ ಭೇಟಿ ಇಟ್ಟಾಗ ಇದು 'ಹುಚ್ಚಾಸ್ಪತ್ರೆ' ಎಂದು ಕರೆದಿದ್ದರು. ಬ್ರಾಹ್ಮಣನಿಗೆ ನಾಯರ್ 12 ಅಡಿ ದೂರದಿಂದ ನಮಸ್ಕಾರ ಮಾಡಬೇಕು. ಈಳವ 24 ಅಡಿ ದೂರದಲ್ಲಿರಬೇಕು, ದಲಿತನಂತೂ ಬ್ರಾಹ್ಮಣನ

ಪುಟ 10 ನೋಡಿ



ಸಮಾವೇಶದ ವೇದಿಕೆ

ಸಮಾವೇಶದ ನಿರ್ಣಯ

ಅಸ್ಪೃಶ್ಯತೆಯ ವಿರುದ್ಧ ಆಗಸ್ಟ್ 15 ರಂದು ಸಾಮೂಹಿಕ ಧರಣಿ- ಸತ್ಯಾಗ್ರಹ


ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅಮಾನವೀಯ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವ ಬಗ್ಗೆ ಬೆಂಗಳೂರಿನಲ್ಲಿ ಮೇ 7 ರಿಂದ 9 ರ ನಡೆಯುತ್ತಿರುವ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ 2ನೇ ರಾಜ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿರುವ ಅಸ್ಪೃಶ್ಯತಾ ವಿರೋಧಿ ಸಮಾವೇಶವು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಜಾತಿ ಪದ್ಧತಿಯ ವಿರುದ್ಧ ಹೋರಾಡಿದ ಸಮಾಜಸುಧಾರಕ ಬಸವಣ್ಣ, ಕನಕದಾಸರ ನಾಡಿನಲ್ಲಿ ಇನ್ನೂ ಈ ಅನಿಷ್ಟ ಪದ್ಧತಿ ಉಳಿದುಕೊಂಡು ಬಂದಿದೆ ಎಂದರೆ ಪ್ರತಿಗಾಮಿ ಪಾಳೆಗಾರಿ ವ್ಯವಸ್ಥೆಯ ಬೇರುಗಳು ಇನ್ನೂ ಗಟ್ಟಿಯಾಗಿಯೇ ಇವೆ ಎಂಬುದನ್ನು ತೋರಿಸುತ್ತದೆ.

ಸ್ವಾತಂತ್ರ್ಯ ಸಿಕ್ಕಿ 51 ವರ್ಷಗಳು ಕಳೆದರೂ ರಾಷ್ಟ್ರೀಯ ಹೋರಾಟದ ಪ್ರಮುಖ ಆಶಯಗಳಲ್ಲಿ ಒಂದಾದ ಅಸ್ಪೃಶ್ಯತೆಯ ನಿರ್ಮೂಲನೆ ಇನ್ನೂ ಸಾಧ್ಯವಾಗದಿರುವುದು ನಮ್ಮ ಆಳುವ ವರ್ಗಗಳು ನಮ್ಮ ದಲಿತ ಸಮುದಾಯಗಳಿಗೆ ಮಾಡಿರುವ ಅಕ್ಷಮ್ಯ ದ್ರೋಹವಾಗಿದೆ. ಸ್ವಾತಂತ್ರ್ಯ ಚಳುವಳಿಯ ಆರಂಭದಲ್ಲಿ ಮೇಲ್ವರ್ಗಗಳ, ಮೇಲ್ಜಾತಿಗಳ ಕೆಲವೇ ಕೆಲವು ವ್ಯಕ್ತಿಗಳ ಚಳುವಳಿಯಾಗಿತ್ತು. ಜನಸಾಮಾನ್ಯರು ಈ ಚಳುವಳಿಯಿಂದ ದೂರ ಉಳಿದಿದ್ದರು. ಅಸ್ಪೃಶ್ಯತಾ ನಿವಾರಣೆಯಂತಹ ಜ್ವಲಂತ ಪ್ರಶ್ನೆಗಳನ್ನು ಚಳುವಳಿಯ ಪ್ರಮುಖ ಬೇಡಿಕೆಗಳಲ್ಲಿ ಸೇರಿಸಿಕೊಂಡಾಗಲೇ ರಾಷ್ಟ್ರೀಯ ಆಂದೋಲನವು ಜನಸಾಮಾನ್ಯರನ್ನು ಆಕರ್ಷಿಸಲಾರಂಭಿಸಿತು. ಅಂದು ದಲಿತರಿಗೆ ದೇವಾಲಯಗಳಲ್ಲಿ ಪ್ರವೇಶಿಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿ ನಡೆದ ಚಳುವಳಿಗಳು ರಾಷ್ಟ್ರೀಯ ಚಳುವಳಿಯನ್ನು ಬಲಪಡಿಸುವಂತಾಯಿತು ಎಂಬುದು ಗಮನಾರ್ಹವಾಗಿದೆ. ಆದರೆ ಸ್ವಾತಂತ್ರ್ಯ ಸಿಕ್ಕ ಮೇಲೆ ಅಧಿಕಾರಕ್ಕೆ ಬಂದ ಭೂಮಾಲಕ - ಬಂಡವಾಳಶಾಹಿ ಶಕ್ತಿಗಳು, ಕೊಟ್ಟ ಮಾತಿನಂತೆ ನಡೆಯದೆ ಸ್ವಾತಂತ್ರ್ಯ ಆಂದೋಲನದ ಮೌಲ್ಯಗಳನ್ನು ಗಾಳಿಗೆ ತೂರಿವೆ. ಶೋಷಿತ ವರ್ಗಗಳ ಕನಸುಗಳು ನುಚ್ಚು ನೂರಾಗಿವೆ.

ಕರ್ನಾಟಕದಲ್ಲಿ ಏಕೀಕರಣದ ನಂತರ ಕನ್ನಡಿಗರೆಲ್ಲರು ಒಂದು ರಾಜ್ಯದೊಳಗಿರುವಂತಾಗಲು ಸಾಧ್ಯವಾದರೂ ಕನ್ನಡಿಗರನ್ನು ಒಡೆದು ನಿಂತಿರುವ ಈ ಕ್ರೂರ ಜಾತಿ ಪದ್ಧತಿಯನ್ನು ಹೊಡೆದು ಹಾಕಲು ಸಾಧ್ಯವಾಗಿಲ್ಲ-ಕನ್ನಡಿಗರು ನಾವೆಲ್ಲರು ಒಂದು ಎಂದು ಸ್ವಾಭಿಮಾನದಿಂದ ಹೇಳಿಕೊಳ್ಳುವ ನಾವುಗಳು ನಮ್ಮ ನಮ್ಮ ಜಾತಿ, ವಿಷಯ ಬಂದಾಗ ಪರಸ್ಪರ ಮುಟ್ಟಿಸಿಕೊಳ್ಳದೆ ಪರಸ್ಪರ ಬೆರೆತುಕೊಳ್ಳದೆ ಪರಸ್ಪರ ಪರಕೀಯರಾಗುತ್ತೇವೆ. ನಮ್ಮ ಕೆಲವು ಮಠಮಂದಿರಗಳು ಮತ್ತು ಪೀಠಾಧಿಪತಿಗಳು ಮನುಷ್ಯ ಮನುಷ್ಯರನ್ನು ಒಟ್ಟಿಗೆ ಬೆಸೆಯುವ ಕಾರ್ಯಕ್ಕೆ ನೆರವಾಗುವ ಬದಲು ಜಾತಿ ಆಧಾರಿತ ಸಮಾಜ ಪದ್ಧತಿಯನ್ನು ಗಟ್ಟಿಗೊಳಿಸುವುದರಲ್ಲಿ ನಿರತರಾಗಿದ್ದಾರೆ.

ಕರ್ನಾಟಕದಲ್ಲಿ ಅನೇಕ ಪಕ್ಷಗಳ ಅನೇಕ ಸರ್ಕಾರಗಳು ಬಂದು ಹೋದವು. ಇಲ್ಲಿಯವರೆಗೆ ಯಾವ ಸರ್ಕಾರವೂ ಅಸ್ಪೃಶ್ಯತೆಯ ನಿವಾರಣೆಗೆ ಯಾವುದೇ ದೃಢವಾದ ಕ್ರಮಗಳನ್ನು ಕೈಗೊಂಡಿಲ್ಲ. ಸರ್ಕಾರ ಯಾವುದೇ ಪಕ್ಷದ್ದು ಆಗಿದ್ದರು ಅ

ಪುಟ 10 ನೋಡಿ



ಕೃಷಿ ಕೂಲಿಕಾರರ 2ನೇ ರಾಜ್ಯ

ಬದುಕಿನ ಭದ್ರತೆಗಾಗಿ ಸಮಗ್ರ ಕಾನೂನು

ವರ್ಷವಿಡೀ ಕೆಲಸವಿಲ್ಲದೆ, ಕೆಲಸಕ್ಕೆ ತಕ್ಕ ಕೂಲಿ ಇಲ್ಲದೆ, ಪಶುಪಕ್ಷಿಗಳಿಗಿರುವಷ್ಟೂ ರಕ್ಷಣೆ ಇಲ್ಲದೆ ಬದುಕುತ್ತಿರುವ ಕೋಟಿಗಟ್ಟಲೆ ಕೃಷಿಕೂಲಿಕಾರರ ಬದುಕಿನಲ್ಲಿ ಬದಲಾವಣೆ ತರಬಲ್ಲ, ಅವರ ಬದುಕಿಗೊಂದು ಅರ್ಥ ನೀಡಬಲ್ಲ ಸಮಗ್ರ ಕಾನೂನೊಂದನ್ನು ಜಾರಿಗೆ ತರಬೇಕೆಂದು ಮೇ 7 ರಿಂದ 9ರ ವರೆಗೆ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 2ನೇ ರಾಜ್ಯ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ. ದೇಶಕ್ಕೆ ಬೇಕಾಗುವ ದವಸದಾನ್ಯಗಳನ್ನು, ಕೈಗಾರಿಕೆಗಳಿಗೆ ಬೇಕಾಗುವ ಕೃಷಿ ಆಧಾರಿತ ಕಚ್ಚಾ ಸರಕುಗಳನ್ನು ಉತ್ಪಾದಿಸುವ ಕಾರ್ಯದಲ್ಲಿ ನಿರತರಾಗಿದ್ದರೂ ಕೈಗಾರಿಕಾ ಕಾರ್ಮಿಕರು ಪಡೆಯುವ ಎಲ್ಲ ಕಾನೂನು ಬದ್ಧ ಸೌಲಭ್ಯಗಳಿಂದ ಕೃಷಿ ಕೂಲಿಕಾರರು ವಂಚಿತರಾಗಿರುತ್ತಾರೆ. ಗ್ರಾಮೀಣ ಕೃಷಿ ಕೂಲಿಕಾರರು ಕಾರ್ಮಿಕ ವರ್ಗದ ಒಂದು ಅವಿಭಾಜ್ಯ ಅಂಗವಾಗಿದ್ದರೂ ಅವರು ಯಾವುದೇ ಒಬ್ಬ ಮಾಲೀಕನ ಅಡಿಯಲ್ಲಿ ಕಾಯಂ ಕೆಲಸ ಮಾಡುವುದಿಲ್ಲ ಎಂಬ ಕಾರಣಕ್ಕಾಗಿ ಅವರಿಗೆ ಕನಿಷ್ಠ ಕೂಲಿ, ಕೆಲಸದ ಭದ್ರತೆ, ಅಪಘಾತ ಪರಿಹಾರ, ವೃದ್ಧಾಪ್ಯ ವೇತನ ಮೊದಲಾದ ಕಾರ್ಮಿಕ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಕೃಷಿ ಕೂಲಿಕಾರರಿಗಾಗಿ ಸಮಗ್ರ ಕಾನೂನೊಂದನ್ನು ಕೇಂದ್ರ ಸರ್ಕಾರ ಜಾರಿಗೆ ತರುವಂತಾದರೆ ಮಾತ್ರ ಕೃಷಿ ಕೂಲಿಕಾರರಿಗೂ ಕಾರ್ಮಿಕ ಕಾಯ್ದೆಗಳ ಪ್ರಯೋಜನ ಪಡೆಯಲು ಸಾಧ್ಯ. ನಿಗದಿತ ಕೆಲಸದ ಅವಧಿ, ಕೆಲಸದ ದಾಖಲಾತಿ, ಸಂಬಳಸಹಿತದ ರಜೆಗಳು, ಭತ್ಯೆ ಸಹಿತದ ಹೆರಿಗೆ ರಜೆ, ವೈದ್ಯಕೀಯ ನೆರವು, ಸಾಲ ಸೌಲಭ್ಯ, ನಿವೃತ್ತಿ ವೇತನ ಇತ್ಯಾದಿ ಹಕ್ಕುಗಳನ್ನು ಒಳಗೊಂಡ ಸಮಗ್ರ ಕಾನೂನು ಜಾರಿಗೆ ತರಬೇಕೆಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಹೋರಾಟ ಮಾಡುತ್ತಾ ಇದೆ. ಸಂಯುಕ್ತ ರಂಗದ ಸರ್ಕಾರ ಇಂತಹ ಕಾನೂನೊಂದನ್ನು ರಚಿಸಲು ಉತ್ಸುಕತೆ ತೋರಿತ್ತು. ಆದರೆ ಆದರ ನಂತರ ಅಧಿಕಾರಕ್ಕೆ ಬಂದ ಬಿ.ಜೆ.ಪಿ. ಸರ್ಕಾರವು ಕೃಷಿ ಕೂಲಿಕಾರರಿಗೆ ಅಂತಹ ಕಾನೂನಿನ ಅವಶ್ಯಕತೆ ಇಲ್ಲವೆಂದು ಕೃಷಿ ಕೂಲಿಕಾರರ ಹಿತಕ್ಕೆ ವಿರುದ್ಧವಾದ ನಿಲುವು ತಾಳಿತು. ಆದರೆ ಕೇರಳದ ಸಿ.ಪಿ.ಐ.(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರ ಇಂತಹ ಕಾನೂನನ್ನು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಜಾರಿಗೆ ತಂದು ಅಂತಹ ಕಾನೂನಿಗಾಗಿ ಹೋರಾಡುತ್ತಾ ಬಂದಿದ್ದ ಕೇರಳದ ಕೃಷಿ ಕೂಲಿಕಾರರ ಬದುಕಿಗೆ ಅಷ್ಟರ ಮಟ್ಟಿಗೆ ನೆಮ್ಮದಿ ದೊರಕಿಸಿದೆ. **ಕೇರಳದ ಕೃಷಿ ಕೂಲಿಕಾರರು ತುಳಿದ ಹಾದಿಯಲ್ಲಿಯೇ ನಡೆದು ಕರ್ನಾಟಕದಲ್ಲಿಯೂ ಕೂಲಿಕಾರರ ಬಾಳ ಕತ್ತಲೆಯನ್ನು ನೀಗಿಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಹೋರಾಡುವುದೆಂದು ಸಮ್ಮೇಳನವು ದೃಢ ನಿರ್ಧಾರ ಮಾಡಿದೆ.**

ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಕೋಲಾರ, ಮಂಡ್ಯ, ಹಾವೇರಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಂದ ಒಟ್ಟು 90 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ರಾಜ್ಯದಲ್ಲಿ ಕೃಷಿ ಕೂಲಿಕಾರರನ್ನು ಸಂಘಟಿಸಲು ಮೊಟ್ಟಮೊದಲು ರಾಜ್ಯಾದ್ಯಂತ ಸುತ್ತಾಡಿದ ತಾತ್ಗುಣಿ ಎಸ್ಟೇಟ್ ಹೋರಾಟದ ಖ್ಯಾತಿಯ ಕಾಮ್ರೆಡ್ ಪಿ. ಜಗನ್ನಾಥ ಕೃಷಿ ಕೂಲಿಕಾರರ ಸಂಘದ ಕೆಂಪು ಭಾವುಟವನ್ನು ಏರಿಸುವುದರೊಂದಿಗೆ "ಪಿ. ರಾಮಚಂದ್ರ ರಾವ್ ವೇದಿಕೆ" ಯಲ್ಲಿ ಸಮ್ಮೇಳನ ಆರಂಭವಾಯಿತು.

ಸಂಗಾತಿಗಳಾದ ನಿತ್ಯಾನಂದಸ್ವಾಮಿ, ಬಾಳಪ, ಯಲ್ಲಪ್ಪ ಮತ್ತು ಘಮನೆವ್ವ ಲಮಾಣಿ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು.

ಕಾಮ್ರೆಡ್ ವಿಜಯ ರಾಘವನ್ ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ "ಇಂಡಿಯಾ ದೇಶದಲ್ಲಿ ಇಂದು ಕೃಷಿ ರಂಗ ತೀವ್ರ ಬಿಕ್ಕಟ್ಟಿಗೆ ಒಳಗಾಗುತ್ತಿದೆ. ಕೃಷಿ ಉತ್ಪಾದನೆ ಕುಸಿಯುತ್ತಿದೆ. ಕೃಷಿಯಲ್ಲಿ ಸರ್ಕಾರ ಬಂಡವಾಳ ತೊಡಗಿಸುವಿಕೆಯನ್ನು ಕಡಿತ ಮಾಡುತ್ತಿರುವುದರಿಂದ, ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳದೆ ಇರುವುದರಿಂದ ಕೃಷಿ ಉತ್ಪಾದನೆ ಗಣನೀಯವಾಗಿ ಇಳಿಮುಖವಾಗುತ್ತಿದ್ದು ಅದರ ಪರಿಣಾಮವಾಗಿ ಕೃಷಿ ಕೂಲಿಕಾರರಿಗೆ ಕೆಲಸದ ಅವಕಾಶಗಳು ಕಡಿಮೆಯಾಗುತ್ತಿದ್ದು ಅವರ ಬದುಕು ಅಸಹನೀಯವಾಗುತ್ತಿದೆ" ಎಂದು ಹೇಳಿದರು. ಹಿಂದಿನ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ, ನಂತರ ಬಿ.ಜೆ.ಪಿ. ಸರ್ಕಾರ ಅತ್ಯಂತ ರಭಸದಿಂದ ಮುಂದುವರೆಸಿದ ಜಾಗತೀಕರಣ ಮತ್ತು ಉದಾರೀಕರಣದ ನೀತಿಯಿಂದಾಗಿ ಕೃಷಿ ಉತ್ಪನ್ನಗಳನ್ನು ಸಹ ವಿದೇಶಗಳಿಂದ ಆಮದು ಮಾಡಿಕೊಂಡು ಬಂದು ದೇಶದೊಳಗೆ ರಾಶಿ ಹಾಕಲಾಗುತ್ತಿರುವುದರಿಂದ ನಮ್ಮ ರೈತರು ಬೆಳೆದ ಫಸಲಿಗೆ ಬೆಲೆ ಸಿಗದಂತಾಗಿ ದಿವಾಳಿಯಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದು ಕೃಷಿ ಕೂಲಿಕಾರರು ಹೊಟ್ಟೆಗಿಲ್ಲದೆ ಸಾವನಪ್ಪುತ್ತಿರುವ ವರದಿಗಳು ಬರಲಾರಂಭಿಸಿವೆ. ಭವಿಷ್ಯ ಹೆಚ್ಚೆಚ್ಚು ಕರಾಳವಾಗುತ್ತಿರುವಾಗ ಕೃಷಿ ಕೂಲಿಕಾರರ ಪಾಲಿಗೆ ಸಂಘಟನೆ ಮತ್ತು ಸಂಘರ್ಷ ಮಾತ್ರವೇ ಆಶಾ ಕಿರಣವಾಗಿದ್ದು ಕೇರಳದ ಮಾದರಿಯಲ್ಲಿ ಕರ್ನಾಟಕದ ಕೃಷಿ ಕೂಲಿಕಾರರನ್ನು ಕೆಂಬಾವುಟದಡಿಯಲ್ಲಿ ವಿಶಾಲವಾಗಿ ಸಂಘಟಿಸಿ ಗ್ರಾಮೀಣ ಪ್ರದೇಶದಲ್ಲಿ ಕೂಲಿಗಾಗಿ, ಭೂಮಿಗಾಗಿ, ಮನೆ ನಿವೇಶನಗಳಿಗಾಗಿ, ಸಮಗ್ರ ಕಾನೂನಿಗಾಗಿ ಸಮರಶೀಲ ಹೋರಾಟಗಳನ್ನು ನಡೆಸಿ ಆಳುವ ವರ್ಗಗಳ ದಾಳಿ ದಬ್ಬಾಳಿಕೆಗಳನ್ನು ಎದುರಿಸುವಂತಾಗಬೇಕು ಎಂದು ಹೇಳಿದರು.

ಸಮ್ಮೇಳನದ ಪ್ರತಿನಿಧಿಗಳ ಚರ್ಚೆಗಾಗಿ ಸಂಚಾಲಕ ಸಮಿತಿಯ ಪರವಾಗಿ ಕಾಮ್ರೆಡ್ ಜಿ.ಎನ್. ನಾಗರಾಜ ಕರಡು ವರದಿಯನ್ನು ಮಂಡಿಸಿದರು. ಒಬ್ಬ ಮಹಿಳಾ ಅಭ್ಯರ್ಥಿಯೂ ಸೇರಿದಂತೆ ಒಟ್ಟು 19 ಜನ ಪ್ರತಿನಿಧಿಗಳು ವರದಿಯಲ್ಲಿ ಪ್ರಸ್ತಾಪಿಸಲಾದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೋರಾಟದ ಅನುಭವಗಳನ್ನು ಹಾಗೂ ಸಂಘಟನೆಯನ್ನು ಬಲಪಡಿಸುವ ಕುರಿತು ತಮ್ಮ ಸಲಹೆಗಳನ್ನು ನೀಡಿದರು.

ವರದಿಯ ಮೇಲೆ ಚರ್ಚೆ ಮಾಡುತ್ತಾ ಪ್ರತಿನಿಧಿಗಳು ಭೂ ಹೋರಾಟಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು ಗಮನಾರ್ಹವಾಗಿತ್ತು. ಭೂಮಿಯ ಬೇಡಿಕೆಯ ಜೊತೆಯಲ್ಲಿ ಕೂಲಿಕಾರರ ವಸತಿ ಪ್ರಶ್ನೆ, ಪಡಿತರ ಕಾರ್ಡ್ ವಿತರಣೆ ನ್ಯಾಯ ಬೆಲೆ ಅಂಗಡಿಗಳಲ್ಲಿನ ಭ್ರಷ್ಟಾಚಾರ ಗ್ರಾಮೀಣ ಕುಡಿಯುವ ನೀರಿನ ಪ್ರಶ್ನೆ, ಶೌಚಾಲಯ, ಸ್ನಾನ [illegible] ಮಕ್ಕಳಿಗೆ ಉಚಿತ ಶಿಕ್ಷಣ, ಕೃಷಿಯಲ್ಲಿ ಯಾಂತ್ರೀಕರಣದ ಪರಿಣಾಮಗಳು ಇತ್ಯಾದಿ ಹಲವಾರು ಪ್ರಮುಖ ಪ್ರಶ್ನೆಗಳನ್ನು ಎತ್ತಿ ಚರ್ಚೆಮಾಡಿದರು.

ಚರ್ಚೆಗೆ ಸಂಚಾಲಕ ಸಮಿತಿಯ ಪರವಾಗಿ ಉತ್ತರ ನೀಡಿದ ಕಾಮ್ರೆಡ್ ಜಿ. ಎನ್. ನಾಗರಾಜ ಅವರು ಚರ್ಚೆ ತಮ್ಮ ನಿರೀಕ್ಷೆಗಿಂತ ಉತ್ತಮವಾಗಿತ್ತು ಎಂದಾಗ ಪ್ರತಿನಿಧಿಗಳು ಕೈಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಿದರು. ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಕೃತಕ ಕೊರತೆಯನ್ನು ಉಂಟುಮಾಡಿ ಬೆಲೆ ಏರಿಕೆಗೆ ಕಾರಣರಾದ ಅಕ್ರಮ ದಾಸ್ತಾನುದಾರರ, ಕಾಳಸಂತೆಕೋರರ ಮತ್ತು ಕಲಬೆರಕೆದಾರರ ಪರವಾದ ಬಿ.ಜೆ.ಪಿ.ಯನ್ನು ಮುಂಬರುವ ಚುನಾವಣೆಯಲ್ಲಿ ಸೋಲಿಸಬೇಕು ಎಂದು ಜಾತಿವಾದಿ ಸಂಘಟನೆಗಳಿಂದ ಕೂಲಿಕಾರರ ಐಕ್ಯತೆಗೆ ಧಕ್ಕೆ ಬರುತ್ತದೆ ಎಂದೂ ಪ್ರತಿನಿಧಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಅವರು ಸ್ವಾಗತಿಸಿದರು. "ಸಂಘಟನೆಯನ್ನು ನಮ್ಮ ಆಸ್ತಿ ಎಂದು ತಿಳಿಯಬೇಕು" ಎಂದು ಒಬ್ಬ ಪ್ರತಿನಿಧಿ ಹೇಳಿದ್ದನ್ನು ಕಾಮ್ರೆಡ್ ನಾಗರಾಜ ಪ್ರಶಂಸಿಸಿದರು. ಆದರೆ ಪ್ರತಿನಿಧಿಗಳು ಕೂಲಿಯ ಪ್ರಶ್ನೆಗೆ ಹೆಚ್ಚಿಗೆ ಮಹತ್ವ ನೀಡಿ ಚರ್ಚೆ ಮಾಡದಿರುವ ಬಗ್ಗೆ ಅವರು ತಮ್ಮಲ್ಲಿ ಸಮಾಧಾನವನ್ನು ವ್ಯಕ್ತಪಡಿಸಿದರು. ನಮ್ಮ ಕಾರ್ಯಕರ್ತರಲ್ಲಿ ಇನ್ನೂ ಭೂ ಮಾಲಿಕರ ಬಗ್ಗೆ ಭಯಭೀತಿ ಉಳಿದುಕೊಂಡಿರುವುದೇ ಇದಕ್ಕೆ ಕಾರಣನೆಂದು ಗುರುತಿಸಿದ ಅವರು ಕೇರಳ, ತಮಿಳುನಾಡು, ಆಂದ್ರ ಪ್ರದೇಶದ ಕೃಷಿ ಕೂಲಿಕಾರರು ಕೂಲಿ ಹೆಚ್ಚಳಕ್ಕಾಗಿ ಹೋರಾಟ ನಡೆಸಿ ಸಾಧಿಸಿದ ಸಾಧನೆಗಳಿಂದ ನಾವು ಸಹ ಪಾಠ ಕಲಿತುಕೊಳ್ಳಬೇಕು ಎಂದು ಹೇಳಿದರು.

ಸಂಘಟನೆಯನ್ನು ಬಲಪಡಿಸುವ ಅಂಗವಾಗಿ ನಮ್ಮ ಹೋರಾಟಗಳ ಪ್ರಭಾವ ಇರುವ ಪ್ರದೇಶಗಳಲ್ಲಿ ವ್ಯಾಪಕವಾಗಿ ಸದಸ್ಯತ್ವ ನಡೆಸುವುದೆಂದು ಗ್ರಾಮ ಸಮಿತಿಗಳ ರಚನೆ ಹಾಗೂ ಕಾರ್ಯಾಚರಣೆಗೆ ಸರಿಯಾದ ಗಮನ ನೀಡಲು ಸಾಧ್ಯವಾಗುವಂತೆ ಹಾನಗಲ್ಲ, ಗಂಗಾವತಿ, ಶಿರಗುಪ್ಪ, ಆಳಂದ ಮಳವಳ್ಳಿ ಮೊದಲಾದ ತಾಲೂಕುಗಳಲ್ಲಿ ತಾಲೂಕು ಸಮಿತಿಗಳನ್ನು ರಚಿಸಲು ಕ್ರಮ ವಹಿಸುವುದೆಂದು ಸೂಚನೆಯೊಂದನ್ನು ಸಮ್ಮೇಳನದ ಮುಂದಿಟ್ಟರು.

ಅಕ್ರಮ ಸಾಗುವಳಿ ಸಕ್ರಮಕ್ಕಾಗಿ 53 ನಂಬರ್ ಫಾರ್ಮುಗಳಲ್ಲಿ ಪಡೆಯಲಾದ ಅರ್ಜಿಗಳನ್ನು ತಕ್ಷಣ ಇತ್ಯರ್ಥಗೊಳಿಸುವಂತೆ, ಮರಗಳೇ ಇಲ್ಲದ ಅರಣ್ಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಪ್ರಕರಣಗಳನ್ನು ಸಕ್ರಮಗೊಳಿಸಬೇಕೆಂದು, ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸಬಾರದೆಂದೂ, ಸರ್ಕಾರಿ ಜಾಗದಲ್ಲಿ ಮನೆಕಟ್ಟಿಸಿಕೊಂಡಿರುವ ಬಡವರಿಗೆ ಪಟ್ಟಾ ನೀಡಬೇಕೆಂದೂ, ಮನೆ ನಿವೇಶನಗಳನ್ನು ನೀಡುವ ಸರ್ಕಾರಿ ಯೋಜನೆಗಳಲ್ಲಿ ಭ್ರಷ್ಟಾಚಾರ ಆಧಾರದಲ್ಲಿ ಫಲಾನುಭವಿಗಳನ್ನು ಗುರುತಿಸುವುದು ನಿಲ್ಲಬೇಕು ಇತ್ಯಾದಿ ಬೇಡಿಕೆಗಳಿಗಾಗಿ 31-5-99 ರಂದು ರಾಜ್ಯಾದ್ಯಂತ **ತಾಲೂಕು ಕಛೇರಿಗಳ ಎದುರು ಸಾಮೂಹಿಕ ಧರಣಿ ಸತ್ಯಾಗ್ರಹ** ನಡೆಸುವ ನಿರ್ಣಯವನ್ನೂ ಕಾಮ್ರೆಡ್ ನಾಗರಾಜ ಮಂಡಿಸಿದರು.

ಸಮ್ಮೇಳನವು ಈ ಸೂಚನೆಗಳನ್ನು ಒಳಗೊಂಡಂತೆ ಕಾ|| ನಾಗರಾಜ ಅವರು ಮಂಡಿಸಿದ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

"ಅಸ್ಪೃಶ್ಯತೆ ಮತ್ತು ಜಾತಿಪದ್ಧತಿ"ಯ ಕುರಿತಾಗಿ ಏರ್ಪಡಿಸಲಾದ ಸಮಾವೇಶದಲ್ಲಿ ಅಂಗೀಕರಿಸಲಾಗಿದ್ದ ನಿರ್ಣಯವನ್ನು ಸಮ್ಮೇಳನ ಅನುಮೋದಿಸಿತು. ಇದರ ಜೊತೆಯಲ್ಲಿ ಈ ಕೆಳಗಿನ ನಿರ್ಣಯಗಳು ಸಹ ಅಂಗೀಕರಿಸಲ್ಪಟ್ಟವು.

1. ಮುಂದುವರೆದ ನ್ಯಾಟೊ ದಾಳಿಯ ಖಂಡನೆ.
2. ಕೋಮುವಾದದ ವಿರುದ್ಧ ಹೋರಾಡಲು ನಿರ್ಧಾರ.
3. ಆನೇಕಲ್‌ನಲ್ಲಿ ಸಮುದಾಯ ಕಲಾವಿದರು ಮತ್ತು ಸಿ.ಐ.ಟಿ.ಯು ಕಾರ್ಯಕರ್ತರ ಮೇಲೆ ಕೋಮುವಾದಿ ಗುಂಡಾಗಳ ಹಲ್ಲೆಯ ಖಂಡನೆ..
4. ಕೃಷಿ ಕೂಲಿಕಾರರ ಸಮಗ್ರ ಕಾನೂನು ಜಾರಿಗೆ ಆಗ್ರಹ.
5. ಕೃಷಿಕೂಲಿಕಾರರಿಗೆ ಕನಿಷ್ಠ ಕೂಲಿ ನಿಗದಿಪಡಿಸಲು.
6. ಪಡಿತರ ಚೀಟಿ ವಿತರಣೆ ಮತ್ತು ಪಡಿತರ ವ್ಯವಸ್ಥೆ ಬಲಪಡಿಸಲು ಒತ್ತಾಯ.
7. ಪ್ರಗತಿಪರ ಭೂ ಸುಧಾರಣೆ ಹಾಗೂ ಹೆಚ್ಚುವರಿ ಭೂಮಿಯ ಸಮರ್ಪಕ ವಿತರಣೆಗೆ ಆಗ್ರಹ.
8. ಉಳಕಿಹಾಳ ಗ್ರಾಮದ ಕೂಲಿಕಾರರ ಅಕ್ರಮ ಬಂಧನ ಖಂಡನೆ ಮತ್ತು ಬಿಡುಗಡೆಗೆ ಒತ್ತಾಯ.
9. ಕಲಘಟಗಿ ತಾಲೂಕಿನಲ್ಲಿ ಅನಧಿಕೃತ ಸಾಗುವಳಿದಾರರನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಲು ಆಗ್ರಹ.
10. ಭೂಮಿ ಪ್ರಶ್ನೆಯ ಕುರಿತು ರಾಜ್ಯ ಮಟ್ಟದ ಸಮಾವೇಶ ನಡೆಸಲು ನಿರ್ಧಾರ.

ಸಮ್ಮೇಳನವು 24 ಜನ ಸದಸ್ಯರ ರಾಜ್ಯ ಸಮಿತಿಯನ್ನು ಮತ್ತು 9 ಜನ ಪದಾಧಿಕಾರಿಗಳನ್ನು ಆಯ್ಕೆಮಾಡಿತು.

ಸಮ್ಮೇಳನದ ಉದ್ದಕ್ಕೂ ಹಾಜರಿದ್ದು ಸಮ್ಮೇಳನದ ಕಲಾಪಗಳನ್ನು ವೀಕ್ಷಿಸಿದ ತಮಿಳುನಾಡಿನ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ತಿರುನಾವುಕ್ಕರಸು ಅವರು ಸಮಾರೋಪ ಭಾಷಣ ಮಾಡುತ್ತಾ ಕರ್ನಾಟಕದಲ್ಲಿ ಕೃಷಿ ಕೂಲಿಕಾರರ ಚಳುವಳಿಯನ್ನು ದೊಡ್ಡದಾಗಿ ಕಟ್ಟಿ ಬೆಳೆಸಲು ಪರಿಸ್ಥಿತಿ ತುಂಬ ಅನುಕೂಲಕರವಾಗಿದೆ ಎಂದು ಹೇಳಿದರು. ತಮಿಳುನಾಡು ಆಂಧ್ರ ಪ್ರದೇಶಗಳ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಕಾವೇರಿ, ತುಂಗಭದ್ರ ನದಿಗಳ ನೀರಾವರಿ ಪ್ರದೇಶಗಳಲ್ಲಿ ಕೂಲಿಗಾಗಿ ಸಮರಶೀಲ ಹೋರಾಟ ಕಟ್ಟಲು ಸಾಧ್ಯವಾಗಬೇಕು. ಭೂಸುಧಾರಣೆ ಎಂಬುದು ಪ್ರಾಣ ಚಕ್ರ ಇದ್ದಂತೆ. ಅದು ತಿರುಗುವಂತಾದರೆ ಮಾತ್ರ ಎಲ್ಲ ವಿಧದ ಅಭಿವೃದ್ಧಿ ಸಾಧ್ಯ. ಹೆಚ್ಚುವರಿ ಭೂಮಿಯ ಸಮರ್ಪಕ ಹಂಚಿಕೆಗಾಗಿ ಹೋರಾಡುವ ಜೊತೆಯಲ್ಲಿ ಗ್ರಾಮಗಳಿಗೆ ಸೇರಿರುವ ಗೋಮಾಳ, ಹುಲ್ಲುಗಾವಲು, ಗಾಂವಠಾಣಾ ಮೊದಲಾದ ಭೂಮಿಗಾಗಿಯೂ, ದೇವಸ್ಥಾನಗಳ ವಶದಲ್ಲಿರುವ ದೊಡ್ಡ ದೊಡ್ಡ ಹಿಡುವಳಿಗಳ ಭೂಮಿಗಾಗಿಯೂ ಹೋರಾಡಬೇಕು ಎಂದರು.

ಹೋರಾಟಗಳ ಮಧ್ಯದಿಂದಲೇ ಬಂದಿದ್ದ ಸಮ್ಮೇಳನದ ಪ್ರತಿನಿಧಿಗಳಿಗೆ ಹೋರಾಟದಲ್ಲಿ ನಂಬಿಕೆಯನ್ನು ದೃಢಗೊಳಿಸುವ ಅಮೋಘ ಅನುಭವವಾಗಿತ್ತು.

ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷರಾದ ಉಮೇಶ್, ಡಿ.ವೈ.ಎಫ್.ಐ.ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.



ಪದಾಧಿಕಾರಿಗಳು

ಅಧ್ಯಕ್ಷರು: ಜಿ.ಎನ್.ನಾಗರಾಜ್
ಪ್ರಧಾನ ಕಾರ್ಯದರ್ಶಿ:
ಚಂದ್ರಪ್ಪ ಹೊಸಕೇರಾ(ಕೊಪ್ಪಳ ಜಿಲ್ಲೆ)
ಉಪಾಧ್ಯಕ್ಷರು:
ನಿತ್ಯಾನಂದ ಸ್ವಾಮಿ(ಧಾರವಾಡ)
ಬಾಳಪ್ಪ(ಕೊಪ್ಪಳ)
ಹಕ್ಕಲಗೌಡ ಪಾಟೀಲ್ (ಹಾವೇರಿ)
ಕರಿಯಪ್ಪ ಅಚ್ಚೊಳ್ಳಿ (ರಾಯಚೂರು)
ಸಹ ಕಾರ್ಯದರ್ಶಿಗಳು:
ಪಿ.ಆರ್.ವೆಂಕಟೇಶ್(ಬಳ್ಳಾರಿ)
ಪುಟ್ಟ ಮಾದಯ್ಯ (ಮಂಡ್ಯ)
[illegible]

ರಾಜಕೀಯ ... ಮತ್ತು

ಮತ್ತೆ ಮತ್ತೆ ಚುನಾವಣೆ ... ವರುಷ, ಒಂದೂವರೆ ...
1996 ರಿಂದ ಮೂರು ವರ್ಷದಲ್ಲಿ ಮೂರ...
ಪ್ರತಿಸರ್ಕಾರ ಬೀಳುವಾಗ ವಿಶ್ವಾಸಮತದ ...
ಪ್ರತಿಹಳ್ಳಿ ನಗರಗಳಲ್ಲಿ ಓಣಿ, ಬೀದಿಗಳಲ್ಲಿ...
ರಾಜಕೀಯ ಅಸ್ಥಿರತೆಗೆ ರಾಜಕಾರಣಿಗಳ ...
ಪಕ್ಷಗಳಿರುವುದು ಅವುಗಳು ಸಮ್ಮಿಶ್ರ ಸ...
ಅಸ್ಥಿರತೆಗೆ ಕಾರಣ ಎನ್ನುವಂತಹ ಚರ್ಚೆಗಳ...
ಟಿ.ವಿ.ಯ ವಿವಿಧ ಛಾನಲ್‌ಗಳಲ್ಲಿ ಚರ್ಚೆ ...
ದೇಶಾದ್ಯಂತ ಜನ ಅವುಗಳನ್ನು ಹೆಕ್ಕಿಕೊಂ...
ಅಸ್ಥಿರತೆಗೆ ಪರಿಹಾರವೆಂದು ಕರ್ನಾಟಕದ...
ರಾಜಕಾರಣಿಗಳು ಒಮ್ಮೆ ದ್ವಿಪಕ್ಷಿಯ ಪದ್ಧ...
ಬಿಜೆಪಿಯ ಮಾತನ್ನು ಪುನರುಚ್ಚರಿಸುತ್ತಾ...
ಹೊಸಗಳೆಯ ಚಂದ್ರಬಾಬು ನಾಯ್ಡು ಪ್ರಧಾ...
ಮತ್ತೊಬ್ಬರು ರಾಷ್ಟ್ರೀಯ ಸರ್ಕಾರ ಎನ್ನುತ್ತಾ...
ಈ ಅಸ್ಥಿರತೆಯ ಮೂಲ ಎಲ್ಲಿ? ಈ ...
ಯಾವುದು ಎಂಬ ಬಗ್ಗೆ ಎರಡು ಲೇಖನ...

‘ಅಸ್ಥಿರತೆ’ಯ ಕೂಗಿನ ರಾಜಕೀಯ ಅರ್ಥವೇನು?

ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿ ವಿಶ್ಲೇಷಿಸುತ್ತಾರೆ

ಹದಿನಾಲ್ಕು ತಿಂಗಳ ಹಿಂದೆ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಲು ಎಐಎಡಿಎಂಕೆಯ ಬೆಂಬಲದ ಪತ್ರಕ್ಕಾಗಿ ದೀರ್ಘಕಾಲ ಹಾದಿನೋಡುತ್ತಿದ್ದ ಸನ್ನಿವೇಶ. ಶೇರು ಮಾರುಕಟ್ಟೆ ಬೆಲೆಗಳು ದಿಢೀರನೆ ಇಳಿದವು. ಸುದ್ದಿ ವಿಶ್ಲೇಷಕರು "ನೋಡಿ ರಾಜಕೀಯ ಅಸ್ಥಿರತೆ ಆರ್ಥಿಕವನ್ನು ಬಲಿ ತೆಗೆದುಕೊಳ್ಳುತ್ತಿದೆ' ಎಂಬ ತೀರ್ಮಾನಕ್ಕೆ ಧುಮುಕಿದರು.

ಈಗ ಎಐಎಡಿಎಂಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವ ಸುದ್ದಿ, ಕೊನೆಗೆ ವಾಜಪೇಯಿ ಸರಕಾರದ ಪತನದ ಸುದ್ದಿಯೊಂದಿಗೂ ಇದೇ ಇಳಿಕೆ, ಇದೇ ತೀರ್ಮಾನ- ‘ರಾಜಕೀಯ ಅಸ್ಥಿರತೆ’ ಆರ್ಥಿಕವನ್ನು ಹಾಳುಗೆಡವುತ್ತಿದೆ!(ಇವೆರಡರ ನಡುವೆ ದಕ್ಷಿಣ ಪೂರ್ವ ಏಶ್ಯಾದಲ್ಲಿನ ಸನ್ನಿವೇಶದಿಂದಾಗಿ ವಿಶ್ವವ್ಯಾಪಿ ಬಿಕ್ಕಟ್ಟು ಉಂಟಾದ್ದನ್ನು ಮಾತ್ರ ಇವರು ಕಡೆಗಣಿಸುತ್ತಾರೆ!)

ಆದರೆ ಇಲ್ಲಿ ಇನ್ನೊಂದು ಉದಾಹರಣೆ ನೋಡಿ - ಆಂಧ್ರಪ್ರದೇಶದ ಮುಖ್ಯಮಂತ್ರಿ ಉದಾರೀಕರಣ-ಖಾಸಗೀಕರಣ- ಜಾಗತೀಕರಣದ ದಾರಿಯ ಮೂರ್ತರೂಪ ಎಂದು ಉದಾರೀಕರಣ ವಾದಿಗಳು ಹಾಡಿಹೊಗಳುತ್ತಾರೆ. ಆಂಧ್ರಪ್ರದೇಶ ಎಂಬ ಕಂಪನಿಯ ಅತ್ಯುತ್ತಮ ಸಿ.ಇ.ಓ. ಅಂದರೆ ದಕ್ಷ ಅಧಿಕಾರಿ ಎಂಬ ಬಿರುದು ಬೇರೆ ಪಡೆದವರು. ಅಂತಹ ಕಂಪ್ಯೂಟರ್‌ಧಾರೀ ಹೈಟೆಕ್ ಮುಖ್ಯಮಂತ್ರಿ ಈ ವರ್ಷಾಂತ್ಯದಲ್ಲಿ ನಡೆಯಲಿರುವ ಚುನಾವಣೆಯ ಸಿದ್ಧತೆಯಲ್ಲಿ ಮಾತ್ರ ತನ್ನಈ ‘ಬಿಂಬ’ವನ್ನು ಅಳಿಸಿ ಹೋಗುವಂತೆ ಮಾಡಬೇಕು ಎಂದು ತನ್ನ ಎಂ.ಎಲ್.ಎ.ಗಳಿಗೆ ಹೇಳುತ್ತಾರೆ. ತಾನೊಬ್ಬ ಹೈಟೆಕ್ ಮುಖ್ಯಮಂತ್ರಿ ಎಂದು ಜನ ಭಾವಿಸಬಾರದು ಎಂದು ನಾಯ್ಡುರವರೇಕೆ ಬಯಸುತ್ತಾರೆ?

ಒಗಟು ಬಿಡಿಸಬೇಕಾಗಿದೆ

ಉದಾರೀಕರಣದ ಬೆಂಬಲಿಗರೆಲ್ಲರೂ ಯಾವುದೇ ಸಮ್ಮಿಶ್ರ ಸರಕಾರ ಖಂಡಿತಾ ಅಸ್ಥಿರವಾಗಿಯೇ ಇರುತ್ತದೆ ಎಂದು ಭಾವಿಸುತ್ತಾರೆ. ಅತ್ತ ಇವರ ಪ್ರಿಯ ರಾಜಕೀಯ ಮುಖಂಡರು ಮತದಾರರ ಎದುರು ಮಾತ್ರ ತಾವು ‘ಸುಧಾರಣಾ-ಪರ’ ಎಂದು ಹೇಳಿಕೊಳ್ಳಲು ಹಿಂಜರಿಯುತ್ತಾರೆ. ಏಕಿರಬಹುದು? ಈ ಒಗಟಿಗೆ ಉತ್ತರವೇ ಭಾರತದ ಪ್ರಸಕ್ತ ಬಿಕ್ಕಟ್ಟು ಎಂತಹುದು ಎಂದು ವಿವರಿಸುತ್ತದೆ. ರಾಜಕೀಯ ‘ಅಸ್ಥಿರತೆ’ ದೇಶ ಈಗ ಕಾಣುತ್ತಿರುವ ಆರ್ಥಿಕ ಸಮಸ್ಯೆಗಳ ಮೂಲ ಕಾರಣವೇ ಅಥವಾ ಆರ್ಥಿಕ ಬಿಕ್ಕಟ್ಟಿನಿಂದಾಗಿ ರಾಜಕೀಯ ಅಸ್ಥಿರತೆ ಉಂಟಾಗಿದೆಯೇ?

ಈ ಬಾರಿ ಅಧಿಕಾರದಲ್ಲಿರುವವರು ಮುಂದಿನ ಬಾರಿ ಅಧಿಕಾರ ಕಳಕೊಳ್ಳುತ್ತಾರೆ - ಇದೊಂದು ಪರಮ ನಿಯಮವೆಂಬಂತೆ ಬಿಂಬಿಸಲಾಗುತ್ತಿದೆ. ಪಶ್ಚಿಮ ಬಂಗಾಳದ ಎಡರಂಗ ಹೇಗೆ ಸತತ ಐದು ಬಾರಿ ಗೆದ್ದು ಬರುತ್ತಿದೆ ಎಂದು ಇಂತವರನ್ನು ಕೇಳಿದಾಗ ಅದು ಒಂದು ಅಪವಾದ ಮಾತ್ರವಂತೆ! ಕಳೆದ ನವೆಂಬರಿನಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಸೋಲು ‘ಅಧಿಕಾರಸ್ಥರ ಸೋಲಿನ’ ಪರಮ ನಿಯಮದಿಂದಾಗಿಯೇ ಹೊರತು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ದುರಾಡಳಿತದಿಂದಾಗಿ ಅಲ್ಲವಂತೆ!

ಆದರೆ ಈ ‘ಪರಮ ನಿಯಮ’ 1990 ರ ದಶಕದಲ್ಲೇ ಏಕೆ ಕಂಡು ಬಂದಿದೆ? ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ಪ್ರಕ್ರಿಯೆಯೊಂದಿಗೆ ಏಕೆ ಕಂಡುಬರಲಾರಂಭಿಸಿದೆ? ಈ ಪ್ರಶ್ನೆಗೂ ಉತ್ತರ ಕಂಡು ಕೊಳ್ಳಬೇಕಾಗಿದೆ.

‘ಅಸ್ಥಿರತೆ’ಯೋ ಮಂಥನವೋ

ನಿಜವಾಗಿ ಈಗ ಯಾವುದನ್ನು ‘ಅಸ್ಥಿರತೆ’ ಎನ್ನಲಾಗುತ್ತಿದೆಯೋ ಅದು ದೇಶದಲ್ಲಿ ನಡೆಯುತ್ತಿರುವ ರಾಜಕೀಯ ಮಂಥನ. ಈ ಮಂಥನಕ್ಕೂ ಉದಾರೀಕರಣ ಪ್ರಕ್ರಿಯೆಗೂ ಕಾರ್ಯ-ಕಾರಣ ಸಂಬಂಧವಿದೆ, ನಿಜ. ಆದರೆ ಇದು ಸಾಮಾನ್ಯವಾಗಿ ಹೇಳುವಂತಹ ಸಂಬಂಧವಲ್ಲ. ಅಂದರೆ ರಾಜಕೀಯ ಅಸ್ಥಿರತೆಯಿಂದ ಆರ್ಥಿಕ ಬಿಕ್ಕಟ್ಟು ಉಂಟಾಗಿರುವುದಲ್ಲ, ಬದಲಾಗಿ ‘ಸುಧಾರಣೆ’ಗಳು ಸಾಮಾಜಿಕ ಬೆಳವಣಿಗೆಗಳಿಗೆ ನೀಡಿದ ಗತಿಯಿಂದಾಗಿ ಈ ರಾಜಕೀಯ ಮಂಥನ ನಡೆಯುತ್ತಿದೆ.

> ದೇಶ ಕಾಣುತ್ತಿರುವ ಆರ್ಥಿಕ ಬಿಕ್ಕಟ್ಟುಗಳಿಗೆ ರಾಜಕೀಯ ಅಸ್ಥಿರತೆ ಕಾರಣವಲ್ಲ, ಬದಲಾಗಿ ಆರ್ಥಿಕ ಉದಾರೀಕರಣದ ಪ್ರಕ್ರಿಯೆಯಿಂದಾಗಿಯೇ ರಾಜಕೀಯ ವರ್ತನೆಯಲ್ಲಿ ತೀವ್ರ ಬದಲಾವಣೆಗಳಾಗಿವೆ, ಅಸ್ಥಿರತೆಯ ಸ್ಥಿತಿ ಉಂಟು ಮಾಡಿವೆ.

1991 ರಲ್ಲಿ ವಿದೇಶಿ ವಿನಿಮಯ ಬಿಕ್ಕಟ್ಟು ಉಂಟಾದಾಗ ಅದನ್ನು ಪರಿಹರಿಸಲು ಐಎಂಎಫ್ ಸಾಲ ತಗೊಂಡಾಗ ಈ ‘ಸುಧಾರಣಾ’ ಪ್ರಕ್ರಿಯೆ ಆರಂಭವಾಯಿತು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ವಾಸ್ತವವಾಗಿ ಇದು ಇದಕ್ಕೆ ಮೊದಲೇ 1985 ರಲ್ಲಿ ರಾಜೀವ ಗಾಂಧಿ ‘21ನೇ ಶತಮಾನ’ದ ಘೋಷಣೆ ಹಾಕಿದಾಗಲೇ ಆರಂಭವಾಯಿತು.

ಒಂದೆಡೆ ಸಾರಾಸಗಟು ಆಮದು ಉದಾರೀಕರಣ, ಇನ್ನೊಂದೆಡೆ ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ನೆಲ ಹದಮಾಡಲಾರಂಭವಾಯಿತು. 1984 ರಿಂದ 1991 ರ ನಡುವೆ ಭಾರತದ ಸಾಲದ ಹೊರೆ 28 ಸಾವಿರ ಕೋಟಿಯಿಂದ 1 ಲಕ್ಷ ಕೋಟಿ ರೂ. ಗೇರಿತು (ಸುಮಾರು ನಾಲ್ಕು ಪಟ್ಟು). ಇದರಿಂದಾಗಿ, ಅನಗತ್ಯ ಆಮದುಗಳಿಂದಾಗಿ ವಿದೇಶಿ ವಿನಿಮಯ ಭಂಡಾರ 1991 ರ ವೇಳೆಗೆ ಖಾಲಿಯಾಗುವ ಸ್ಥಿತಿ ಬಂತು.

ಇದರೊಂದಿಗೆ ಲಂಚ - ರುಷುವತ್ತು ಭ್ರಷ್ಟಾಚಾರದ ಹೊಸದೊಂದು ಸಂಸ್ಕೃತಿಯೂ ಬೆಳೆಯಿತು. ಇದರ ಪ್ರತೀಕದಂತಾದ ಬೋಫೋರ್ಸ್ ಹಗರಣದಿಂದಾಗಿ ರಾಜೀವಗಾಂಧಿ ತನ್ನ ಪ್ರಧಾನಿ ಮಂತ್ರಿ ಪದವನ್ನು ಪತನದ ಹಿಂದೆ ಇದ್ದದ್ದು ಕಾಂಗ್ರೆಸ್ಸಿನ ಸಮಯಸಾಧಕತನದೊಂದಿಗೆ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿ. ಈ ಅಸಂತೃಪ್ತಿಯನ್ನು ಕೆಲವೆಡೆ ಜಾತೀಯ ಹೆಸರಲ್ಲಿ ಇನ್ನೂ ಕೆಲವೆಡೆ ಪ್ರಾದೇಶಿಕ ಘೋಷಣೆಗಳಡಿ ಕ್ರೋಢೀಕರಿಸಿದರೆ ದೇಶದ ಇತರ ಹೆಚ್ಚಿನ ಭಾಗಗಳಲ್ಲಿ ಕೋಮುವಾದಿ ಶಕ್ತಿಗಳು ಇದರ ಪ್ರಯೋಜನ ಪಡೆದರು.

ನರಸಿಂಹರಾವ್ ಸರಕಾರ

ರಾಜೀವ ಗಾಂಧಿಯ ದುರಂತಕಾರೀ ಹತ್ಯೆಯ ಹಿನ್ನೆಲೆಯಲ್ಲಿ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂತು. ಆ ವೇಳೆಗೆ ವಿದೇಶಿ ವಿನಿಮಯ ಬಿಕ್ಕಟ್ಟು ವಿಕಟ ಪರಿಸ್ಥಿತಿ ಉಂಟು ಮಾಡಿತ್ತು. ಇದನ್ನು ಪರಿಹರಿಸಲು ಸರಕಾರ ಐ.ಎಂ.ಎಫ್. ಸಾಲಕ್ಕೆ ಕೈಯೊಡ್ಡಿ ಅವರ ಶರತ್ತುಗಳಿಗೆ ತಲೆ ಬಾಗಿತು. ಭಾರತದ ಆರ್ಥಿಕವನ್ನು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶಗಳಿಗೆ ಅಧೀನ ಗೊಳಿಸಲಾಯಿತು. ಆಮದು ಉದಾರೀಕರಣದಿಂದ ಉಂಟಾದ ಬಿಕ್ಕಟ್ಟನ್ನು ಪರಿಹರಿಸಲು ಇನ್ನಷ್ಟು ಉದಾರೀಕರಣಕ್ಕಿಳಿಯಲಾಯಿತು. ಇದೇ 90 ರ ದಶಕದಲ್ಲಿ ಭಾರತದ ದುರಂತ.

ನರಸಿಂಹರಾವ್ ಸರಕಾರದ ಅಡಿಯಲ್ಲಿ ‘ಸುಧಾರಣಾ’ ಪ್ರಕ್ರಿಯೆ ಮೊದಲ ಮೂರು ವರ್ಷಗಳಲ್ಲೇ ಜನಗಳ ಜೀವನವನ್ನು ಇನ್ನಷ್ಟು ಕಳಕೊಂಡರು.

ರಾಷ್ಟ್ರೀಯ ರಂಗ ಸರ್ಕಾರ

ಅತ್ತ ಈ ‘ಸುಧಾರಣೆ’ಗಳು ಜನಸಾಮಾನ್ಯರ ಬದುಕಿನಲ್ಲೇನೂ ಸುಧಾರಣೆ ತರಲಿಲ್ಲ. ಅದರಿಂದ ಜನಗಳಲ್ಲಿ ಬೆಳೆದ ಅಸಂತೃಪ್ತಿ, ಬೋಫೋರ್ಸ್ ಪ್ರತಿನಿಧಿಸಿದ ಭ್ರಷ್ಟಾಚಾರದ ವಿರುದ್ಧ ಹೋರಾಟದ ಘೋಷಣೆಯಡಿ ಕ್ರೋಢೀಕರಣ ಗೊಂಡಿತು. ಚುನಾವಣೆಗಳ ನಂತರ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬಂತು.

ಇದರೊಂದಿಗೇ ಇತರ ಮಹತ್ವಪೂರ್ಣ ರಾಜಕೀಯ ಸಾಮಾಜಿಕ ಬದಲಾವಣೆಗಳು ರೂಪುಗೊಳ್ಳಲಾರಂಭಿಸಿದವು. ಜನಸಾಮಾನ್ಯರಿಗೆ ಉತ್ತಮ ಬದುಕಿನ ಅವಕಾಶಗಳು ಕಮ್ಮಿಯಾಗುತ್ತಾ ಹೋದಂತೆ ಇದರಲ್ಲಿ ತಂತಮ್ಮ ಪಾಲನ್ನು ಉಳಿಸಿಕೊಳ್ಳಲು ವಿವಿಧ ಗುಂಪುಗಳ ನಡುವೆ ಕಿತ್ತಾಟ ಆರಂಭವಾಯಿತು. ಇದಕ್ಕೆ ಮೊದಲು ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟದಲ್ಲಿ ಮೂಡಿಬಂದ ರಾಜಕೀಯ ಮುಖಂಡರ ಹೊಸ ಪೀಳಿಗೆಯೊಂದು ಬಂತು. ಅದುವರೆಗೆ ವಂಚಿತರಾದ ಜನವಿಭಾಗಗಳ ನಡುವೆ ತಮ್ಮ ಹಕ್ಕುಗಳ ಬಗ್ಗೆ ಹೆಚ್ಚೆಚ್ಚು ಜಾಗೃತಿ ಮೂಡಲಾರಂಭಿಸಿತು. ಇನ್ನೊಂದೆಡೆ ಇದು ನಕಾರಾತ್ಮಕ ರೂಪವನ್ನು ಪಡೆದು ಜಾತಿ-ಆಧಾರಿತ ರಾಜಕೀಯ ಹಿಂದೆಂದಿಗಿಂತಲೂ ತೀವ್ರಗೊಂಡಿತು. ‘ಮಂಡಲ್’ ಎಲ್ಲರ ಗಮನ ಸೆಳೆದ ಪದವಾಯಿತು. ‘ಸಾಮಾಜಿಕ ನ್ಯಾಯ’ ಇದಕ್ಕೆ ಸೈದ್ಧಾಂತಿಕ ಊರುಗೋಲಾಯಿತು.

ಇಂತಹ ರಾಜಕೀಯ ಮಂಥನ ನಡೆಯುತ್ತಿದ್ದಾಗ ಕೋಮುವಾದಿಗಳ ಪ್ರಚಾರವೂ ಗುಪ್ತಗಾಮಿಯಾಗಿ ಬಲಗೊಳ್ಳುತ್ತಿತ್ತು. 1980 ರ ದಶಕದ ಮಧ್ಯಭಾಗದಿಂದ ಇದು ಗಟ್ಟಿಗೊಳ್ಳಲಾರಂಭಿಸಿತು. ರಾಜೀವ್ ಗಾಂಧಿಯ ಕಾಂಗ್ರೆಸ್ ಪಕ್ಷ ಶಿಲಾನ್ಯಾಸ, ಶಾಬಾನು ಕೇಸಿನಲ್ಲಿ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡ ಪರಿಣಾಮವಾಗಿ ಕೋಮುವಾದಿಗಳ ಬಲ ಕ್ರೋಢೀಕರಣಗೊಳ್ಳಲಾರಂಭಿಸಿತ್ತು. ಅಡ್ವಾಣಿಯ ರಥಯಾತ್ರೆಯೊಂದಿಗೆ ಅದು ತೀವ್ರಗೊಂಡು ವಿ.ಪಿ.ಸಿಂಗ್ ಸರಕಾರ ಪತನ ಗೊಳ್ಳುವಂತಾಯಿತು.

ಹೊರಗಡೆಯಿಂದ ಬಿಜೆಪಿ ಮತ್ತು ಎಡಪಕ್ಷಗಳು ಬೆಂಬಲಿಸಿದ್ದ ಈ ಅಲ್ಪಮತ ಸರಕಾರದ ಅಲ್ಪ-ಅವಧಿ ಇಂದಿನ ರಾಜಕೀಯ ‘ಅಸ್ಥಿರತೆ’ಯ ಆರಂಭ ಎಂದು ಹಲವರು ಕಾಣುತ್ತಾರೆ. ಆದರೆ ಈ ಸರಕಾರದ ರಚನೆ ಹದಗೆಡಿಸಿತು. ಮತ್ತೆ ಹಸಿವಿನಿಂದ ಸಾವಿನ ಸುದ್ದಿಗಳು ಕೇಳಿ ಬರಲಾರಂಭಿಸಿದವು. ಗ್ರಾಮೀಣ ಬಡತನ ಏರಿತು. ಈ ಹಂತದಲ್ಲಿ ನರಸಿಂಹ ರಾವ್ ನೇತೃತ್ವದ ಅಲ್ಪಮತದ ಸರಕಾರದ ವಿರುದ್ಧ ಸಿಪಿಐ(ಎಂ) ಅವಿಶ್ವಾಸ ಠರಾವು ಮಂಡಿಸಿತು. ಸರಕಾರದ ಸೋಲು ಇದರಲ್ಲಿ ಖಂಡಿತವೆನಿಸಿತ್ತು. ಕಾಂಗ್ರೆಸ್ ಜೆ.ಎಂ.ಎಂ. ಸಂಸತ್ ಸದಸ್ಯರನ್ನು ಖರೀದಿಸಿ ತನ್ನ ಸರಕಾರವನ್ನು ಉಳಿಸಿಕೊಂಡಿತು. ಆದರೆ ಈ ಪ್ರಕರಣ ಜೆ.ಎಂ.ಎಂ. ಲಂಚ ಪ್ರಕರಣವೆಂದು ಕುಖ್ಯಾತವಾಯಿತು.

ಇದರೊಂದಿಗೆ ಭ್ರಷ್ಟಾಚಾರ ಎಲ್ಲೆಡೆ ವ್ಯಾಪಿಸಿತು. ಇದಕ್ಕೂ ಉದಾರೀಕರಣಕ್ಕೂ ನೇರ ಸಂಬಂಧವಿತ್ತು. ಬ್ಯಾಂಕ್ ಹಗರಣದಿಂದ ಆರಂಭವಾಗಿ ನರಸಿಂಹರಾವ್ ಸರಕಾರ ಹಲವು ಹಗರಣಗಳಲ್ಲಿ ಸಿಲುಕಿಕೊಂಡಿತು. ಸುಮಾರು 50000 ಕೋಟಿ ರೂ.ಗಳು ಈ ಹಗರಣಗಳಲ್ಲಿ ಸೋರಿಹೋಗಿವೆ ಎಂದು ಅಂದಾಜು ಮಾಡಲಾಗಿದೆ.

ಅಧಿಕಾರದಲ್ಲಿರುವವರು ಏಕೆ ಸೋಲುತ್ತಿದ್ದಾರೆ?

ಈ ಹಿನ್ನೆಲೆಯಲ್ಲಿಯೇ ‘ಅಧಿಕಾರಸ್ಥರು ಸೋಲುತ್ತಾರೆ’ ಎಂಬ ಈ ಹಿಂದೆ ಪ್ರಸ್ತಾಪಿಸಿದ ‘ಪರಮ ನಿಯಮ’ವನ್ನು ಪರೀಕ್ಷಿಸಬೇಕು. ಉದಾರೀಕರಣ ಪ್ರಕ್ರಿಯೆ ಜನಗಳ ಮತ್ತು ಪ್ರದೇಶಗಳ ನಡುವಿನ ಅಸಮಾನತೆಯನ್ನು ಹೆಚ್ಚಿಸಿದೆ. ಇದರಿಂದ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯ ರಾಜಕೀಯ ಅಭಿವ್ಯಕ್ತಿಯೇ ಆಳುವ ಪಕ್ಷಗಳಿಗೆ ಚುನಾವಣೆಗಳಲ್ಲಿ ಜನ ತೋರುವ ತಿರಸ್ಕಾರ. ಪಶ್ಚಿಮ ಬಂಗಾಳದಲ್ಲಿ ಬಿಟ್ಟು ಬೇರೆಲ್ಲಾ ಕಡೆ ಜನ ಚುನಾವಣೆಗಳಲ್ಲಿ ಆಳುವ ಪಕ್ಷದ ವಿರುದ್ಧ ನಕಾರಾತ್ಮಕವಾಗಿ ತಮ್ಮ ಮತವನ್ನು ಬಳಸುತ್ತಿದ್ದಾರೆ. ಏಕೆಂದರೆ ಎಡಪಕ್ಷಗಳನ್ನು ಬಿಟ್ಟು ಉಳಿದೆಲ್ಲಾ ಪಕ್ಷಗಳು ಅವೇ ಉದಾರೀಕರಣ ನೀತಿಗಳನ್ನು ಅನುಸರಿಸುತ್ತಿವೆ ಎಂದು ಜನ ಸರಿಯಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಇಂತಹ ಆಳುವ ಈ ಪಕ್ಷಗಳು ಚುನಾವಣೆಗಳಲ್ಲಿ ಸೋಲುತ್ತವೆ. ಈ ದೇಶದಲ್ಲಿ ರಾಜಕೀಯ ‘ಅಸ್ಥಿರತೆ’ ಯೆಂಬುದರ ಮೂಲ ಕಾರಣ ಇದೇ.

ಈ ‘ಸುಧಾರಣೆ’ಯ ನಂತರದ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಇಳಿತ, ಬೆಲೆಯೇರಿಕೆಯಲ್ಲಿ ಆಹಾರ ವಸ್ತುಗಳ ಬೆಲೆಯೇರಿಕೆ ಇತರ ವಸ್ತುಗಳ ಬೆಲೆಯೇರಿಕೆಗಿಂತ ಸುಮಾರು 3 ಪಟ್ಟು ಹೆಚ್ಚಿರುವುದು(ನವೆಂಬರ್ 1998 ರಲ್ಲಿ ಎಲ್ಲಾ ಸರಕುಗಳ ಬೆಲೆಯೇರಿಕೆ 8.8% ಇದ್ದರೆ ಆಹಾರ ವಸ್ತುಗಳ ಬೆಲೆಯೇರಿಕೆ 22.4% ಇತ್ತು) ಈ ಅಂಶವನ್ನು ಸಾಬೀತು ಮಾಡುತ್ತದೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಪರಾಭವಕ್ಕೆ ಆಹಾರವಸ್ತುಗಳ ಅದರಲ್ಲೂ ತರಕಾರಿಗಳ ವಿಪರೀತ ಬೆಲೆಯೇರಿಕೆಯೇ ಕಾರಣ ಎಂಬುದು ಸ್ಪಷ್ಟ..

‘ಅಸ್ಥಿರತೆ’ಯಿಂದ ಮುಕ್ತಿ ಹೇಗೆ?

ಈ ಎಲ್ಲಾ ಅಂಶಗಳನ್ನು ಒಟ್ಟು ಸೇರಿಸಿ ನೋಡಿದಾಗ ನಾವು ಈ ತೀರ್ಮಾನಕ್ಕೆ ಬರಬಹುದು - ಆರ್ಥಿಕ ಧೋರಣೆಗಳಿಂದಾಗಿ ಜನಗಳಲ್ಲಿ ಅಸಂತೃಪ್ತಿ ಹೆಚ್ಚುತ್ತಿದೆ; ವಿವಿಧ ಸಾಮಾಜಿಕ ಗುಂಪುಗಳು ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳಲು ಕಿತ್ತಾಡುತ್ತವೆ: ಪ್ರಾದೇಶಿಕ ಅಸಮಾನತೆಗಳಿಂದಾಗಿ ಪ್ರಾದೇಶಿಕ ಪಕ್ಷಗಳ ಪಾತ್ರ ಮುಖ್ಯವಾಗಲಾರಂಭಿಸುತ್ತದೆ; ಕೋಮುವಾದಿ ಶಕ್ತಿಗಳು ಜನಗಳ ಗಮನವನ್ನು ನಿಜವಾದ ಸಮಸ್ಯೆಗಳಿಂದ ಬೇರೆಡೆಗೆ ಸೆಳೆದು ಅಸಂತೃಪ್ತಿಯ ಲಾಭ ಪಡೆಯಲು ಪ್ರಯತ್ನಿಸುತ್ತವೆ; ಭ್ರಷ್ಟಾಚಾರ ಸಾರ್ವಜನಿಕ ಜೀವನದ ಒಂದು ಪ್ರಮುಖ ಸಂಗತಿಯಾಗುತ್ತದೆ, ಅದರಿಂದ ರಾಜಕೀಯ ನೈತಿಕತೆಯ ಪತನ ಕಾಣಬರುತ್ತದೆ.

ಇವೆಲ್ಲಾ ಉದಾರೀಕರಣದ ಪ್ರಕ್ರಿಯೆ ಆರಂಭಿಸಿದ ಬದಲಾವಣೆಗಳ ಪರಿಣಾಮಗಳು.

ಆದ್ದರಿಂದ ದೇಶ ಕಾಣುತ್ತಿರುವ ಆರ್ಥಿಕ ಬಿಕ್ಕಟ್ಟುಗಳಿಗೆ ರಾಜಕೀಯ ಅಸ್ಥಿರತೆ ಕಾರಣವಲ್ಲ, ಬದಲಾಗಿ ಆರ್ಥಿಕ ಉದಾರೀಕರಣದ ಪ್ರಕ್ರಿಯೆಯಿಂದಾಗಿಯೇ ರಾಜಕೀಯ ವರ್ತನೆಯಲ್ಲಿ ತೀವ್ರ ಬದಲಾವಣೆಗಳಾಗಿವೆ, ಅಸ್ಥಿರತೆಯ ಸ್ಥಿತಿ ಉಂಟು ಮಾಡಿವೆ. ಲಂಗು ಲಗಾಮಿಲ್ಲದ ಉದಾರೀಕರಣದ ದುಷ್ಪರಿಣಾಮಗಳನ್ನು ಎದುರಿಸಲು ಇನ್ನಷ್ಟು ಉದಾರೀಕರಣ, ಅದರ ದುಷ್ಪರಿಣಾಮ ಎದುರಿಸಲು ಮತ್ತಷ್ಟು ಉದಾರೀಕರಣ. ಇದರಿಂದ ಮುಕ್ತಿ ಪಡೆಯ... ಬೇಕಾದರೆ ಉದಾರೀಕರಣದ ಹಿಂದಿನ ದಿನಗಳಿಗೆ ಹಿಂತಿರುಗಬೇಕು ಎಂದು ಇದರ ಅರ್ಥವೂ ಅಲ್ಲ. ಈಗಿನ ಉದಾರೀಕರಣದ ಪ್ರಕ್ರಿಯೆಗಿಂತ ತೀರಾ ಭಿನ್ನವಾದ ಸಾಮಾಜಿಕ-ಆರ್ಥಿಕ-ರಾಜಕೀಯ ದಾರಿ ಹಿಡಿಯಬೇಕಾಗಿದೆ. ಆಗ ಮಾತ್ರವೇ ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಸಾಧ್ಯ. ಎಡಪಕ್ಷಗಳು ಈ ಪರ್ಯಾಯ ದಾರಿಯನ್ನು ದೇಶದ ಮುಂದಿಟ್ಟಿವೆ.

ರತೆ ಎಂಬ ಕೂಗು
ದಕ್ಕೆ ಚಿಕಿತ್ಸೆ


ಎನ್ನುವಷ್ಟರಲ್ಲಿ ಕೇಂದ್ರ ಸರ್ಕಾರಗಳು ಉರುಳುತ್ತಿವೆ. ೀಕಸಭಾ ಚುನಾವಣೆಗಳನ್ನು ಎದುರಿಸಬೇಕಾಗಿ ಬಂದಿದೆ. ೇಶಾದ್ಯಂತ ದೂರದರ್ಶನದ ಮೂಲಕ ಬಿತ್ತರಗೊಂಡು ಗೆ ಕಾರಣವಾಗಿದೆ.

, ಅವರ ಅಧಿಕಾರ ದಾಹ ಕಾರಣ, ಬಹಳ ಸಂಖ್ಯೆಯ ರಚಿಸುವುದು, ಅದರಲ್ಲಿಯೂ ಪ್ರಾದೇಶಿಕ ಪಕ್ಷಗಳು ೇಗಳು ಮಾಧ್ಯಮಗಳ ಮೂಲಕ ಹುಟ್ಟಿ ಹಾಕಲಾಗುತ್ತಿದೆ. ವ ಬುದ್ಧಿವಂತರು ಇಂತಹ ಮಾತುಗಳನ್ನುದುರಿಸುತ್ತಾರೆ. ್ಮ ತಮ್ಮಲ್ಲೇ ವಾದ ನಡೆಸುತ್ತಾರೆ.

ೈ ನರಿ ಎಂದು ಹೆಸರಾದ ರಾಮಕೃಷ್ಣ ಹೆಗ್ಗಡೆಯಂತಹ ಬೇಕು ಮತ್ತೊಮ್ಮೆ ತಮ್ಮ ಹೊಸ ಯಜಮಾನರಾದ ಯ ಮಾದರಿ ಸರ್ಕಾರ ಬೇಕು ಎನ್ನುತ್ತಾರೆ. ಅವರ ಲೋಕಸಭೆಯೇ ನೇರವಾಗಿ ಚುನಾಯಿಸಬೇಕೆನ್ನುತ್ತಾರೆ,

ವಾದಗಳ ಹೂರಣ ಏನು? ನಿಜವಾದ ಪರಿಹಾರ

- ಸಂಪಾದಕ



ಭಾರತದ ಪ್ರಜಾಪ್ರಭುತ್ವದ ಬಿಕ್ಕಟ್ಟು ಮತ್ತು ಅಧ್ಯಕ್ಷೀಯ ಮಾದರಿ ಸರ್ಕಾರ ಇತ್ಯಾದಿ ಚಿಕಿತ್ಸೆಗಳು

ಜಿ. ಎನ್. ನಾಗರಾಜ್

1989 ರಿಂದ ಇಲ್ಲಿಯವರೆಗೆ ನಿರಂತರವಾಗಿ ಯಾವುದೇ ಒಂದು ಪಕ್ಷಕ್ಕೆ ಬಹುಮತವನ್ನು ಭಾರತದ ಜನತೆ ನೀಡಲಿಲ್ಲ. ಹೀಗೆ ನಾಲ್ಕು ದಶಕಗಳಷ್ಟು ಕಾಲ ನಿರಂತರವಾಗಿ ಒಂದೇ ಪಕ್ಷ ಬಹುಮತ ಗಳಿಸಿ, ಹಲವು ಬಾರಿ ಮೂರನೇ ಎರಡರಷ್ಟು (ಶೇ 66 ಕ್ಕಿಂತ ಹೆಚ್ಚು) ಬಹುಮತ ಅಂದರೆ ಏಕಾಕಿಯಾಗಿ ಯಾವುದೇ ಸಂವಿಧಾನ ತಿದ್ದುಪಡಿ ತರಬಲ್ಲ, ಆದ್ದರಿಂದ ವಿರೋಧ ಪಕ್ಷಗಳ ವಾದಕ್ಕೆ ದೇಶದ ಜನರ ಅಭಿಪ್ರಾಯಕ್ಕೂ ಮನ್ನಣೆ ಕೊಡದೆ ಧಿಕ್ಕರಿಸಿ ನಡೆಯುವ ಶಕ್ತಿಯನ್ನು ನೀಡುತ್ತಿದ್ದ ಏಕಪಕ್ಷ ಆಡಳಿತದ ಯುಗ ಮುಗಿಯಿತು.

1989 ರಲ್ಲಿ ರಚನೆಯಾದ ರಾಷ್ಟ್ರೀಯ ರಂಗ ಸರ್ಕಾರ ಅಲ್ಪಮತದ ಸರ್ಕಾರ 1991 ರಲ್ಲಿ ಬಿಜೆಪಿ ತನ್ನ ಬೆಂಬಲವನ್ನು ವಾಪಸುಪಡೆದುದರಿಂದ ಬಿದ್ದು ಹೋಯಿತು. ಆಗ ಬಿಜೆಪಿಗೆ ಸರ್ಕಾರವನ್ನು ಅಸ್ಥಿರಗೊಳಿಸಬಾರದು, ದ್ರೋಹ ಬಗೆಯಬಾರದು ಎಂಬ ಮಾತು ಅರಿವಿರಲಿಲ್ಲವೇ?

1991 ರಲ್ಲಿ ಮತ್ತೆ ಚುನಾವಣೆಯಾದಾಗಲೂ ಯಾವುದೇ ಪಕ್ಷಕ್ಕೆ ಬಹುಮತ ಇರಲಿಲ್ಲ. ಕಾಂಗ್ರೆಸ್ ಪಕ್ಷ ಬಹುಮತಕ್ಕೆ ಸಮೀಪವಾಗಿತ್ತು. ಹೀಗಾಗಿ ಒಂದೇ ಪಕ್ಷದ ಅಲ್ಪಮತೀಯ ಸರ್ಕಾರ ನರಸಿಂಹರಾಯರ ನೇತೃತ್ವದಲ್ಲಿ ರಚನೆಯಾಯಿತು. (ಚುನಾವಣೆಗಳ ಮಧ್ಯದಲ್ಲಿ ರಾಜೀವ್ ಗಾಂಧಿಯವರ ಘೋರ ಹತ್ಯೆಯಾಗದಿದ್ದರೆ ಅಷ್ಟಾದರೂ ಲೋಕಸಭಾ ಸ್ಥಾನಗಳು ಕಾಂಗ್ರೆಸ್ಸಿಗೆ ಸಿಗುವುದು ಸಾಧ್ಯವಿರಲಿಲ್ಲ ಎನ್ನುವುದು ಗಮನಿಸಬೇಕಾದ ವಿಷಯ) ಈ ಸರ್ಕಾರವೂ ಹಲವೊಮ್ಮೆ ಅವಿಶ್ವಾಸ ಮತದ ಮತ್ತು ಇನ್ನೇನು ಈ ಸರ್ಕಾರ ಇಂದೇ ಬಿದ್ದುಹೋಯಿತು ಎಂಬ ಭಯದ ನೆರಳಿನಲ್ಲಿಯೇ ಬದುಕಿತು. ಒಂದೆರಡು ಪಕ್ಷಗಳನ್ನು ಒಡೆದು ಹಲವು ಎಂ.ಪಿ.ಗಳನ್ನು ಕೊಂಡು ಐದು ವರ್ಷಗಳ ಅವಧಿಯನ್ನು ಪೂರೈಸಿತು. ಈ ಬಗ್ಗೆ ಜಾರ್ಖಂಡ್ ಮುಕ್ತಿ ಮೋರ್ಚ, ಅಜಿತ್ ಸಿಂಗ್ ಲೋಕದಳದ ಎಂಪಿಗಳ ಮೇಲೆ ಭ್ರಷ್ಟಾಚಾರದ ಕೇಸುಗಳು, ಅವರಿಗೆ ಹಣ ಸರಬರಾಜು ಮಾಡಿದರೆಂದು ಕರ್ನಾಟಕದ ಸಾರಾಯಿದೊರೆಗಳು, ರಾಜಕಾರಣಿಗಳ ಮೇಲೆ ಕೇಸುಗಳಿವೆ.

1991 ರಲ್ಲಿ ಚುನಾವಣೆ ನಡೆದಾಗ ಕಾಂಗ್ರೆಸ್ ಹಿಂದೆಂದೂ ಇಲ್ಲದಂತಹ ಸೋಲನ್ನಪ್ಪಿತು. ಕೇವಲ 140 ಸ್ಥಾನಗಳು. ಈಗ ಬಹುಮತಕ್ಕೆ ಬಹಳ ದೂರ ಇದ್ದರೂ ದೊಡ್ಡ ಪಕ್ಷವಾಗಿ ಬಿಜೆಪಿ ಹೊರಹೊಮ್ಮಿತು. ಮೊಟ್ಟ ಮೊದಲ ಬಾರಿಗೆ ಕೇವಲ 13 ದಿನಗಳ ಬಿಜೆಪಿ ಸರ್ಕಾರ ರಚನೆಯಾಗಿ ಸೋಲನ್ನಪ್ಪಿತು. ಮತ್ತೆ 11 ತಿಂಗಳಲ್ಲಿ ದೇವೇಗೌಡರ ನಾಯಕತ್ವದ ಸಂಯುಕ್ತ ರಂಗ ಸರ್ಕಾರ ರಾಜೀನಾಮೆ. ಆಗಲೇ ನಡೆಯಬೇಕಾಗಿದ್ದ ಚುನಾವಣೆಗಳಿಗೆ ಹೆದರಿ ಸಂಯುಕ್ತ ರಂಗದ ಇತರ ಪಕ್ಷಗಳು ಕಾಂಗ್ರೆಸ್ ಒತ್ತಡಕ್ಕೆ ಮಣಿದು ಗುಜ್ರಾಲ್ ನಾಯಕತ್ವದ ಸರ್ಕಾರವನ್ನು ಅಸ್ತಿತ್ವಕ್ಕೆ ತಂದವು. ಕೆಲವೇ ತಿಂಗಳ ನಂತರ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡು ಚುನಾವಣೆಗಳನ್ನು ಎದುರಿಸಬೇಕಾಯಿತು. ಆ ಸಮಯದಲ್ಲಿ ಚುನಾವಣೆಗೆ ಹೆದರಿದ 60 ಎಂಪಿಗಳನ್ನು ಕೊಳ್ಳಲು ಬಿಜೆಪಿ ವ್ಯಾಪಾರ ಕುದುರಿಸಿತ್ತು. ಇನ್ನು ಕೇವಲ ಏಳು ಎಂಪಿಗಳು ಕಡಿಮೆ ಎಂದು ಯಾವುದೇ ನಾಚಿಕೆ ಇಲ್ಲದೆ ಬಿಜೆಪಿ ರಾಷ್ಟ್ರಪತಿ ಭವನದ ಆವರಣದಲ್ಲಿಯೇ ಹೇಳಿದ್ದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಪೆಟ್ಟಾಗಿತ್ತು.

ಹಣದ ಚೆಲ್ಲಾಟ ಮಾರಾಟ ಎಂಪಿಗಳ ಮೂಲಕ

ಈಗ ಮತ್ತೆ ಸರ್ಕಾರ ಉರುಳಿದೆ. ಉರುಳುವ ಸಮಯದಲ್ಲಿ ಮತ್ತೆ ದೆಹಲಿಯಲ್ಲಿ ಹಣ ಹದ್ದುಗಳ ಕೂಟ, ಹಣದ ಚೆಲ್ಲಾಟ ಎಂಪಿಗಳ ಮಾರಾಟ ನಡೆಯಿತೆಂಬ ಬಗ್ಗೆ ಪತ್ರಿಕೆಗಳು ವರದಿ ಮಾಡಿವೆ. ಸರ್ಕಾರ ಉರುಳುವ ಪ್ರತಿ ಸಮಯದಲ್ಲಿ ಹಣದ ಚೆಲ್ಲಾಟ ಆರಂಭವಾಗಿದೆ. ಎಂಪಿಗಳು ಮಾರಾಟದ ಸರಕಾಗಿದ್ದಾರೆ. ಇಂತಹ ಎಲ್ಲ ಸಂದರ್ಭಗಳಲ್ಲಿ ಅಂಬಾನಿಗಳು, ಹಿಂದೂಜಾಗಳು ಎಂಬ ಹೆಸರುಗಳು ಮತ್ತೆ ಮತ್ತೆ ಕೇಳಿ ಬರುತ್ತವೆ. ಉತ್ತರ ಪ್ರದೇಶದಲ್ಲಿ ಮಾಯಾವತಿ ಸರ್ಕಾರ ಉರುಳಿ ಕಲ್ಯಾಣ ಸಿಂಗ್ ಸರ್ಕಾರ ರಚನೆಯಾದ ಬಗೆಯಂತೂ ಈಗ ಜನಜನಿತವಾಗಿದೆ.

ಆಗ ಪ್ರಶ್ನೆ ಬರುತ್ತದೆ - ಎಂಪಿಗಳ ಈ ಮಾರಾಟಕ್ಕಿಂತ ಅದರಿಂದ ಪಡೆಯುವ ಸ್ಥಿರ ಸರ್ಕಾರಕ್ಕಿಂತ ಈ ಸರ್ಕಾರವನ್ನು ಅಸ್ಥಿರಗೊಳಿ ಮತ್ತೆ ಚುನಾವಣೆ ನಡೆಸುವುದೇ ಒಳ್ಳೆಯದಲ್ಲವೇ?

ಅದಕ್ಕೆ ಉತ್ತರ ಕಂಡುಕೊಳ್ಳಲು ಪಕ್ಷಾಂತರ, ಎಂಪಿಗಳ ಮಾರಾಟಗಳು ನಮ್ಮ ಪ್ರಜಾಪ್ರಭುತ್ವಕ್ಕೆ ತರುತ್ತಿರುವ ಧಕ್ಕೆಯ ಸ್ವರೂಪವೇನೆಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಭಾರತದ ಮತದಾರರು ಚುನಾವಣೆಯ ಮೂಲಕ ತಮ್ಮನ್ನು ಆಳಲು ತಮ್ಮ ಕ್ಷೇತ್ರದಿಂದ ಆರಿಸಿದ ಪ್ರತಿನಿಧಿಗೆ ಅಧಿಕಾರ ನೀಡುತ್ತಾರೆ. ತಾವು ಮತ ನೀಡುವ ಈ ಪ್ರತಿನಿಧಿ ಸಾಮಾನ್ಯವಾಗಿ ಭಾರತದ ಯಾವುದಾದರೊಂದು ರಾಜಕೀಯ ಪಕ್ಷದ ಅಭ್ಯರ್ಥಿಯಾಗಿರುತ್ತಾನೆ. ಈ ರಾಜಕೀಯ ಪಕ್ಷದ ನಾಯಕರು ತಮ್ಮ ಪಕ್ಷ ಜನರಿಗೇನು ಮಾಡಬಯಸುತ್ತದೆ, ಯಾವ ಕಾರಣಕ್ಕಾಗಿ ಮತದಾರರು ತಮಗೇ ಮತ ನೀಡಬೇಕು ಇತರರಿಗೆ ಮತ ನೀಡಬಾರದು ಎಂದು ತಮ್ಮ ಚುನಾವಣಾ ಭಾಷಣಗಳ ಮೂಲಕ, ಚುನಾವಣಾ ಪ್ರಣಾಳಿಕೆಯ ಮೂಲಕ ಆ ಕ್ಷೇತ್ರದಲ್ಲಿರುವ ತಮ್ಮ ಪಕ್ಷದ ಸಂಘಟನೆಯ ಕಾರ್ಯಕರ್ತರ ಮೂಲಕ ಘೋಷಿಸುತ್ತಾರೆ. ಇದನ್ನೇ ಪಕ್ಷಗಳ ಮೂಲಕ ಪ್ರಜಾಪ್ರಭುತ್ವ, ಪಕ್ಷೀಯ ಪ್ರಜಾಪ್ರಭುತ್ವ ಎನ್ನುತ್ತಾರೆ. (Party System)

ಇಂತಹ ಸಂದರ್ಭದಲ್ಲಿ ಒಂದು ಪಕ್ಷವನ್ನು ಬಿಟ್ಟು ಮತ್ತೊಂದು ಪಕ್ಷವನ್ನು ಸೇರುವುದು, ಅಥವಾ ಇಡೀ ಪಕ್ಷವೇ ಮತದಾರರಿಗೆ ನೀಡಿದ ಭರವಸೆಗಳನ್ನು ಗಾಳಿಗೆ ತೂರಿ, ಯಾವ ಪಕ್ಷದ ವಿರುದ್ಧವಾಗಿ ಜನಮತ ನೀಡಿದ್ದಾರೋ, ಆ ಪಕ್ಷಗಳಿಗೆ ಬೆಂಬಲ ಕೊಡುವುದು ಇವು ಲಕ್ಷಾಂತರ ಜನತೆಗೆ ಮಾಡುವ ಮೋಸ. ಆದಕ್ಕಾಗಿಯೇ ಯಾವುದೇ ಪಕ್ಷಾಂತರ ಮಾಡುವವರು ತಮ್ಮ ಚುನಾಯಿತ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಚುನಾವಣೆ ಎದುರಿಸಿ ಮಾತ್ರ ಆಸ್ಥಾನದಲ್ಲಿ ಮುಂದುವರೆಯಬೇಕು ಎಂದು ಸಿಪಿಐ(ಎಂ) ನಂತಹ ಪಕ್ಷಗಳು ಪ್ರತಿಪಾದಿಸುತ್ತವೆ. ಇನ್ನು ಈ ಪಕ್ಷಾಂತರಕ್ಕೆ ಕಾರಣ ಯಾವುದೇ ಸಿದ್ಧಾಂತ ಅಥವಾ ತತ್ವಗಳ ಪ್ರಶ್ನೆಯಿಲ್ಲದೆ ಕೇವಲ ಹಣಕ್ಕಾಗಿ ಮಾರಾಟ ಎನ್ನುವುದಾದರೆ ಆ ಎಂಪಿ ಲಕ್ಷಾಂತರ ಮತದಾರರ ಪ್ರತಿನಿಧಿಯಾಗದೆ ಹಣದ ಥೈಲಿಗಳ ಪ್ರತಿನಿಧಿಯಾಗುತ್ತಾನೆ. (ಬಂಡವಾಳಶಾಹಿಗಳು - ಕೈಗಾರಿಕೆಗಳ ಮಾಲೀಕರು, ದೊಡ್ಡ ವರ್ತಕರು, ಮಾಫಿಯಾ ಗುಂಪುಗಳು ರಾಜಕೀಯ ಪಕ್ಷಗಳಿಗೆ ನೀಡುವ ಕಪ್ಪು ಹಣದ ಪ್ರಭಾವ ಮತ್ತೊಂದು ಪ್ರಶ್ನೆ - ಅದು ಮತದಾರನ ಆಯ್ಕೆಯಾಗುವ ಮೊದಲಿನ ಪ್ರಶ್ನೆ). ಇಂತಹ ಸಂದರ್ಭದಲ್ಲಿ ಪಕ್ಷ ಪದ್ಧತಿಗೇ ಅದರ ಮೇಲೆ ಆಧಾರ ಪಟ್ಟ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದಲೇ ಇಂತಹ ಯಾವುದೇ ಸಂದರ್ಭದಲ್ಲಿ ಮತ್ತೆ ಮತದಾರರ ಬಳಿಗೆ ಹೋಗಿ ಆಡಳಿತ ನಡೆಸಲು ಅಧಿಕಾರವನ್ನು ಪಡೆಯುವುದೇ ಲೇಸು. ಪಕ್ಷಾಂತರವೋ ಚುನಾವಣೆಯೋ ಎಂದಾಗ ಚುನಾವಣೆಯೇ ಆಯ್ಕೆ. ಅದು ಪ್ರಜಾಪ್ರಭುತ್ವವನ್ನು ಮತದಾರನಿಗೆ ಮುಡಿಪು ಮಾಡುವ ಕ್ರಿಯೆ. ಹೀಗೆ ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ದೇಶದ ಎಲ್ಲ ಅಧಿಕಾರವನ್ನು ನೀಡುವ - ಅಂದರೆ ಲೋಕಸಭೆಯೇ ಸರ್ವೋಚ್ಚ ಎನ್ನುವ ತತ್ವ ಪ್ರಜಾಪ್ರಭುತ್ವದ ಮೂಲಾಧಾರ - ಇದನ್ನು ಸಂಸದೀಯ ಪ್ರಜಾಪ್ರಭುತವೆನ್ನುತ್ತಾರೆ. ಹೀಗೆ ಸಂಸದೀಯ ಪ್ರಜಾಪ್ರಭುತ್ವ ಹಾಗೂ ಪಕ್ಷೀಯ ಪದ್ಧತಿ ನಮ್ಮ ಪ್ರಜಾಪ್ರಭುತ್ವದ ಮೂಲ ಲಕ್ಷಣಗಳು

ಮತದಾರರ ತಪ್ಪೇ?

ಯಾವಾಗ ಒಂದೇ ಪಕ್ಷಕ್ಕೆ ಬಹುಮತವನ್ನು ನೀಡಲು ಭಾರತದ ಪ್ರಜೆಗಳು ನಿರಾಕರಿಸಿದರೋ ಅಂದಿನಿಂದ ದೇಶದಲ್ಲಿ ಮತ್ತೆ ಮತ್ತೆ ಸರ್ಕಾರಗಳು ಉರುಳುವುದು, ಚುನಾವಣೆಗಳು ಎಂಬ ಪರಿಸ್ಥಿತಿ ಬಂದೊದಗಿದೆ. ಮತದಾರರು ದೇಶದಲ್ಲಿ ಇಂದು ಇರುವ ಯಾವ ಪಕ್ಷಕ್ಕೂ ಬಹುಮತ ನೀಡಲು ನಿರಾಕರಿಸುತ್ತಿದ್ದಾರೆ. ಅದರಿಂದಾಗಿ ರಾಜಕೀಯ ಅಸ್ಥಿರತೆ ಉಂಟಾಗಿದೆ. ಇದು ಮತದಾರರ ತಪ್ಪೇ? ರಾಜಕೀಯ ಪಕ್ಷಗಳ ಕೊರತೆಯೇ?

ರಾಷ್ಟ್ರೀಯ ಸರ್ಕಾರದ ಸಲಹೆ

ಈಗ ಮತ್ತೆ ಮತ್ತೆ ಸರ್ಕಾರ ಉರುಳುವ ಪರಿಸ್ಥಿತಿ ಬಂದಗೆಲ್ಲಾ ರಾಷ್ಟ್ರೀಯ ಸರ್ಕಾರ ರಚನೆ ಮಾಡಬೇಕು ಎಂದು ಮಾಜಿ ರಾಷ್ಟ್ರಪತಿ ವೆಂಕಟರಾಮನ್ ಮೊದಲಾದ ಕೆಲವರ ಹೇಳಿಕೆ ಮಾಮೂಲಾಗಿದೆ. ರಾಜಕೀಯ ಅಸ್ಥಿರತೆಗೆ ಇದೇ ಮದ್ದು ಎಂದು ಅವರ ಸೂಚನೆ. ರಾಷ್ಟ್ರೀಯ ಸರ್ಕಾರವೆಂದರೇನು? ಸಂಸತ್ತಿನಲ್ಲಿರುವ ಎಲ್ಲ ಪಕ್ಷಗಳೂ ಒಟ್ಟಿಗೆ ಕೂಡಿ ರಚಿಸುವ ಸರ್ಕಾರವೇ ರಾಷ್ಟ್ರೀಯ ಸರ್ಕಾರ. ಇದಕ್ಕೆ ಉಪರಾಷ್ಟ್ರಪತಿ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಬೇಕು ಎನ್ನುವುದು ಕೆಲವರ ಸೂಚನೆ. ವೆಂಕಟರಾಮನ್ ರಾಷ್ಟ್ರಪತಿಯಾಗಿದ್ದಾಗ ರಾಷ್ಟ್ರಪತಿಯೇ ರಾಷ್ಟ್ರೀಯ ಸರ್ಕಾರದ ನೇತಾರನಾಗಿ ಪ್ರಧಾನಿಯಂತೆ ಕಾರ್ಯನಿರ್ವಹಿಸಬೇಕು ಎಂಬ ಸೂಚನೆಯನ್ನು ಕೆಲವರ ಬಾಯಿ ಮೂಲಕ ಹೊರಡಿಸಿದ್ದರು. ಇತ್ತೀಚಿಗೆ ಚಂದ್ರಬಾಬು ನಾಯ್ಡುರವರು ಈ ರೀತಿ ಪ್ರಧಾನಿಯನ್ನು ನೇರವಾಗಿ ಲೋಕಸಭೆ ಚುನಾವಣೆ ಮಾಡುವ ಮೂಲಕ ಆರಿಸಬೇಕು ಎಂದಿದ್ದಾರೆ. ಹಿಂದಿನ ಲೋಕಸಭೆಯ ಸ್ಪೀಕರ್ ಸಂಗ್ಮಾರಂತಹ ಕೆಲವರು ಲೋಕಸಭೆ ಐದು ವರ್ಷಗಳ ಕಾಲ ಶಾಶ್ವತವಾಗಿರಬೇಕು ಸರ್ಕಾರಗಳು ಬೇಕಾದರೆ ಬದಲಾಗಲಿ ಎನ್ನುತ್ತಾರೆ.

ಇದರ ಅರ್ಥ ಒಂದಕ್ಕೊಂದು ವಿರೋಧವಾದ ನೀತಿಯನ್ನು ಹೊಂದಿರುವ, ಆ ಕಾರಣಕ್ಕಾಗಿ ಪರಸ್ಪರ ವಿರೋಧವಾಗಿ ಸ್ಪರ್ಧಿಸಿದ ಹಾಗೂ ಮತದಾರರು ಕೂಡ ಒಂದರ ವಿರುದ್ಧ ಮತ್ತೊಂದಕ್ಕೆ ಮತ ನೀಡಿದ ನಂತರ ಈ ಪಕ್ಷಗಳು ಒಂದೇ ಸರ್ಕಾರ ರಚಿಸಬೇಕು ಎಂದು. ಈ ಸರ್ಕಾರ ಯಾವ ಪಕ್ಷದ ನೀತಿಯನ್ನು ಅನುಸರಿಸಬೇಕು? ಮಸೀದಿಯನ್ನು ಒಡೆಯುವ, ಕ್ರಿಶ್ಚಿಯನ್ನರನ್ನು ಹಿಂಸಿಸುವ ನೀತಿ ಒಂದು ಪಕ್ಷದ್ದು ಅದನ್ನು ವಿರೋಧಿಸುವುದು ಜಾತ್ಯಾತೀತತೆ ಉಳಿದ ಪಕ್ಷಗಳದ್ದು - ಈ ಸರ್ಕಾರ ಯಾವ ನೀತಿ ಅನುಸರಿಸಬೇಕು? ಪೇಟೆಂಟ್ ಬಿಲ್ ತರುವ ನೀತಿ ಕೆಲವು ಪಕ್ಷಗಳದ್ದು ಅದನ್ನು ವಿರೋಧಿಸುವುದು ಕೆಲವು. ಒಟ್ಟಿನಲ್ಲಿ ಭಾರತದ ಪಕ್ಷೀಯ ಪ್ರಜಾಪ್ರಭುತ್ವವನ್ನು ವಿನಾಶ ಮಾಡಲು ಎಂಪಿಗಳ ಮಾರಾಟ, ಪಕ್ಷಾಂತರ ಒಂದು ವಿಧಾನವಾದರೆ ರಾಷ್ಟ್ರೀಯ ಸರ್ಕಾರ ರಚನೆ ಮತ್ತೊಂದು ನಾಗರಿಕ ವಿಧಾನ. ಅಂದರೆ ಮತದಾರರ ಅಭಿಪ್ರಾಯವನ್ನು ಒಂದು ಪಕ್ಷದ ಪ್ರಣಾಳಿಕೆ, ಅಥವಾ ನೀತಿಗಳ ಸಮುಚ್ಚಯಕ್ಕೆ ನಮ್ಮ ಮತ ಇನ್ನೊಂದು ಪಕ್ಷದ ನೀತಿಗಳಿಗಲ್ಲ ಎನ್ನುವ ಅವರ ಸ್ಪಷ್ಟ ಅಭಿಪ್ರಾಯವನ್ನು ಹಳ್ಳಕ್ಕೆ ಹಾಕುವ ನಾಗರಿಕ ವಿಧಾನ.

ಮೇಲುನೋಟಕ್ಕೆ ಈ ಎಲ್ಲಾ ವಿಧಾನಗಳು ಲೋಕಸಭೆಯೇ ಸರ್ವೋಚ್ಚ ಎಂಬ ಪ್ರಜಾಪ್ರಭುತ್ವದ ತತ್ವಕ್ಕೆ ಬದ್ಧ ಎಂದು ಕಂಡರೂ ಈ ಅಧಿಕಾರದ ಮೂಲವಾದ ಮತದಾರರ ಅಭಿಪ್ರಾಯವನ್ನು ಇಲ್ಲಗೈಯುವ ವಿಧಾನ ಆದ್ದರಿಂದ ಪ್ರಜಾಪ್ರಭುತ್ವ ವಿರೋಧಿ ವಿಧಾನ ಹಿಂಬಾಗಿಲಿನಿಂದ ಸರ್ವಾಧಿಕಾರವನ್ನು ತರುವ ವಿಧಾನ.

ಎರಡು ಪಕ್ಷ ಅಥವಾ ದ್ವಿಪಕ್ಷೀಯ ಪದ್ಧತಿ

ನಮ್ಮ ಪ್ರಜಾಪ್ರಭುತ್ವ ಬಿಕ್ಕಟ್ಟಿಗೆ ಮತ್ತೊಂದು ವಿಧಾನವನ್ನು ಸೂಚಿಸಲಾಗುತ್ತಿದೆ. ರಾಮಕೃಷ್ಣ ಹೆಗಡೆಯವರು ಮತ್ತೆ ಮತ್ತೆ ಇದನ್ನು ಹೇಳುತ್ತಿದ್ದರು. ನಮ್ಮ ದೇಶದಲ್ಲಿ ಎರಡು ಪಕ್ಷಗಳ ಪದ್ಧತಿ ಜಾರಿಗೆಬರಬೇಕು. ಅಮೆರಿಕಾದಲ್ಲಿ ದೇಶವ್ಯಾಪಿಯಾದ ಎರಡು ಪಕ್ಷಗಳಿವೆ. ಡೆಮಾಕ್ರೆಟಿಕ್ ಪಕ್ಷ(ಈಗ ಅಧ್ಯಕ್ಷರಾಗಿರುವ ಬಿಲ್‌ಕ್ಲಿಂಟನ್‌ರವರ ಪಕ್ಷ) ರಿಪಬ್ಲಿಕನ್ ಪಕ್ಷ(ಹಿಂದೆ ಅಧ್ಯಕ್ಷರಾಗಿದ್ದ ರೇಗನ್ ಹಾಗೂ ಬುಷ್‌ರವರ ಪಕ್ಷ). ಈ ರೀತಿ ಎರಡೇ ಪಕ್ಷಗಳಿದ್ದರೆ ಅದು ಆರ್ಥಿಕತೆಗೆ ಸ್ಥಿರತೆ ತರುತ್ತದೆ ಎನ್ನುವುದು ಇವರ ವಾದ.

ಈ ವಾದದ ಅರ್ಥ ಏನೆಂದರೆ ಒಂದು ಪಕ್ಷ ಗೆದ್ದು ಆಡಳಿತಕ್ಕೆ ಬರುತ್ತದೆ. ಜನವಿರೋಧಿಯಾದ ಆದರೆ ಬಂಡವಾಳಶಾಹಿ ಪ್ರಿಯ ನೀತಿಗಳನ್ನು ಅನುಸರಿಸುತ್ತದೆ. ಆಗ ಜನರು ಈ ಪಕ್ಷವನ್ನು ಸೋಲಿಸಲು ಮತ್ತೊಂದು ಪಕ್ಷಕ್ಕೆ ಮತ ಹಾಕುತ್ತಾರೆ. ಆಗ ಆ ಪಕ್ಷ ಅಧಿಕಾರಕ್ಕೆ ಬಂದು ಸರಿ ಸುಮಾರು ಅದೇ ಜನ-ವಿರೋಧಿ ಬಂಡವಾಳಶಾಹಿ -ಪ್ರಿಯ ನೀತಿಗಳನ್ನು ಸ್ವಲ್ಪ ವ್ಯತ್ಯಾಸಗಳೊಡನೆ ಅನುಸರಿಸುತ್ತದೆ. ಮತ್ತೆ ಜನ ಈ ಪಕ್ಷವನ್ನು ಸೋಲಿಸಿ ಮೊದಲಿನ ಪಕ್ಷವನ್ನೇ ಅಧಿಕಾರಕ್ಕೆ ತರುತ್ತಾರೆ. ಹೀಗೆ ಪುನರಾವರ್ತನೆಯಾಗುತ್ತಾ ನಡೆದಿದೆ. ಬಂಡವಾಳಶಾಹಿ ಪ್ರಿಯ ನೀತಿಗಳನ್ನೇ ಅನುಸರಿಸುವುದರಿಂದ ಜನರಿಗೆ ಆಯ್ಕೆಯ ಅವಕಾಶವೇ ಇಲ್ಲ ಎಂದೇ ಈ ಪದ್ಧತಿಯ ಅರ್ಥ. ಹೆಚ್ಚು ಪಕ್ಷಗಳಿದ್ದರೆ ಜನಹಿತಕೆ ವಿರೋಧ, ಪ್ರಾಂತೀಯ, ಪ್ರಾದೇಶಿಕ ಪಕ್ಷಗಳು ಕೇವಲ ಪ್ರಾದೇಶಿಕ ದೃಷ್ಟಿಯಲ್ಲಿ ಕೆಲಸ ಮಾಡುತ್ತಾ ರಾಷ್ಟ್ರಹಿತವನ್ನು ಕಡೆಗಣಿಸುತ್ತಿವೆ ಎನ್ನುವ ವಾದಗಳು ಇದಕ್ಕೆ ಪೂರಕವಾಗಿವೆ.

ಇದರ ಜೊತೆಯಲ್ಲಿರುವ ಸೀತಾರಾಂ ಯೆಚೂರಿಯವರ ಲೇಖನದಲ್ಲಿ ವಿವರಿಸಿರುವಂತೆ ನಿರಂತರವಾಗಿ ಅಯೆ ಯಾಗುತ್ತಿದ್ದ ಕಾಂಗ್ರೆಸ್ ಮೋಸವನ್ನು ಹೆಚ್ಚು ಹೆಚ್ಚು ಜನ ಕಂಡುಕೊಳ್ಳುತ್ತಿದ್ದಂತೆ ಆ ಜನರ ಅತೃಪ್ತಿಯನ್ನು ಬಳಸಿಕೊಂಡು ದೇಶದ ವಿವಿಧ ಭಾಗಗಳಲ್ಲಿ ಕಡೆಗಣಿಸಲಾಗಿದ್ದ, ಭಾಷೆ, ಅಭಿವೃದ್ಧಿಯ ಸಮಸ್ಯೆಗಳನ್ನು ಎತ್ತಿಕೊಂಡು ವಿವಿಧ ಪ್ರಾದೇಶಿಕ ಪಕ್ಷಗಳು ಬೆಳೆದಿವೆ. ನಿರ್ಲಕ್ಷಿತ ಜಾತಿಗಳ ಪ್ರಶ್ನೆಗಳೂ ಇವೆ. ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ಎರಡೇ ಪಕ್ಷಗಳು ಎಂದರೆ ಬಿಜೆಪಿ ಮತ್ತು ಕಾಂಗ್ರೆಸ್ ಮಾತ್ರ ಅಧಿಕಾರ ಮಾಡಲು ಅವಕಾಶ ಇರಬೇಕು. ಎರಡೂ ಐಎಂಎಫ್ ನಿರ್ದೇಶಿತ ನೀತಿಗಳನ್ನು ಜಾರಿಗೆ ತರುವುದರಲ್ಲಿ ನಾಮುಂದು ತಾಮುಂದು ಎಂದು ಸ್ಪರ್ಧಿಸುತ್ತಾ ಒಂದು ಆಳುತ್ತಿದ್ದರೆ ಮತ್ತೊಂದು ಮುಂದೆ ಆಳಲು ತಯಾರಾಗುತ್ತಾ ಇರುವ ಪದ್ಧತಿ ಇರಬೇಕು ಎಂದು ಅರ್ಥ. ಭಾರತದ ವಿವಿಧ ಪ್ರದೇಶಗಳ, ಭಾಷೆ, ಸಂಸ್ಕೃತಿಗಳ ಜನರ ಆಸೆ ಆಕಾಂಕ್ಷೆಗಳನ್ನು ಕಾಲ ಕೆಳಗೆ ಹಾಕಿಹೊಸೆದು ಹಾಕುತ್ತಿದ್ದರೂ ಜನರ ಜೀವನವನ್ನು ಬೆಂಕಿಯ ಕುಲುಮೆಗೆ ದೂಡಿದರೂ ಯಾವುದೇ ಬೇರೆ ಆಯ್ಕೆ ಇರಬಾರದು ಎಂದು ಇವರ ಅಭಿಪ್ರಾಯ. ಇದನ್ನು ಭಾರತದ ಜನ ಒಪ್ಪಿಕೊಳ್ಳಬೇಕೆ? ಒಪ್ಪಿಕೊಳ್ಳುತ್ತಾರೆಯೇ?

ಅಧ್ಯಕ್ಷೀಯ ಮಾದರಿ

ಇನ್ನೊಂದು ವಾದ ಬಹಳ ಪ್ರಬಲವಾಗಿ ಮಂಡಿತವಾಗುತ್ತಿರುವುದು ಅಧ್ಯಕ್ಷೀಯ ಮಾದರಿ ಸರ್ಕಾರ. ಇದರಲ್ಲಿ ಪಕ್ಷಗಳು, ಚುನಾವಣೆಗಳು, ಲೋಕಸಭೆ, ವಿಧಾನ ಸಭೆಗಳು ಎಲ್ಲಾ ಇರುತ್ತವೆ. ಆದರೆ ಲೋಕಸಭೆ, ವಿಧಾನಸಭೆಗಳಿಗೆ ಹೆಚ್ಚು ಅಧಿಕಾರವಿಲ್ಲದೆ ಅದು ನೇರವಾಗಿ ಚುನಾಯಿತರಾಗುವ ಅಧ್ಯಕ್ಷರು ಅಥವಾ ರಾಜ್ಯಗಳಲ್ಲಿ ರಾಜ್ಯಪಾಲರಿಗೆ ವರ್ಗಾಯಿಸಲ್ಪಡುತ್ತವೆ. ರಾಷ್ಟ್ರಪತಿ ಹಾಗೂ ರಾಜ್ಯಪಾಲರು ನೇರವಾಗಿ ಜನರಿಂದಲೇ ಚುನಾಯಿತರಾಗುವ ದರಿಂದ ಅವರು ಲೋಕಸಭೆಗೆ ಜವಾಬ್ದಾರರಾಗಿರುವುದಿಲ್ಲ.

ಪುಟ 8 ನೋಡಿ

ಜನತಾದಳದ ಐಕ್ಯ ನಿಲುವಿನ ಪ್ರಾಮುಖ್ಯತೆ

ಪುಟ 2 ರಿಂದ

ಇಂದು ದೇಶದಲ್ಲಿ ಜಾತ್ಯಾತೀತ ಶಕ್ತಿಗಳು ಕೋಮುವಾದಿಗಳ ವಿರುದ್ಧ ಸಾಗಿಸಿರುವ ಸಮರದಲ್ಲಿ ಅನೇಕ ಪಕ್ಷಗಳು ಕೋಮುವಾದಿಗಳ ಬಲೆಗೆ ಬಿದ್ದರೂ ಜನತಾದಳ ತನ್ನೊಳಗಿನ ಅನೇಕ ಭಿನ್ನಾಭಿಪ್ರಾಯಗಳ ನಡುವೆಯೂ ಬಲಿಯಾಗಲಿಲ್ಲ ಎನ್ನುವುದು ಪ್ರಮುಖ ಸಂಗತಿ. ಜೊತೆಗೆ ಜನತಾದಳದ ಗುಂಪುಗಾರಿಕೆ ಕೋಮುವಾದ-ಜಾತ್ಯಾತೀತತೆಗಳ ಬಗೆಗಿನ ಭಿನ್ನಾಭಿಪ್ರಾಯದಿಂದಲ್ಲ, ಅದು ಪಕ್ಷದೊಳಗಿನ ಅಧಿಕಾರಕ್ಕಾಗಿ ಕಚ್ಚಾಟ ಎನ್ನುವುದು ಸ್ಪಷ್ಟ. ಹೀಗಾಗಿಯೇ ಜೆ.ಎಚ್.ಪಟೇಲರ ನಿಲುವಿಗೆ ಅವರ ಗುಂಪಿನಲ್ಲಿಯೇ ಹಲವರು ಬೆಂಬಲಿಸಲಿಲ್ಲ. ಒಟ್ಟಾರೆಯಾಗಿ ಇಂದು ಜನತಾದಳದಲ್ಲಿ ಜಾತ್ಯಾತೀತ ಶಕ್ತಿಗಳು ಮೇಲುಗೈಯಾಗಿವೆ.

ಇದು ರಾಜ್ಯದ ರಾಜಕೀಯದಲ್ಲಿ ಗಣನೀಯ ಬೆಳವಣಿಗೆ. 1998 ರ ಲೋಕಸಭಾ ಚುನಾವಣೆಗಳ ಮುನ್ನಾದಿನಗಳಿಂದಲೇ ನಿರಂತರವಾಗಿ ಜನತಾದಳವನ್ನು ಒಡೆಯಲು ಹಾಗೂ ಬಿಜೆಪಿಯ ತೆಕ್ಕೆಗೆ ಅದರ ಬಹುಭಾಗವನ್ನೊಯ್ಯಲು ರಾಮಕೃಷ್ಣ ಹೆಗಡೆಯವರು ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ ಎನ್ನುವುದು ನಮ್ಮ ಕಣ್ಣ ಮುಂದೆ ಇದೆ. ಏನೆಲ್ಲಾ ಆಮಿಷಗಳನ್ನೊಡ್ಡಿದರೂ ಜನತಾದಳದ ಒಂದು ಸಣ್ಣ ತುಣುಕು ಮಾತ್ರ ಹೆಗ್ಗಡೆಯವರ ಇಡೀ ಪಾಳಯವೇ ಲೋಕಶಕ್ತಿಗೆ ಹೋಗಿ ಈ ಪಕ್ಷಾಂತರಗಳ ಮೂಲಕ ರಾಜ್ಯ ಸರ್ಕಾರವನ್ನು ಹಿಡಿಯಬಹುದು ಎಂದು ಹೆಗ್ಗಡೆ ಭಾವಿಸಿದ್ದರು. ಅದಕ್ಕಾಗಿ ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾದವು. ಇತ್ತೀಚಿನ ದಿನಗಳಲ್ಲಿ ಮತ್ತೆ ಮತ್ತೆ ಹೆಗ್ಗಡೆ ಜೆ.ಎಚ್.ಪಟೇಲರಿಗೆ ಕರೆ ನೀಡಿದರು. ಇನ್ನೇನು ವಿಭಜನೆಯಾಗಿಯೇ ಹೋಯಿತು ಎನ್ನುವ ಸುದ್ದಿಗಳು ಗಾಢವಾಗಿ ಹಬ್ಬಿದವು. ಆದರೆ ಜನತಾದಳ ಜಾತ್ಯಾತೀತ ಶಕ್ತಿಯಾಗಿ ಒಗ್ಗಟ್ಟಾಗಿ ಉಳಿಯುವ ನಿರ್ಧಾರ ತೆಗೆದುಕೊಂಡಿದ್ದು ಕೋಮುವಾದಿ ಶಕ್ತಿಗಳ, ಹಾಗೂ ಅವರ ಜೊತೆ ಸೇರಿ ಕೋಮುವಾದದ ಪರ ರಾಜಕೀಯ ಧ್ರುವೀಕರಣ ಮಾಡುವ ಹೆಗ್ಗಡೆಯವರ ಪ್ರಯತ್ನಕ್ಕೆ ಮತ್ತೊಮ್ಮೆ ಸೋಲುಂಟಾಗಿದೆ. ಜನತಾದಳ ಒಡೆಯುವ ಬದಲು ಲೋಕಶಕ್ತಿ ಒಡೆದಿದೆ. ಆದರಿಂದಾಗಿ ದುರ್ಬಲವಾಗಿದೆ. ಜನತಾದಳ ತನ್ನ ಒಗ್ಗಟ್ಟನ್ನು ಮುಂದುವರಿಸಿದಷ್ಟೂ ಲೋಕಶಕ್ತಿ ಮತ್ತಷ್ಟು ದುರ್ಬಲವಾಗುತ್ತದೆ. ರಾಜ್ಯದಲ್ಲಿ ಬಿಜೆಪಿಯ ಜೊತೆಸೇರಿ ಜಾತ್ಯಾತೀತ ಶಕ್ತಿಯನ್ನು ದುರ್ಬಲ ಮಾಡಿದ ಒಂದು ಮುಖ್ಯ ಆಧಾರ ಕುಸಿಯಬೇಕು. ಜನತಾದಳ ನಾಯಕರು ಇತ್ತೀಚೆಗೆ ತೆಗೆದುಕೊಂಡ ತೀರ್ಮಾನಕ್ಕೆ ಪ್ರಾಮುಖ್ಯತೆ ಈ ಕಾರಣಕ್ಕಾಗಿಯೇ.

ಜನತಾದಳ ರಾಜ್ಯ ಸರ್ಕಾರ ತನ್ನ ಆರ್ಥಿಕ ನೀತಿಗಳಿಂದ ಹಾಗೂ ಜನವಿರೋಧಿ, ಕಾರ್ಮಿಕ ವಿರೋಧಿ ಕ್ರಮಗಳಿಂದ ಜನರ ಅಪ್ರೀತಿಯನ್ನು ಸಾಕಷ್ಟು ಗಳಿಸಿಕೊಂಡಿದೆ ಎಂಬುದು ಹಾಗೂ ಅದರಿಂದಾಗಿಯೇ 1996 ರ ಚುನಾವಣೆಯಲ್ಲಿ ಹದಿನಾರು ಸ್ಥಾನಗಳನ್ನು ಗೆದ್ದ ಜನತಾದಳ1998 ರಲ್ಲಿ ಬಿಜೆಪಿ ತನ್ನ ಸ್ಥಾನಗಳನ್ನು 15 ಕ್ಕೆ ಹೆಚ್ಚಿಸಿಕೊಳ್ಳಲು ಕಾರಣವಾಯಿತು ಎಂಬುದೂ ಸತ್ಯ. ಆದರೆ 1998 ರ ರಾಜಕೀಯ ಪರಿಸ್ಥಿತಿ ಬೇರೆ. 1999 ರ ಪರಿಸ್ಥಿತಿ ಬೇರೆ. ಜನಕ್ಕೆ ಬಿಜೆಪಿಯ ಬಗ್ಗೆ ಇದ್ದ ಭ್ರಮೆ ಬಹಳಷ್ಟು ಹರಿದುಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ಮಧ್ಯಪ್ರದೇಶ, ದೆಹಲಿ; ರಾಜಸ್ಥಾನಗಳಲ್ಲಾದಂತೆ ಅತೃಪ್ತಿಗಳ ಸೆಣಸಾಟ, ಜನತೆಗೆ ಬಿಜೆಪಿ ವಿರುದ್ಧ ಅತೃಪ್ತಿ ಹೆಚ್ಚೋ ಅಥವಾ ಕಾಂಗ್ರೆಸ್ ವಿರುದ್ಧ ಅತೃಪ್ತಿ ಇನ್ನೂ ಎಷ್ಟು ಉಳಿದಿದೆ ಎಂಬುದರ ನಡುವಿನ ಮೇಲಾಟ. ಇದು ಸ್ಪಷ್ಟವಾಗುವುದು ಚುನಾವಣೆಯ ನಂತರವೇ ಎನ್ನುವುದು ನಿಜವಾದರೂ ಪರಿಸ್ಥಿತಿ 1998 ಕ್ಕಿಂತ ಭಿನ್ನ ಎಂಬುದಂತೂ ಸ್ಪಷ್ಟ.

ನಮ್ಮ ಪತ್ರಿಕೆ ಹಲವುಬಾರಿ ವ್ಯಕ್ತಪಡಿಸಿರುವಂತೆ ಜನತಾದಳವೂ ಕೂಡ ತನ್ನ ಆರ್ಥಿಕ ನೀತಿಯನ್ನು ಬದಲಿಸಿಕೊಳ್ಳದಿದ್ದರೆ, ಕಾಂಗ್ರೆಸ್ನ ಹೊಸ ಆರ್ಥಿಕ ನೀತಿಗಳನ್ನೇ ಮುಂದುವರಿಸಿದರೆ ಜನತಾದಳದ ರಾಜಕೀಯ ಅವಕಾಶ ಕುಗ್ಗುತ್ತದೆ ಮತ್ತು ಒಡೆಯುತ್ತದೆ. ಪರ್ಯಾಯವಾದ ಆರ್ಥಿಕ ನೀತಿಗಳನ್ನು ಅನುಸರಿಸಿದರೆ ಬೆಳೆಯುತ್ತದೆ. ಆದರೆ ಜನತಾದಳ ಹೊಸ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿದೆ ಎಂದರೂ ಕಾಂಗ್ರೆಸ್ನಂತೆ ದೊಡ್ಡ ಬಂಡವಾಳಶಾಹಿಗಳ ವಾಹಕವಾಗಲು ಸಾಧ್ಯವಿಲ್ಲ. ದೇಶದ ಪ್ರಭುತ್ವದ ಚುಕ್ಕಾಣಿ ಹಿಡಿದು ಇಡೀ ದೇಶವನ್ನು ಸಾಮ್ರಾಜ್ಯಶಾಹಿಗೆ ಅಡಿಯಾಳಾಗಿಸುವುದು ಅದರ ಶಕ್ತಿಗೆ ಮೀರಿದ ಮಾತು. ಆದ್ದರಿಂದ ಸಿಪಿಐ(ಎಂ) ಪಕ್ಷದ ಮಹಾಧಿವೇಶನ ಸಾರಿದಂತೆ 'ಎಡಶಕ್ತಿಗಳು ಪ್ರಮುಖ ಪಾತ್ರವಹಿಸುವ ಸಾಮೂಹಿಕ ಚಳುವಳಿಗಳು ಜಾತ್ಯಾತೀತ ಬಂಡವಾಳಶಾಹಿ ಪಕ್ಷಗಳ ಮೇಲೂ ಪ್ರಭಾವ ಬೀರುವಂತಾದಾಗ ಮಾತ್ರ ಪರ್ಯಾಯ ಧೋರಣೆಗಳು ರೂಪುಗೊಳ್ಳಲು ಸಾಧ್ಯ. ಆದ್ದರಿಂದ ಎಡಶಕ್ತಿಗಳ ಮೇಲೆ ಕೂಡ ದೊಡ್ಡ ಹೊಣೆ ಇದೆ.

ಮೇ ದಿನಾಚರಣೆ

ಮಂಗಳೂರು - ಬೃಹತ್ ಮೆರವಣಿಗೆ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಿಐಟಿಯು ನೇತೃತ್ವದಲ್ಲಿ ಮಂಗಳೂರಿನಲ್ಲಿ ಎಸ್.ಕೆ.ಟೈಲ್ ವರ್ಕ್ಸ್ ಯೂನಿಯನ್ ಕಛೇರಿಯಿಂದ ಕಾರ್ಮಿಕರ ಬೃಹತ್ ಮೆರವಣಿಗೆ ನಗರದ ಬೀದಿಗಳಲ್ಲಿ ಸಂಚರಿಸಿ ಭಾರತ್ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಸಭೆಯಲ್ಲಿ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಬಿ.ಮಾಧವ ಮಾತನಾಡಿ ಕಾರ್ಮಿಕ ಕಾನೂನುಗಳಿಗೆ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ತರುವ ಯತ್ನದಲ್ಲಿದ್ದ ಕೋಮುವಾದಿ ಸರ್ಕಾರ ಪತಗೊಂಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಇದೆ ಸಂದರ್ಭದಲ್ಲಿ ಕಾರ್ಮಿಕ ಮುಖಂಡ ವಸಂತ ಆಚಾರಿ ಮಾತನಾಡಿದರು.

ರಾಮದುರ್ಗ: ಬೀಡಿ ಕಾರ್ಮಿಕರು, ಅಂಗನವಾಡಿ ಕಾರ್ಮಿಕರು, ವಸತಿ ರಹಿತರ ಸಂಘದವರು ಕೂಡಿ ವಿಜೃಂಭಣೆಯಿಂದ ವಿಶ್ವಕಾರ್ಮಿಕ ದಿನಾಚರಣೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುವ ಮೂಲಕ ಆಚರಿಸಿದರು.

ನಂತರ ನಡೆದ ಸಭೆಯಲ್ಲಿ ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿ, ಎಸ್. ನಾಗಕಲಾಲ್ ರವರು ಮಾತನಾಡಿ ದರು. ಇದೇ ಸಂದರ್ಭದಲ್ಲಿ ನಾಗಪ್ಪ ಸಂಗೊಳ್ಳಿ, ಪತ್ರುಸಾಬ ನದಾಫ, ಕಾಳಮ್ಮ ಸಂಬಾಳ, ಜುಬೇದಾ ಪೆಂಡಾರಿ, ಪಾತಿಮಾ ತಾಸ 'ಗಾಂವ ಮುಂತಾದವರು ಉಪಸ್ಥಿತರಿದ್ದರು. ಗೈಜುಖಾನ್ ಸ್ವಾಗತಿಸಿ ವಂದಿಸಿದರು.

ಹುಬ್ಬಳ್ಳಿ - ಧಾರವಾಡ: ಶೋಷಣೆ ವಿರುದ್ಧ ಹೋರಾಟದ ಪ್ರತಿಜ್ಞೆ: ಸಿಐಟಿಯು ನೇತೃತ್ವದ ಕಾರ್ಮಿಕರು, ವಿಮಾ ನೌಕರರು ಮತ್ತು ಗ್ರಾಮ ಪಂಚಾಯತಿ ನೌಕರರು ಧಾರವಾಡದ ಕಡಪ ಮೈದಾನದಲ್ಲಿ ಸಮಾವೇಶಗೊಂಡು ಮೇ ದಿನದ ಸ್ಫೂರ್ತಿ ಚೇತನಗಳನ್ನು ಮೈಗೂಡಿಸಿಕೊಂಡು ಶೋಷಣೆ ವಿರುದ್ಧ ಹೋರಾಟದ ಪ್ರತಿಜ್ಞೆ ಕೈಗೊಂಡರು.

ಬಹಿರಂಗ ಸಭೆಯಲ್ಲಿ ವಿಮಾ ನೌಕರರು ಸಂಘದ ಬಿ.ಎಸ್.ಪೂಜಾರಿ, ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಜಿಲ್ಲಾ ಸಂಚಾಲಕರಾದ ರಾಘವೇಂದ್ರ ಆಯಿ, ನಗರ ಪಾಲಿಕೆ ಸದಸ್ಯರಾದ ಶಂಕರ್ ಕುಂಟೆ ಮಾತನಾಡಿ ಸಮಾಜವಾದಿ ಮಾರ್ಗವೇ ಜನಹಿತ ಸಾಧಿಸಬಲ್ಲದೆಂದರು. ಅಧ್ಯಕ್ಷತೆಯನ್ನು ಸಿ.ಆರ್.ಭಟ್ ವಹಿಸಿದ್ದರು.

ಸಮುದಾಯ ತಂಡದವರಿಂದ 'ಕೇಸರಿ, ಬಿಳಿ, ಹಸಿರು' ಬೀದಿ ನಾಟಕ ಪ್ರದರ್ಶನ ನಡೆಯಿತು.

ಚಿಕ್ಕಮಗಳೂರು: ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಮೆರವಣಿಗೆ ನಗರದ ಬೀದಿಗಳಲ್ಲಿ ಸಂಚರಿಸಿತ್ತು. ಐದು ನೂರಕ್ಕೂ ಹೆಚ್ಚಿದ ಮೆರವಣಿಗೆಯಲ್ಲಿ ವಿವಿಧ ಬಿತ್ತಿ ಪತ್ರಗಳು, ಬ್ಯಾನರುಗಳು ನಗರದ ಜನಮತ ಸೆಳೆಯಿತು. ಹಾಸನದ ಡಿವೈಎಫ್ಐ ಸಂಗಾತಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಮಲೆನಾಡು ವಿದ್ಯುತ್ ಸಂಸ್ಥೆ ಆವರಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ವಿ.ಸುಕುಮಾರ್, ಸ್ಥಳೀಯ ಮುಖಂಡರಾದ ಎ.ಕೆ.ವಿಶ್ವನಾಥ, ಡಿವೈಎಫ್ಐ ಬಿ.ಆರ್.ರಾಜಕುಮಾರ್ ದನಸಿಂಗ್ ನಾಯಕ್, ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಬಿ.ಸುಬ್ಬಯ್ಯ ಮೊದಲಾದವರು ಮಾತನಾಡಿದರು. ಕೇಶವಮೂರ್ತಿ ವಂದಿಸಿದರು.

ಭಟ್ಕಳ: ತಾಲೂಕಿನ ಮುರುಡೇಶ್ವರದಲ್ಲಿ ವಿವಿಧ ಹಂಚು ಕಾರ್ಖಾನೆ ಕಾರ್ಮಿಕರು, ಔಷಧ ಕಾರ್ಖಾನೆ ಕಾರ್ಮಿಕರು ಅಂಗನವಾಡಿ ನೌಕರರು ಸೇರಿದಂತೆ ನೂರಾರು ಕಾರ್ಮಿಕರು ಆಕರ್ಷಕ ಮೆರವಣಿಗೆ ಹಾಗೂ ಸ್ವಯಂ ಸೇವಕರ ಪಥಸಂಚಲನದ ಮೂಲಕ ಮೇ ದಿನಾಚರಣೆ ಆಚರಿಸಿದರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಶಂಕರ್, ಪ್ರಾಂತ ರೈತ ಸಂಘದ ಯು.ದಾಸಭಂಡಾರಿ ಮೊದಲಾದವರು ಮಾತನಾಡಿದರು. ಪ್ರಸ್ತಾವನೆಯನ್ನು ಜಿಲ್ಲಾ ಹೆಂಚು ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ಸುಭಾಷ ಕೊಪ್ಪಿಕರ ಮಾಡಿದರು. ಅಧ್ಯಕ್ಷತೆಯನ್ನು ಮುನ್ವೇಲ್ ಡಿಕೋಸತ್ತ ವಹಿಸಿದ್ದರು.

ಪ್ರಜಾಪ್ರಭುತ್ವವನ್ನೇ ಕೊಲ್ಲುವ ವಿಚಿತ್ರ ಚಿಕಿತ್ಸೆಗಳು

ಪುಟ 7 ರಿಂದ

ಅವರ ಮಂತ್ರಿಮಂಡಲವೂ ನೇರವಾಗಿ ಅಧ್ಯಕ್ಷರಿಗೇ ಜವಾಬುದಾರಿ. ಹೀಗಾಗಿ ಸಂಸತ್ತಿನ ಲೋಕಸಭೆಯ ಅಧಿಕಾರವೆಲ್ಲಾ ರಾಷ್ಟ್ರಪತಿಯಲ್ಲಿ ಕೇಂದ್ರೀಕೃತವಾಗುತ್ತದೆ. ಈಗಿನ ಸಂವಿಧಾನದಲ್ಲಿಯೇ ಕೇಂದ್ರ ಸರ್ಕಾರವನ್ನು ನೇಮಕ ಮಾಡುವವರಾಗಿ, ರಾಜ್ಯ ಸರ್ಕಾರಗಳನ್ನು ನೇಮಕ ಮಾಡುವ ರಾಜ್ಯಪಾಲರನ್ನು ನೇಮಕ ಮಾಡುವವರಾಗಿ, ಸುಪ್ರೀಂಕೋರ್ಟ್, ಹೈಕೋರ್ಟ್‌ಗಳ ನ್ಯಾಯಾಧೀಶರನ್ನು ನೇಮಕ ಮಾಡುವವರಾಗಿ ಹಾಗೂ ಎಲ್ಲಾ ಸೇನಾ ಪಡೆಗಳ ಸರ್ವೋಚ್ಚ ದಂಡನಾಯಕರಾಗಿ ಅವರಲ್ಲಿ ಬಹಳ ಅಧಿಕಾರ ಕೇಂದ್ರೀಕೃತವಾಗಿದೆ.

ಆಗ್ಗಾಗ್ಗೆ ರಾಜಕೀಯ ಬಿಕಟ್ಟುಗಳ ಸಮಯದಲ್ಲಿ ಕೆಲವು ರಾಷ್ಟ್ರಪತಿಗಳು ಈ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವ ಮನಸ್ಸನ್ನು ತೋರಿದ್ದಾರೆ. ದೇಶದ ರಾಜಕೀಯ ಪಕ್ಷಗಳ ಎಚ್ಚರ ಅವರು ಈ ರೀತಿ ತಮ್ಮ ಅಧಿಕಾರವನ್ನು ಅತಿಕ್ರಮಿಸದಂತೆ ಮಾಡಿದೆ. ಅದಕ್ಕೆ ಒಂದು ಉದಾಹರಣೆ ಸ್ವತಃ ವೆಂಕಟರಾಮನ್ ರವರೇ ಆಗಿದ್ದಾರೆ. ರಾಜೀವ ಗಾಂಧಿಯವರಿಗೆ ಲೋಕಸಭೆಯಲ್ಲಿ ಬಹುಮತವಿದ್ದಾಗಲೇ ಅವರ ಸರ್ಕಾರವನ್ನು ವಜಾ ಮಾಡುವ, ತಾವೇ ಅಧಿಕಾರ ವಹಿಸಿಕೊಳ್ಳುವ ತಹ ತಹ ತೋರಿದ್ದರು. ಜೈಲ್ ಸಿಂಗ್ ರವರು ಇದೇರೀತಿಯ ಪ್ರವೃತ್ತಿ ತೋರಿಸಿದ್ದರು. ತಮಗೆ ಇರುವ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವ ಈ ಆತುರಕ್ಕೆ ಇರುವ ಒಂದೇ ತಡೆಯೆಂದರೆ ರಾಷ್ಟ್ರಪತಿ ಕೇಂದ್ರ ಮಂತ್ರಿಮಂಡಲದ ಶಿಫಾರಸು ಇಲ್ಲದೆ ಯಾವ ಕ್ರಮವನ್ನು ತೆಗೆದುಕೊಳ್ಳಬಾರದು ಎಂಬ ಸಂವಿಧಾನ ನಿಯಂತ್ರಣ. ಇದನ್ನು ತುರ್ತು ಪರಿಸ್ಥಿತಿಯ ಸರ್ವಾಧಿಕಾರದೊಡನೆ ದೇಶ ಹೋರಾಡುತ್ತಾ ಹೊರಬಂದ ಮೇಲೆ ಸಂವಿಧಾನಕ್ಕೆ ತಂದ ತಿದ್ದುಪಡಿಯ ಫಲ. ಇಂತಹ ಸರ್ಕಾರವೊಂದು ಲೋಕಸಭೆಯ ವಿಶ್ವಾಸದ ಆಧಾರ ಮೇಲೆ ಮಾತ್ರ ಕೆಲಸ ಮಾಡಬೇಕು ಎನ್ನುವುದು ಸಂವಿದಾನದ ಮತ್ತೊಂದು ಕಲಂ.

ಹೀಗೆ ಜನರಿಂದ ಆಯ್ಕೆಯಾದ ಲೋಕಸಭೆ, ಲೋಕಸಭೆಯ ನಿಯಂತ್ರಣದಲ್ಲಿ ಕೆಲಸ ಮಾಡುವ ಸರ್ಕಾರ, ಈ ಸರ್ಕಾರದ ಶಿಫಾರಸಿನ ಮೇಲೆ ಮಾತ್ರ ಕ್ರಮ ತೆಗೆದುಕೊಳ್ಳಬಹುದಾದ ಹಾಗೂ ಸರ್ಕಾರಕ್ಕೆ ಬುದ್ದಿವಾದ ಹೇಳುವ ಅವರನ್ನು ಸಂವಿಧಾನದ ಮಿತಿಯಲ್ಲಿ ಕೆಲಸ ಮಾಡುವಂತೆ ಎಚ್ಚರ ವಹಿಸುವ ರಾಷ್ಟ್ರಪತಿ ಎನ್ನುವ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನು ನಾವು ಪಡೆದಿರುವುದೂ ನಮ್ಮಲ್ಲಿ ಪ್ರಜಾಪ್ರಭುತ್ವ ಉಳಿದಿರುವದಕ್ಕೆ ಮುಖ್ಯ ಕಾರಣ. ಈ ನಿಯಂತ್ರಣವೂ ಇಲ್ಲದಿದ್ದರೆ ರಾಷ್ಟ್ರಪತಿ ಒಬ್ಬ ಸರ್ವಾಧಿಕಾರಿಯಾಗಿ ಪ್ರಜಾಪ್ರಭುತ್ವದ ವಿನಾಶಕ್ಕೆ ಕಾರಣರಾಗುವುದರಲ್ಲಿ ಸಂಶಯವಿಲ್ಲ.

ಮೂರನೇ ಜಗತ್ತಿನ ದೇಶಗಳ ಅನುಭವ

ನಮ್ಮಂತೆಯೇ ಹೊಸತಾಗಿ ಸ್ವಾತಂತ್ರ್ಯ ಪಡೆದ ನೆರೆಯ ದೇಶಗಳನ್ನು ಇತರ ಅಲಿಪ್ತ ದೇಶಗಳನ್ನು ನೋಡಬಹುದು. ಅಲ್ಲಿ ಇದ್ದ ಪ್ರಜಾಪ್ರಭುತ್ವವನ್ನು ಅಧ್ಯಕ್ಷೀಯ ಪದ್ಧತಿಯ ಹೆಸರಿನಲ್ಲಿಯೇ ನಾಶ ಮಾಡಲಾಯಿತು. ಅದು ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾದ ಉದಾಹರಣೆ ಮಾತ್ರವಲ್ಲ ಫಿಲಿಪೈನ್ಸ್, ಕೊರಿಯಾ, ಬ್ರೆಜಿಲ್, ಮೆಕ್ಸಿಕೋ ಮೊದಲಾದ ದೇಶಗಳ ಅನುಭವ ಕೂಡಾ ಇದೆ.

ಜೊತೆಗೆ ಹಲವು ಭಾಷೆ, ಜಾತಿಗಳ ಗಿರಿಜನ ಬುಡಕಟ್ಟುಗಳ ಒಂದು ಉಪಖಂಡದಂತಹ ವಿಶಾಲ ಪ್ರದೇಶವಾಗಿರುವ ಭಾರತದ 100 ಕೋಟಿಗೂ ಮೀರಿದ ಜನರ ಆಶೋತ್ತರಗಳನ್ನು ಒಬ್ಬ ವ್ಯಕ್ತಿ ಅರಿತು ಸ್ಪಂದಿಸಬಲ್ಲನೇ ಎಂಬ ವಿಷಯವೂ ಪ್ರಮುಖ.

ಹೀಗೆ ಅಧ್ಯಕ್ಷೀಯ ಮಾದರಿ ಆಡಳಿತ ರಾಜ್ಯದಲ್ಲಿ ಚುನಾಯಿತ ರಾಜ್ಯಪಾಲರ ಆಡಳಿತವೂ ಹೌದು. ನಮ್ಮ ಅನೇಕ ರಾಜ್ಯಗಳ ಮುಖ್ಯಮಂತ್ರಿಗಳಂತಹ ವ್ಯಕ್ತಿಗಳು ರಾಜ್ಯಪಾಲರಾಗಿ ಚುನಾಯಿತರಾಗಿ ಎಲ್ಲ ಅಧಿಕಾರ ಅವರಲ್ಲಿಯೇ ಕೇಂದ್ರೀಕೃತವಾದರೆ ಏನಾಗಬಹುದು ಯೋಚಿಸಿ.

ಅಧ್ಯಕ್ಷರ ನೇರ ಚುನಾವಣೆಯೆಂದರೆ ಇಡೀ ದೇಶದಲ್ಲಿ ಪರಿಚಿತರಾದ ವ್ಯಕ್ತಿಗಳಿಗೆ ಮಾತ್ರ ಅವಕಾಶ. ಅಂದರೆ ಒಂದೆರಡು ದೊಡ್ಡ ಪಕ್ಷಗಳ ನಾಯಕರು - ದೇಶದ ಟಿ.ವಿ. ದೂರದರ್ಶನ, ಪತ್ರಿಕೆಗಳಲ್ಲಿ ಸದಾ ಸುದ್ದಿಯಲ್ಲಿರುವವರು. ಮುಖ ಕಾಣಿಸುವವರು ಮಾತ್ರ ಯಶಸ್ವಿಯಾಗಲು ಅವಕಾಶ. ಅಂದರೆ ಅಧ್ಯಕ್ಷೀಯ ಮಾದರಿಯೆಂದರೆ ಪತ್ರಿಕೆಗಳ ಟಿ.ವಿ. ದೂರದರ್ಶನಗಳ ಮಾಲೀಕರು ಯಾರನ್ನು ಆಕಾಶದೆತ್ತರಕ್ಕೆ ಏರಿಸಿ ಹೊಗಳುತ್ತಾರೋ ಅವರೇ ಸ್ಪರ್ಧೆಗೆ ಅರ್ಹ- ಆಗಾಗ್ಗೆ ರಾಮಕೃಷ್ಣ ಹೆಗಡೆ, ಚಂದ್ರ ಬಾಬು ನಾಯ್ಡು, ಶೇಷನ್ ಇಂತಹವರು ಅಥವಾ ಕಾಂಗ್ರೆ, ಬಿಜೆಪಿಗಳ ರಾಷ್ಟ್ರ ನಾಯಕರು ಮಾತ್ರ ಎಂದರ್ಥ. ಜನರ ನಡುವೆ ಕೆಲಸ ಮಾಡುತ್ತಾ ಒಂದು ಪ್ರದೇಶದ ಜನರ ಪ್ರೀತಿ ಗಳಿಸಿರುವವರೆಲ್ಲಾ ಅನರ್ಹ. ಇಂತಹದೊಂದು ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿಗಳನ್ನು ಸಾಬೂನು, ಟೂಥ್ ಪೇಸ್ಟ್‌ಗಳಂತೆ ಮಾರುವುದಕ್ಕೆ ಹೆಚ್ಚು ಪ್ರಾಮುಖ್ಯತೆ. ರಾಜಕೀಯ ಪಕ್ಷದ ಧೋರಣೆ ಸಿದ್ಧಾಂತಗಳಿಗಲ್ಲ. ಇಂತಹ ಅಧ್ಯಕ್ಷರ ಮಾರಾಟಕ್ಕೆ ಈಗಿನ ಚುನಾವಣೆಗಳಿಗಿಂತ ಅತ್ಯಂತ ಹೆಚ್ಚು ಹಣ ಸುರಿಯಬೇಕು, ದೊರೆಯಬೇಕು. ಈ ಹಣಕ್ಕಾಗಿ ಹಣ ಹದ್ದುಗಳ ಕೈ ಗೊಂಬೆಯಾಗಬೇಕು.

ಒಟ್ಟಿನಲ್ಲಿ ಅಧ್ಯಕ್ಷೀಯ ಮಾದರಿ ಎಂಬುದು ಸಂಸದೀಯ ಪ್ರಜಾಪ್ರಭುತ್ವದಲ್ಲಿರುವ ನೈಜ ಪ್ರಜಾಸತ್ತಾತ್ಮಕ ಹೂರಣವನ್ನು ತೆಗೆದು ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧ್ಯಕ್ಷೀಯ ಸರ್ವಾಧಿಕಾರವನ್ನು ಹೇರುವುದು ಎಂದರ್ಥ.

ಅಸ್ಥಿರತೆ ಹೇಗೆ?

ನಮ್ಮ ದೇಶದ ಜನ ಇಂದು ಪ್ರಬಲವಾಗಿರುವ ರಾಜಕೀಯ ಪಕ್ಷಗಳಿಗೆ - ಕಾಂಗ್ರೆ ಹಾಗೂ ಬಿಜೆಪಿಗಳಿಗೆ - ಅವು ಅನುಸರಿಸುತ್ತಿರುವ ನೀತಿ, ಧೋರಣೆಗಳು ಜನರಿಗೆ ಅನುಕೂಲವಾಗಿಲ್ಲ, ನೀವು ನಮ್ಮನ್ನು ಬಡವರನ್ನಾಗಿ, ನಿರುದ್ಯೋಗಿಗಳನಾಗಿ ಮಾಡುತ್ತಿದ್ದೀರಿ ಆದ್ದರಿಂದ ನೀವು ನಮ್ಮನ್ನಾಳಲು ಯೋಗ್ಯರಲ್ಲ ಎಂದು ಹೇಳುತ್ತಿದ್ದಾರೆ.

1989 ರಿಂದ ಇಲ್ಲಿಯವರೆಗಿನ ಎಲ್ಲಾ ಚುನಾವಣೆಗಳಲ್ಲಿ ಇದನ್ನು ಮತ್ತೆ ಮತ್ತೆ ಹೇಳುತ್ತಿದ್ದಾರೆ. ಈ ಪಕ್ಷಗಳು ತಮ್ಮ ನೀತಿಯನ್ನು ಬದಲಿಸಿಕೊಂಡು ಜನರ ಜೀವನವನ್ನು ಉತ್ತಮ ಪಡಿಸುವ ಕಾರ್ಯಕ್ರಮಗಳ ಮೂಲಕ ಜನರನ್ನು ಒಲಿಸಿಕೊಳ್ಳಲು ನಿರಾಕರಿಸುತ್ತಿರುವುದೇ ಈ ಪಕ್ಷಗಳಿಗೆ ಬಹುಮತವನ್ನು ನಿರಾಕರಿಸಲು ಕಾರಣ. ಆದರೆ ಈ ಬಂಡವಾಳಗಾರರ ಹಾಗೂ ಭೂಮಾಲಕರ ಹಿತ ಕಾಯಲು ರೂಪುಗೊಂಡಿರುವ ಈ ಪಕ್ಷಗಳು ಜನರನ್ನು ಆ ಮೂಲಕ ಒಲಿಸಿಕೊಳ್ಳುವ ಕಾರ್ಯಕ್ರಮಕ್ಕೆ ತಯಾರಿಲ್ಲ. ಅಸ್ಥಿರತೆ ಉದ್ಭವಿಸಿರುವುದು ಬಂಡವಾಳಶಾಹಿ ರಾಜಕೀಯ ಪಕ್ಷಗಳ ಈ ನೀತಿಯಿಂದ. ಆದ್ದರಿಂದಲೇ ಜನತೆ ಒಂದು ಪಕ್ಷವನ್ನು ಬಿಟ್ಟು ಮತ್ತೊಂದು, ಮಗದೊಂದು ಪಕ್ಷಗಳನ್ನು ಆರಿಸುತ್ತಿರುವುದು ಕೂಡ.

ಆದರೆ ಜನರು ತಮ್ಮನ್ನು ನಿರಾಕರಿಸುತ್ತಿರುವಾಗಲೂ ತಮ್ಮ ಆಡಳಿತವನ್ನು ಉಳಿಸಿಕೊಳ್ಳಲು ಅಥವಾ ಸಾಧಿಸಿಕೊಳ್ಳಲು, ಅಂದರೆ ಜನರ ಇಚ್ಛೆಗೆ ವಿರುದ್ಧವಾಗಿ ಅಧಿಕಾರದಲ್ಲುಳಿಯಲು ಹತಾಶೆಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದರ ಫಲವೇ ಅಧ್ಯಕ್ಷೀಯ ಮಾದರಿ ಮುಂತಾದ ಈ ಯೋಚನೆಗಳು. ಅಂದರೆ ಜನತೆಯ ಇಚ್ಛೆಗೆ ತಕ್ಕಂತೆ ತಮ್ಮನ್ನು ಬದಲಾಯಿಸಿಕೊಳ್ಳಲು ನಿರಾಕರಿಸುವ ಆಳುವ ವರ್ಗದ ಪಕ್ಷಗಳು ಪ್ರಜಾಪ್ರಭುತ್ವದ ತಿರುಳನ್ನೇ ನಿರಾಕರಿಸಿ ತಮ್ಮ ಸರ್ವಾಧಿಕಾರವನ್ನು ಹೇರುವ ಪ್ರಯತ್ನಗಳು.

ಆದ್ದರಿಂದ ರಾಜಕೀಯ ಅಸ್ಥಿರತೆಯೆಂಬುದು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯ ಅಸ್ಥಿರತೆ. ಈ ವ್ಯವಸ್ಥೆಯ ಬಿಕಟ್ಟಿನ ಫಲ. ಈ ಅಸ್ಥಿರತೆಯಲ್ಲಿ ಜನರು ತಮ್ಮ ಆಶೋತ್ತರಗಳಿಗೆ ತಕ್ಕಂತೆ ಆಡಳಿತವನ್ನು ರೂಪಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಿರುವ ಪ್ರಗತಿಪರ ಅಂಶವಿದೆ.

ಆದರೆ ಹೊಸ ಆರ್ಥಿಕ ನೀತಿಗಳ ವಿರುದ್ಧವಾದ ಪರ್ಯಾಯ ಅಭಿವೃದ್ಧಿಯ ಮಾರ್ಗ, ಪರ್ಯಾಯ ನೀತಿಗಳು, ಅವುಗಳ ದಿಕ್ಕಿನಲ್ಲಿ ನೆರೆಯ ಬಹುದಾದ ಜನರನ್ನು ಹಾದಿ ತಪ್ಪಿಸಲು ಸರ್ವಾಧಿಕಾರವನ್ನು ಹೇರುವ ವಂಚನೆಯ ಮಾರ್ಗಗಳ ಬಗ್ಗೆ ಎಚ್ಚರವನ್ನು ತೋರಿದರೆ, ಪ್ರಜಾಪ್ರಭುತ್ವದ ಅಂಶಗಳನ್ನು ರಕ್ಷಿಸಿಕೊಂಡರೆ ಮಾತ್ರ ಅದನ್ನು ವಿಸ್ತರಿಸಲು ಬೆಳೆಸಲು ಸಾಧ್ಯ.

ರೋಗವನ್ನು ಗುಣ ಮಾಡುವ ಬದಲಾಗಿ ರೋಗಿಯನ್ನೇ ಕೊಲ್ಲುವ, ಪ್ರಜಾಪ್ರಭುತ್ವವನ್ನೇ ನಾಶ ಮಾಡುವ ಈ ವಿಚಿತ್ರ ಚಿಕಿತ್ಸೆಗಳ ಬಗ್ಗೆ ಜನತೆಯಲ್ಲಿ ಎಚ್ಚರ ಮೂಡಿಸುವುದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರ ಕರ್ತವ್ಯ.

ಕಲಾವಿದರ ಮೇಲಿನ ಹಲ್ಲೆ ಪ್ರತಿಭಟಿಸಿ ಆನೇಕಲ್ಲಿನಲ್ಲಿ ಮೆರವಣಿಗೆ

ಮತಾಂಧರ ಎದೆ ನಡುಗಿರಬೇಕು

"ಹೆದರಿ ಹಿಂದೆಗೆಯುವವರಲ್ಲ ನಾವು, ಮತಾಂಧರೆ ನಿಮ್ಮ ಹೊಡೆತ ಬಡಿತಗಳಿಗೆ ಬಗ್ಗುವವರಲ್ಲ, ಹೆದರಿಕೆ ಬೆದರಿಕೆಗಳಿಗೆ ಜಗ್ಗುವವರಲ್ಲ, ಈ ದೇಶವನ್ನು ನಿಮ್ಮ ಸಂಚುಗಳಿಗೆ ಬಲಿಯಾಗಲು ಬಿಡುವುದಿಲ್ಲ. ಕಟ್ಟುತ್ತೇವೆ ನಾವು ಕಟ್ಟೇ ಕಟ್ಟುತ್ತೇವೆ, ಒಡೆದ ಮನಸ್ಸುಗಳ, ಕಂಡ ಕನಸುಗಳ ಕಟ್ಟೇ ಕಟ್ಟುತ್ತೇವೆ" ಇದು ಸಮುದಾಯದ ಕಲಾವಿದರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಿ ಮೇ 10 ರಂದು ಆನೇಕಲ್ಲಿನಲ್ಲಿ ಜರುಗಿದ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸಾಹಿತಿ ಕಲಾವಿದರ, ಪ್ರಗತಿಪರ ಜನರ ಆಶಯವಾಗಿತ್ತು.

ಮೇ 1 ರಂದು ಸಮುದಾಯದ ಕಲಾವಿದರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಲು ನಾಡಿನ ಗಣ್ಯರ ಸಮೂಹವೇ ಅಂದು ಆನೇಕಲ್ಲಿನಲ್ಲಿ ನೆರೆದಿತ್ತು. ಜ್ಞಾನಪೀಠ ಪ್ರಶಸ್ತಿ ವಿಜೇತ ನಾಟಕಕಾರ ಗಿರೀಶ್ ಕಾರ್ನಾಡ್, ಚಿತ್ರ ನಿರ್ದೇಶಕ ಎಂ.ಎಸ್. ಸತ್ಯು, ನಾಟಕ ಅಕಾಡೆಮಿ ಅಧ್ಯಕ್ಷ, ಸಿ.ಜಿ.ಕೃಷ್ಣಸ್ವಾಮಿ, ಮಾಜಿ ಅಧ್ಯಕ್ಷ ಕೆ. ಮರುಳ ಸಿದ್ದಪ್ಪ, ರಂಗಾಯಣದ ನಿರ್ದೇಶಕ ಸಿ. ಬಸವಲಿಂಗಯ್ಯ, ಪ್ರಾಧ್ಯಾಪಕ-ನಟ ಜಿ.ಕೆ.ಗೋವಿಂದ್ ರಾವ್, ಚಿಂತಕ ಡಾ|| ಜಿ. ರಾಮಕೃಷ್ಣ, ಅಧ್ಯಾಪಕರ ಸಂಘದ ಟಿ. ವೆಂಕಟೇಶ್ ಮೂರ್ತಿ, ರೈತ ಸಂಘಟನೆಯ ಕಾ|| ಜಗನ್ನಾಥ್, ಡಿ.ವೈ.ಎಫ್.ಐ.ನ ಎಸ್.ವೈ.ಗುರುಶಾಂತ್, ಮಹಾಂತೇಶ್, ಎಸ್.ಎಫ್.ಐ ನ ರಾಮಕೃಷ್ಣ, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲ, ಎನ್. ಪ್ರಭಾ, ಅಂಗನವಾಡಿ ಕಾರ್ಯಕಾರಿ ಸಮಿತಿಯ ನಾಯಕಿ ವರಲಕ್ಷ್ಮಿ, ಸಿ.ಐ.ಟಿ.ಯುನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಇನ್ನೂ ಮುಂತಾದ ಹಲವಾರು ಸಂಘಟನೆಗಳ ನಾಯಕರು ಕಾರ್ಯಕರ್ತರು ಕಲಾವಿದರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಲು ಅಣಿ ನೆರೆದಿದ್ದರು. ಹಲ್ಲೆ ನಡೆದ ಸ್ಥಳದಿಂದ ಹೊರಟ ಮೆರವಣಿಗೆ ಆನೇಕಲ್ಲಿನ ಬೀದಿ ಬೀದಿಗಳಲ್ಲಿ, ಕೋಮುವಾದದ ವಿರುದ್ಧ, ಕಲಾವಿದರ ಮೇಲಿನ ಹಲ್ಲೆಯನ್ನು ಖಂಡಿಸಿ, ಮತಾಂಧರ ವಿರುದ್ಧ ಘೋಷಣೆ ಕೂಗುತ್ತ ಸಾಗಿದ ದೃಶ್ಯ ಕೋಮುವಾದಿಗಳ ಎದೆ ನಡುಗಿಸಿರಬೇಕು. ದೇಶ ಪ್ರೇಮ ಜನರ ಎದೆಗಳಲ್ಲಿ ವಿಶ್ವಾಸ ಮೂಡಿಸಿರಬೇಕು.



ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಎಲ್ಲ ಗಣ್ಯರು ಬಿಜೆಪಿ ಹಾಗೂ ಸಂಘ ಪರಿವಾರದ ಗೂಂಡಾ ಪಡೆಯನ್ನು ಅದರ ದುಷ್ಕೃತ್ಯಗಳನ್ನು ಕಟುವಾಗಿ ಟೀಕಿಸಿದರು. ಜನ ಸಮೂಹವನ್ನು ಉದ್ದೇಶಿಸಿ ಮಾತನಾಡಿದ ಗಿರೀಶ್ ಕಾರ್ನಾಡ್‌ರು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಅತ್ಯಂತ ಕಳವಳಕಾರಿ, ಸ್ವಾತಂತ್ರ್ಯ ಬಂದು 52 ವರ್ಷಗಳ ನಂತರವು ಇಂತಹ ಹಲ್ಲೆಗಳು ನಡೆಯುತ್ತಿರುವುದು ವಿಷಾದನೀಯ, ಕಲಾವಿದರ ಮೇಲೆ ದೊಣ್ಣೆ ಹಿಡಿದು ಎರಗುವ ಈ ಪ್ರವೃತ್ತಿ ಖಂಡನೀಯ, ಪ್ರಜಾಪ್ರಭುತ್ವಕ್ಕೆ ಮಾರಕ, ಭಾ.ಜ.ಪ. ಸರ್ಕಾರದ ಅವಧಿಯಲ್ಲಿ ಇಂತಹ ಕೃತ್ಯಗಳು ಹೆಚ್ಚುತ್ತಿರುವುದು ಕಳವಳಕಾರಿ ಎಂದು ಘಟನೆಯನ್ನು ಕಟುವಾಗಿ ಖಂಡಿಸಿದರು. ಈ ದುಷ್ಕೃತ್ಯ ನಡೆಸಿದ ಭಾ.ಜ.ಪ. ಕಾರ್ಯಕರ್ತರನ್ನು ವ್ಯಂಗ್ಯವಾಗಿ ಲೇವಡಿ ಮಾಡಿದ ಜಿ.ಕೆ.ಗೋವಿಂದರಾವ್ **ಕೋಮುವಾದಿಗಳಿಗೆ ಕಲ್ಲು ಚಪ್ಪಡಿಗಳು, ದೊಣ್ಣೆಗಳು ಕಾಣುತ್ತವೆಯೇ ಹೊರತು ವಿವೇಕವಲ್ಲ** ಎಂದರು. ಬಿ.ಜೆ.ಪಿ. ಗೂಂಡಾಗಳಿಂದ ಹಲ್ಲೆಗೊಳಗಾದ ಸಿಐಟಿಯು ಮುಖಂಡ ಕಾಂ. ಮೀನಾಕ್ಷಿ ಸುಂದರಂ ಮಾತನಾಡಿ ನಾವು ಹೊಡೆತ ಬಡಿತಗಳಿಗೆ ಹೆದರುವವರಲ್ಲ ನಾವು ಹೊಡೆಸಿಕೊಳ್ಳಲು ಸಿದ್ದರಿದ್ದೇವೆ. ನಿಮ್ಮ ಧಾಳಿಗಳು ನಮ್ಮನ್ನು ನಮ್ಮ ಕಾರ್ಯಗಳಿಂದ ವಿಮುಖಗೊಳಿಸಲಾರವು ಎಂದು ಎಚ್ಚರಿಸಿದರು. ಚಲನಚಿತ್ರ ನಿರ್ದೇಶಕ ಎಂ.ಎಸ್.ಸತ್ಯು ಮಾತನಾಡಿ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಹಿಂಸಾ ಪ್ರವೃತ್ತಿ ಅನ್ಯಮತೀಯರ ಮೇಲೆ ಧಾಳಿ, ಕಲಾವಿದರ ಕೊಲೆ ಮುಂತಾದ ಘಟನೆಗಳು ಹೆಚ್ಚುತ್ತಿವೆ. ಚಾಕು ಚೂರಿ ಸಂಸ್ಕೃತಿ ನಾಗರೀಕತೆಯ ಲಕ್ಷಣವಲ್ಲ ಎಂದು ಖಂಡಿಸಿದರು. ಇನ್ನೂ ಹಲವಾರು ಮುಖಂಡರು ಮಾತನಾಡಿ ಒಕ್ಕೊರಲಿನಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನವನ್ನು ಖಂಡಿಸಿದರು.

ಸಭೆಯ ಕೊನೆಯಲ್ಲಿ ಅಂದು ಹಲ್ಲೆಗೊಳಗಾದ ಕಲಾವಿದರ ಪರವಾಗಿ ಸಿ.ಕೆ.ಗುಂಡಣ್ಣ ಮಾತನಾಡಿ ಈಗ ನಾಟಕವನ್ನು ಪ್ರದರ್ಶಿಸುತ್ತೇವೆ ಆನೇಕಲ್ಲಿನ ಜನತೆ ಅದನ್ನು ನೋಡಿ ಯಾವುದು ಸರಿ, ಯಾರು ಸರಿ ಎಂದು ನಿರ್ಧರಿಸಿ ಎಂದರು. ನಂತರ ಕಲಾವಿದರು ಹೊಸ ಆವೇಶ, ಸ್ಫೂರ್ತಿಯಿಂದ ಬೋಳುವಾರು ಮಹಮದ್ ಕುಂಞ ಅವರ 'ಕೇಸರಿ, ಬಿಳಿ, ಹಸಿರು' ನಾಟಕವನ್ನು ಅಭಿನಯಿಸಿದರು. ನೆರೆದಿದ್ದ ಜನ ನಾಟಕವನ್ನು ನೋಡಿ ಅರರೆ ಹೌದಲ್ಲ ಈ ನಾಟಕ ಎಷ್ಟೊಂದು ಅರ್ಥಪೂರ್ಣ ಎಂದು ಮಾತನಾಡಿಕೊಂಡರು, ಅವರ ಸ್ಪಂದನಕ್ಕೆ ಸಾಕ್ಷಿಯಾಗಿ ಕಲಾವಿದರು ಅವರ ಬಳಿಗೆ ಹೋದಾಗ ಸಂಗ್ರಹವಾದ ಹಣ ಸಾವಿರ ರೂಪಾಯಿ.

- ಆನೇಕಲ್ಲಿನ ಜನತೆ ಮಾತನಾಡಿಕೊಳ್ಳುತ್ತಿದ್ದರು "ಆನೇಕಲ್ಲಿನ ಇತಿಹಾಸದಲ್ಲಿ ಇಂದು ಅಭೂತಪೂರ್ವ ದಿನ. ನಾಡಿನ ಇಷ್ಟೊಂದು ಸಾಹಿತಿಗಳು, ಕಲಾವಿದರು, ಗಣ್ಯರು ಒಂದೆಡೆ ನೆರೆದಿದ್ದರು. ಇಷ್ಟು ದಿನ ಆನೇಕಲ್ಲಿನ ಕೆಲವು ಪುಂಡ ಬಿಜೆಪಿ ಗೂಂಡಾಗಳಿಂದ ಕೋಟಲೆಗೊಳಗಾಗಿದ್ದ ಅವರಿಗೆ ಧೈರ್ಯ ವಿಶ್ವಾಸ ಮೂಡಿಸಿತು, ಖಂಡಿತವಾಗಿ ಮತಾಂಧರ ಎದೆ ನಡುಗಿರಬೇಕು

- ಎಂ.ಅನಂತ್

ದಿಲ್ಲಿಯಲ್ಲಿ ಪ್ರತಿಭಟನೆ

ಮೇ 10 ರಂದು ಆನೇಕಲ್ಲಿನಲ್ಲಿ ಸಮುದಾಯ ಮತ್ತು ಸಿಐಟಿಯು ಕಾರ್ಯಕರ್ತರ ಮೇಲೆ ಕೋಮುವಾದಿಗಳ ಹಲ್ಲೆಯ ಪ್ರತಿಧ್ವನಿ ದೇಶದ ರಾಜಧಾನಿಯಲ್ಲೂ ಕೇಳಿಬಂದಿದೆ. ಕಲಾವಿದರು, ಲೇಖಕರು, ನಾಟಕಕರ್ಮಿಗಳು, ಬುದ್ಧಿಜೀವಿಗಳು ಹಾಗೂ ಕಾರ್ಮಿಕ ಮುಖಂಡರ ಒಂದು ಸಭೆ ಮೇ 10 ರಂದು ದಿಲ್ಲಿಯಲ್ಲಿ ಬಿಜೆಪಿ ಗೂಂಡಾಗಳ ಹಲ್ಲೆಯನ್ನು ಬಲವಾಗಿ ಖಂಡಿಸಿವೆ.

ಮರಾಠಿಯ ಪ್ರಖ್ಯಾತ ನಾಟಕಕಾರ ಜಿ.ಪಿ.ದೇಶಪಾಂಡೆ, ಹಿಂದಿ ಲೇಖಕ ಹಾಗೂ ಪ್ರಸಾರ ಭಾರತಿ ಮಂಡಳಿ ಸದಸ್ಯ ರಾಜೇಂದ್ರ ಯಾದವ್, ನೃತ್ಯ ಹಾಗೂ ನಾಟಕ ಕಲಾವಿದರಾದ ಮಾಯಾ ರಾವ್, ರಾಮ್ ರಹಮಾನ್, ಮಾಲಾ ಹಾಷ್ಮಿ ಸಿಐಟಿಯು ಮುಖಂಡ ತಪನ್ ಸೇನ್, ಸೂರಜ್ ಭಾನ್, ಭಾರದ್ವಾಜ್ ಮತ್ತಿತರರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. 'ಸಮುದಾಯ'ದ ಪ್ರಧಾನ ಕಾರ್ಯದರ್ಶಿ ವೆಂಕಟೇಶ್‌ರವರೂ ಇದರಲ್ಲಿ ಭಾಗವಹಿಸಿದರು. ಜನನಾಟ್ಯ ಮಂಚ್, ಜನವಾದಿ ಲೇಖಕ್ ಸಂಘ ಹಾಗೂ ಸಿಐಟಿಯು ಈ ಸಭೆಯನ್ನು ಏರ್ಪಡಿಸಿದ್ದವು.

ಇದಕ್ಕೆ ಮೊದಲು ಮೇ 4 ರಂದು 'ಸಹಮತ್' ದಿಲ್ಲಿಯಲ್ಲಿ ಬಿಜೆಪಿ ಮುಖ್ಯ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿತ್ತು.

ಸೃಜನ ಶೀಲ ವ್ಯಕ್ತಿಗಳು, ಚಟುವಟಿಕೆಗಳ ಮೇಲೆ ಸಂಘ ಪರಿವಾರದ ಹಲ್ಲೆ ಹೊಸದೇನಲ್ಲ, ಧರ್ಮನಿರಪೇಕ್ಷ ನಿಲುಮೆಯ ಜನಗಳೆಲ್ಲಾ ಇದನ್ನು ಪ್ರತಿರೋಧಿಸಬೇಕು ಎಂದು 'ಸಹಮತ್' ಪತ್ರಿಕಾ ಹೇಳಿಕೆಯೊಂದರಲ್ಲಿ ಕರೆ ನೀಡಿದೆ.

ಜನವಾದಿ ಲೇಖಕರ ಸಂಘ ನೀಡಿರುವ ಹೇಳಿಕೆ "ಈ ಹಲ್ಲೆ ಬಿಜೆಪಿ - ಆರ್‌ಎಸ್‌ಎಸ್ ಪ್ರಜಾಸತ್ತಾತ್ಮಕ ಸಂಸತಿಯನ್ನು ಹಿಂಸಾತ್ಮಕ ಹಲ್ಲೆಗಳ ಮೂಲಕ ನಿರ್ನಾಮ ಮಾಡುವ ಜರ್ಮನ್ ಫ್ಯಾಸಿಸ್ಟರ ಸಿದ್ಧಾಂತವನ್ನು ಅನುಸರಿಸುವವರು ಎಂದು ಮತ್ತೊಮ್ಮೆ ಸಾಬೀತು ಮಾಡಿದೆ" ಎಂದರೆ, ಜನನಾಟ್ಯ ಮಂಚ್ 'ಈ ಹಲ್ಲೆಗ್ಗಳು ಕಲಾವಿದರು, ಬುದ್ಧಿಜೀವಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಗುರಿಯಿಟ್ಟಿರುವುದಷ್ಟೇ ಅಲ್ಲ, ಜನಗಳ ಮೂಲಭೂತ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆಯೇ ಧಾಳಿ ಮಾಡಿವೆ' ಎಂದು ಖಂಡಿಸಿದೆ.

ಡಿವೈಎಫ್‌ಐ-ಎಸ್‌ಎಫ್‌ಐ ಖಂಡನೆ

ಕಳೆದ ಮೇ 1 ರಂದು ಆನೇಕಲ್‌ನಲ್ಲಿ ವಿವೇಕ (ವಿಚಾರ ವೇದಿಕೆ ಕರ್ನಾಟಕ) ವೇದಿಕೆಯವರು ನಡೆಯುತ್ತಿದ್ದ ಸೌಹಾರ್ದತಾ ಜಾಥಾದ ಮೇಲೆ ಬಿಜೆಪಿಯ ಸ್ಥಳೀಯ ಕಾರ್ಯಕರ್ತರು ತೀವ್ರವಾಗಿ ಹಲ್ಲೆ ನಡೆಸಿರುವ ದುಷ್ಕರ್ತವನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ.

ಇದು ಬಿಜೆಪಿ-ಆರ್‌ಎಸ್‌ಎಸ್ ಗಳ ಫ್ಯಾಸಿಸ್ಟ್ ಮನೋಭಾವವನ್ನು ತೋರಿಸಿದೆ ಎಂದಿರುವ ಈ ಸಂಘಟನೆಗಳು ಕರ್ನಾಟಕದಲ್ಲಿ ಸೌಹಾರ್ದತಾ ವಾತಾವರಣವನ್ನು ಹರಡುತ್ತಿರುವ ಕೋಮುವಾದಿಗಳನ್ನು ನಿಗ್ರಹಿಸಲು ಅಗತ್ಯ ಕ್ರಮಗಳನ್ನು ರಾಜ್ಯ ಸರ್ಕಾರವು ಕೈಗೊಳ್ಳಬೇಕೆಂದು ಒತ್ತಾಯಿಸಿವೆ. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿಯೂ ಈ ಹಲ್ಲೆಯನ್ನು ಖಂಡಿಸುತ್ತಾ ಈ ದೇಶಪ್ರೇಮಿ ಚಟುವಟಿಕೆಯನ್ನು ಸಹಿಸಲಿಕ್ಕಾಗದ ಕೋಮುವಾದಿಗಳು ಹಲ್ಲೆ ಮಾಡುವ ಮೂಲಕ ತಮ್ಮ ಹತಾಶೆ ಮತ್ತು ದೇಶದ್ರೋಹಿತನವನ್ನು ಬಯಲುಗೊಳಿಸಿದ್ದಾರೆ.

ಕಲಾವಿದರು ಹೊಸ ಆವೇಶ, ಸ್ಫೂರ್ತಿಯಿಂದ ಬೋಳುವಾರು ಮಹಮದ್ ಕುಂಞ ಅವರ 'ಕೇಸರಿ, ಬಿಳಿ, ಹಸಿರು' ನಾಟಕವನ್ನು ಅಭಿನಯಿಸಿದರು. ನೆರೆದಿದ್ದ ಜನ ನಾಟಕವನ್ನು ನೋಡಿ ಅರರೆ ಹೌದಲ್ಲ ಈ ನಾಟಕ ಎಷ್ಟೊಂದು ಅರ್ಥಪೂರ್ಣ ಎಂದು ಮಾತನಾಡಿಕೊಂಡರು, ಅವರ ಸ್ಪಂದನಕ್ಕೆ ಸಾಕ್ಷಿಯಾಗಿ ಕಲಾವಿದರು ಅವರ ಬಳಿಗೆ ಹೋದಾಗ ಸಂಗ್ರಹವಾದ ಹಣ ಸಾವಿರ ರೂಪಾಯಿ.



ಪ್ರಶ್ನೆ ಉತ್ತರ ?

● [illegible] ಮೀಸಲಾತಿ ಬಗ್ಗೆ 'ಅಹಿಂಸಾ', ಮತ್ತೊಂದು ಕಡೆ 'ಅಹಿಂದ'ದಿಂದ ಚಳುವಳಿಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಮೀಸಲಾತಿ ಬಗ್ಗೆ ನಿಮ್ಮ ಅಭಿಪ್ರಾಯವೇನು?

● ಉದ್ಯೋಗಕ್ಕೆ ಪ್ರವೇಶ ಮಾಡುವುದರಲ್ಲಿ ಹಾಗೂ ಶಿಕ್ಷಣ ಪ್ರವೇಶ ಅವಕಾಶದಲ್ಲಿ ಮೀಸಲಾತಿ ಅಗತ್ಯವೆನ್ನುವುದನ್ನು ನಮ್ಮ ಪತ್ರಿಕೆ ಬಹಳ ಮೊದಲಿನಿಂದಲೂ ಪ್ರತಿಪಾದಿಸುತ್ತಿದೆ. ಪರಿಶಿಷ್ಟ ಜಾತಿ ಪಂಗಡಗಳು ಮತ್ತು ಹಿಂದುಳಿದ ಜಾತಿಗಳಿಗೆ ಸಿಗಬೇಕಾದ ಅವಕಾಶಗಳಿಂದ ವಂಚನೆಯಾಗದಿರುವುದಕ್ಕೆ ಈ ರಕ್ಷಣೆ ಬೇಕಾಗಿದೆ. ಈ ರಕ್ಷಣೆ ಇಂದು ಕೂಡ ಅವಶ್ಯವಾಗಿದೆ. ಆದರೆ ಇಂದು ಸಮಾಜದಲ್ಲಿ ನಡೆಯುತ್ತಿರುವ ವಾದ ವಿವಾದಗಳನ್ನು ನೋಡಿದರೆ ದಲಿತರ ಹಾಗೂ ಹಿಂದುಳಿದ ಜಾತಿಗಳ ಎಲ್ಲಾ ಸಮಸ್ಯೆಗಳಿಗೂ ಮೀಸಲಾತಿಯಿಂದಲೇ ಪರಿಹಾರ ಎನ್ನುವ ಭಾವನೆ ದಲಿತರಲ್ಲೂ, ದಲಿತರ ಉದ್ಧಾರ ಮಾಡುತ್ತೇವೆ ಎನ್ನುವವರಲ್ಲೂ ವ್ಯಾಪಕವಾಗಿದೆ. ಕೋಟಿಗಟ್ಟಲೆ ದಲಿತರು ಮೀಸಲಾತಿಯನ್ನು ಪಡೆಯುವ ಯಾವುದೇ ಅವಕಾಶಗಳಿಲ್ಲದೆ ಶತ ಶತಮಾನಗಳ ಹಿಂದಿನ ಶೋಷಣೆಯ ಭಾರದಲ್ಲಿಯೇ ನರಳುತ್ತಿದ್ದಾರೆ ಎನ್ನುವ ಭಯಾನಕ ವಾಸ್ತವವನ್ನು ಹಾಗೂ ಅತ್ಯಂತ ದೀನ ಸ್ಥಿತಿಯಲ್ಲಿರುವ ದಲಿತರನ್ನು ಹೊರಗಿಟ್ಟೇ ಈ ಎಲ್ಲಾ ವಾದ ವಿವಾದಗಳು ನಡೆಯುತ್ತಿವೆ. ಮಂಡಲ್ ಕಮಿಷನಾ ಧ್ಯಾದಿಯಾಗಿ ಮೀಸಲಾತಿಯಿಂದ ಮಾತ್ರ ದಲಿತರ, ಹಿಂದುಳಿದವರ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವಿಲ್ಲ. ಭೂಸುಧಾರಣೆಯಿಂದ ಮತ್ತು ಸಮಾಜದ ಆಮೂಲಾಗ್ರ ಬದಲಾವಣೆಯಿಂದ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯವೆಂದು ಘೋಷಿಸಿವೆ. ಆದರೆ ಈ ಮೂಲಭೂತ ಸಮಸ್ಯೆಯನ್ನು ದಲಿತರು, ದಲಿತೇತರರು ಇಬ್ಬರೂ ಪರಿಗಣಿಸುತ್ತಿಲ್ಲ. ಇದರಿಂದ ದಲಿತ ಸಮುದಾಯಗಳಿಗೆ ದೊಡ್ಡ ಅನ್ಯಾಯವಾಗಿದೆ.

ಇದು ಮೀಸಲಾತಿಯ ಮೂಲಭೂತ ಪ್ರಶ್ನೆಯ ಬಗೆಗಿನ ನಿಲುವು. ಆದರೆ ಈ ಅಹಿಂಸಾ(ಅಲ್ಪಸಂಖ್ಯಾತರು, ಹಿಂದುಳಿದ ಸಾಮಾನ್ಯ ವರ್ಗಗಳು) ಸಂಘಟನೆ ಹಾಗೂ ಅಹಿಂದ(ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಎಂಬ ಎರಡು ಸಂಘಟನೆಗಳು, ಅವುಗಳಲ್ಲಿ ಸೇರಿಕೊಂಡ ಮಠಾಧಿಪತಿಗಳು ಪರಸ್ಪರ ವಿರುದ್ಧ ಚಳುವಳಿ ನಡೆಸುತ್ತಾ ಜಾತಿ ಜಾತಿಗಳ ನಡುವೆ ದ್ವೇಷವನ್ನು ಉದ್ರೇಕಿಸುತ್ತಿವೆ. ಈ ಎರಡೂ ಸಂಘಟನೆಗಳು ಅಲ್ಪಸಂಖ್ಯಾತರು ಮತ್ತು ದಲಿತರು ತಮ್ಮೊಡನೆಯೇ ಇದ್ದಾರೆಂದು ಘೋಷಿಸಿಕೊಳ್ಳುತ್ತಿವೆ. ಆದ್ದರಿಂದ ಎರಡು ಸಂಘಟನೆಗಳ ಹೇಳಿಕೆ ಎಷ್ಟರ ಮಟ್ಟಿಗೆ ಸತ್ಯ ಎಂಬ ಸಂಶಯ ಬರುವುದು ಸ್ವಾಭಾವಿಕ. ಇವೆರಡು ತಕ್ಷಣದಿಂದಲೇ ತಮ್ಮ ಚಳುವಳಿಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಸರಕಾರ ಮಧ್ಯ ಪ್ರವೇಶಿಸಿ ಎರಡು ಸಂಘಟನೆಗಳನ್ನು ಮತ್ತು ರಾಜಕೀಯ ಪಕ್ಷಗಳ ಸಭೆ ಕರೆದು ಸಮಸ್ಯೆಯನ್ನು ಸರ್ವ ಸಮ್ಮತವಾಗಿ ಬಗೆಹರಿಸಲು ಪ್ರಯತ್ನಿಸಬೇಕು. ಪರಸ್ಪರ ದ್ವೇಷವನ್ನು ಉದ್ರೇಕಿಸುವುದರಿಂದ ಎರಡು ವರ್ಗಗಳಿಗೂ ಹಾನಿಯಾಗುತ್ತದೆ ಎಂಬುದನ್ನು ಅರಿತುಕೊಳ್ಳಬೇಕೆನ್ನುವುದನ್ನು ನಮ್ಮ ಪತ್ರಿಕೆ ಬಯಸುತ್ತದೆ.

ಉತ್ತರ ಪ್ರದೇಶದಲ್ಲಿ ಮತ್ತೆ ಬಿಜೆಪಿ ಕಿತ್ತಾಟ

ಬಿಜೆಪಿಯ ಪಕ್ಷಕ್ಕೆ ಹಾಗೂ ಇತರರಿಗೂ ಚುನಾವಣಾ ದೃಷ್ಟಿಯಲ್ಲಿ ಬಹಳ ಮುಖ್ಯವಾದ ರಾಜ್ಯ ಉತ್ತರ ಪ್ರದೇಶದಲ್ಲಿ ಮತ್ತೆ ಬಿಜೆಪಿಯ ಕಿತ್ತಾಟ ಕಾಣಿಸಿಕೊಂಡಿದೆ. 33 ಶಾಸಕರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದ್ದಾರಂತೆ. ವಿಧಾನ ಪರಿಷತ್ತಿನ ಮೂವರು ಬಿಜೆಪಿ ಸದಸ್ಯರೂ ರಾಜೀನಾಮೆ ಪತ್ರ ಸಲ್ಲಿಸಿದ್ದಾರಂತೆ. ಜತೆಗೆ ಬಿಎಸ್‌ಪಿ ಯಿಂದ ಒಡೆದು ಬಂದ ಪಕ್ಷವೂ ಬಿಜೆಪಿ ಮುಖ್ಯಮಂತ್ರಿಗೆ ಎಚ್ಚರಿಕೆ ನೀಡಿದೆಯಂತೆ.

ಬಹಳ ದಿನಗಳಿಂದ ಕಲ್ಯಾಣ್ ಸಿಂಗ್ ಈ ಭಿನ್ನಮತ ಎದುರಿಸಿಕೊಂಡು ಬಂದಿದ್ದರೂ ಇದುವರೆಗೂ ಹೇಗೋ ತನ್ನ ಕುರ್ಚಿಗೆ ಅಂಟಿ ಕೊಂಡಿದ್ದಾರೆ. ಆದರೆ ಈ ಬಾರಿ ಭಿನ್ನ ಮತೀಯರ ಚಟುವಟಿಕೆಗಳು ಇನ್ನಷ್ಟು ತೀವ್ರಗೊಂಡಂತಿದೆ. ಹಣಾಹಣಿಗೆ ರಂಗ ಸಿದ್ಧವಾಗುತ್ತಿದೆ.

ಉತ್ತರ ಪ್ರದೇಶದ ಈ ಅಸ್ತವ್ಯಸ್ತ ಪರಿಸ್ಥಿತಿ ಬಿಜೆಪಿಯ ಆಂತರಿಕ ಪರಿಸ್ಥಿತಿಯ ಮೇಲೂ ಕರಿನೆರಳು ಬೀರಿದೆ. ಕಲ್ಯಾಣ್ ಸಿಂಗ್ ಇದುವರೆಗೆ ಅಧಿಕಾರದಲ್ಲಿ ಉಳಿದಿರುವುದು ಕೇಂದ್ರ ಗೃಹಮಂತ್ರಿ ಅಡ್ವಾಣಿಯವರ ಬೆಂಬಲದಿಂದ ಎಂದು ಹೇಳಲಾಗುತ್ತಿದೆ. ಅತ್ತ ಬಿಜೆಪಿಯ ಇತರ ರಾಜ್ಯ ಮುಖಂಡರು ಕಲ್ರಾಜ್ ಮಿಶ್ರ ಮತ್ತಿತರರಿಗೆ ಪ್ರಧಾನ ಮಂತ್ರಿಗಳ ಬೆಂಬಲ. ಈ ಇಬ್ಬರು ಬಿಜೆಪಿಯ ನಾಯಕ ಮಣಿಗಳ ನಡುವಿನ ಜಟಾಪಟಿ ಗುಪ್ತವಾಗೇನೂ ಉಳಿದಿಲ್ಲ. ಅಡ್ವಾಣಿಯವರ ಪ್ರಭಾವ ಪಕ್ಷದೊಳಗೆ ವಿಪರೀತವಾಗಿದ್ದರೂ, ಪ್ರಧಾನ ಮಂತ್ರಿಯಾಗಿರುವ ವಾಜಪೇಯಿ ಯವರನ್ನೂ ಮೂಲೆಗೊತ್ತುವಂತಿಲ್ಲ.

ಈ ಹಿನ್ನೆಲೆಯಲ್ಲಿ ಚುನಾವಣೆಯ ಮೊದಲು ಉತ್ತರ ಪ್ರದೇಶದ ಬಿಜೆಪಿಯಲ್ಲಿನ ಬೆಳವಣಿಗೆಗಳು ಈ ಆಳುವ ಪಕ್ಷಕ್ಕೆ ಒಂದು ಪರೀಕ್ಷೆಯಾಗಬಹುದು. ಇದು ಎಂತಹ ಪಕ್ಷ ಎಂಬುದಕ್ಕೆ ಇಡೀ ದೇಶಕ್ಕೆ ಒಂದು ಉದಾಹರಣೆಯಾಗುತ್ತಿದೆ. ಒಂದೆಡೆ ತಮ್ಮದು ಪೂರ್ಣ ಪ್ರಮಾಣದ ಸರಕಾರ ಎಂದು ವಾಜಪೇಯಿ ಸರಕಾರ ಕೈಗೊಂಡ ಲಂಗುಲಗಾಮಿಲ್ಲದ ನಿರ್ಣಯಗಳಿಗೆ ಬಂದ ಪ್ರತಿಭಟನೆಗಳಿಂದ ಪ್ರಧಾನ ಮಂತ್ರಿಗಳೂ ವಿಚಲಿತರಾದಂತೆ ಕಾಣುತ್ತದೆ. ಮೇ 7 ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಅವರು ಸಮಜಾಯಿಷಿ ನೀಡಿದರಂತೆ. ಇನ್ನೊಂದೆಡೆ ಉತ್ತರ ಪ್ರದೇಶದ ಈ ಆಂತರಿಕ ಕಿತ್ತಾಟಗಳು ಈ ಪಕ್ಷಕ್ಕೆ ಸಾವಿನ ನೋಟೀಸು ಆಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಡುತ್ತಿದ್ದಾರೆ.

ಚುನಾವಣೆ ಸಮೀಪಿಸುತ್ತಿದ್ದಂತೆ ತೃಣಮೂಲ ಕಾಂಗ್ರೆಸ್ ಗೂಂಡಾಗಿರಿ ಆರಂಭ

ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ ಪಶ್ಚಿಮ ಬಂಗಾಳದಲ್ಲಿ ಕಾನೂನು-ಪರಿಸ್ಥಿತಿಯನ್ನು ಹದಗೆಡಿಸುವ ಪ್ರಯತ್ನ ಆದಾಗಲೇ ಆರಂಭವಾಗಿದೆ. ಸದ್ಯಕ್ಕೆ ತೃಣಮೂಲ ಕಾಂಗ್ರೆಸ್ ಇದರ ಮುಂಚೂಣಿಯಲ್ಲಿದೆ. ಜತೆಗೆ ಬಿಜೆಪಿ ಹಾಗೂ ಇನ್ನೊಂದೆಡೆ ಕಾಂಗ್ರೆಸ್ ಕೂಡಾ ಇವೆ. ಸಿಪಿಐ(ಎಂ) ಕಾರ್ಯಕರ್ತರ, ಬೆಂಬಲಿಗರ ಮೇಲೆ ಮರಣಾಂತಿಕ ಹಲ್ಲೆ, ಮನೆಗೆ ಬೆಂಕಿ, ಲೂಟಿ ಇತ್ಯಾದಿ ಆರಂಭವಾಗಿವೆ.

ಮೇ 1 ರಂದು ದಕ್ಷಿಣ 24 ಪರಗಣ ಜಿಲ್ಲೆಯ ದರ್ಪಾತ್ರ ಗ್ರಾಮದಲ್ಲಿ ನಾಲ್ಕು ಸಿಪಿಐ(ಎಂ) ಕಾರ್ಯಕರ್ತರ ಕೊಲೆಯಾಗಿದೆ. ಇದನ್ನು ಪ್ರತಿಭಟಿಸಿ ಮೇ 3 ರಂದು ಪಕ್ಕದ ಡೈಮಂಡ್ ಹಾರ್ಬರ್ ಪ್ರದೇಶದಲ್ಲಿ 12 ಗಂಟೆಗಳ ಬಂದ್ ನಡೆದಿದೆ.

ಮೇ 3 ರಂದು ಉತ್ತರ 24 ಪರಗಣ ಜಿಲ್ಲೆಯ ಸಾಶನ್‌ನಲ್ಲಿ ಮುಜಿದ್‌ಅಲಿ ಎಂಬ ಸಿಪಿಐ(ಎಂ) ಬೆಂಬಲಿಗನ ಕೊಲೆಯಾಗಿದೆ. ತೃಣಮೂಲ ಕಾಂಗ್ರೆಸ್ ಗೂಂಡಾಗಳು ಆತನನ್ನು ತೃಣಮೂಲ ಕಾಂಗ್ರೆಸ್‌ನ ಒಂದು ಮೆರವಣಿಗೆಯಲ್ಲಿ ಸೇರಿಕೊಳ್ಳಲು ಹೇಳಿದಾಗ ಆತ ನಿರಾಕರಿಸಿದಾಗ ಆ ಕ್ರಿಮಿನಲ್‌ಗಳು ಆತನನ್ನು ಅಮಾನುಷವಾಗಿ ಕೊಂದರು. ಮರುದಿನ ಸಾಶನ್‌ನಲ್ಲೂ 12 ಗಂಟೆಗಳ ಬಂದ್ ನಡೆಯಿತು.

ಮೇ 3-4 ರಂದು ತೃಣಮೂಲ ಕಾಂಗ್ರೆಸ್-ಬಿಜೆಪಿ ಗೂಂಡಾಗಳು ಮಿಡ್ನಾಪುರ್ ಜಿಲ್ಲೆಯ ಕುಸುಮ್ಮಾ ಹಾಗೂ ರೆಂಜಿರಾ ಗ್ರಾಮಗಳಲ್ಲಿ ಬಡ ಬುಡಕಟ್ಟು ಜನಗಳ ಮನೆಗಳಿಗೆ ಬೆಂಕಿಯಿಟ್ಟರು. 110 ಮನೆಗಳು ಭಸ್ಮವಾಗಿವೆ.

ತೃಣಮೂಲ ಕಾಂಗ್ರೆಸ್, ಬಿಜೆಪಿ ಹಾಗೂ ಕಾಂಗ್ರೆಸ್ ತಮ್ಮ ಕೊಲೆ ರಾಜಕೀಯ, ಭಯೋತ್ಪಾದನೆ ರಾಜಕೀಯವನ್ನು ಆರಂಭಿಸಿದ್ದಾರೆ. ಇದನ್ನು ರಾಜಕೀಯವಾಗಿ ಎದುರಿಸಲಾಗುವುದೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಹೇಳಿದ್ದಾರೆ.

"ಎರಡು ಗ್ಲಾಸ್" ಪದ್ಧತಿಗೆ ನಿಲುಗಡೆ ಮಹಿಳಾ ಸಂಘಟನೆಯ ಯಶಸ್ವಿ ಪ್ರಯತ್ನ

ಕುಳುತ್ತುಗ್ನಾಕಂಪಟ್ಟಿ ತಮಿಳುನಾಡಿನ ಪುದುಕೊಟ್ಟೈ - ತಂಜಾವೂರು ಗಡಿಯಲ್ಲಿನ ಒಂದು ಕುಗ್ರಾಮ. ಆದರೆ ಮೇ 10 ರಂದು ಇಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಇತಿಹಾಸ ನಿರ್ಮಿಸಿತು. ಚಹಾದಂಗಡಿಗಳಲ್ಲಿ ಎರಡು ಗ್ಲಾಸ್ ಪದ್ಧತಿ (ಮೇಲು ಜಾತಿಯವರಿಗೊಂದು - ಅಸ್ಪೃಶ್ಯರಿಗೊಂದು) ಈಗಲೂ ಅಸ್ಪೃಶ್ಯತೆ ಜೀವಂತವಾಗಿರುವುದರ ಸಂಕೇತ. ಮೇಲೆ ಹೇಳಿದ ಗ್ರಾಮದಲ್ಲಿ ಮಹಿಳೆಯರ ಸಂಘಟಿತ ಪ್ರಯತ್ನ ಈ ಪದ್ಧತಿಯನ್ನು ನಿಲ್ಲಿಸಿಬಿಟ್ಟಿದೆ. ಮೇ 10 ರಂದು ನೂರಾರು ಮಹಿಳೆಯರು ಆಡಳಿತ ಹಾಗೂ ಊರಿನ ಪ್ರತಿಷ್ಠರು ಈ ಪದ್ಧತಿಯನ್ನು ಕೊನೆಗೊಳಿಸಲು ಒಂದು ಲಿಖಿತ ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡಿದ್ದಾರೆ.

ಎಐಡಿಡಬ್ಲ್ಯುಎ ಸಂಘಟಿಸಿದ್ದ ಅಸ್ಪೃಶ್ಯತಾ-ವಿರೋಧಿ ಪ್ರಚಾರಾಂದೋಲನದಲ್ಲಿ ಮಹಿಳೆಯರ ಈ ಸಂಘಟಿತ ಶಕ್ತಿ ಪ್ರಕಟಗೊಂಡಿತು.

ತಾಲ್ಲೂಕು ಕೇಂದ್ರದಿಂದ ಮಹಿಳೆಯರ ಪ್ರಚಾರ ಜಾಥಾ ಒಂದು ಬೃಹತ್ ಸಾರ್ವಜನಿಕ ಸನ್ಮಾನದೊಂದಿಗೆ ಆರಂಭವಾಯಿತು. ಬಿಸಿಲ ಬೇಗೆಯನ್ನು ಲೆಕ್ಕಿಸದೆ ನೆರೆದಿದ್ದ ಸಾವಿರಾರು ಜನ ಮಹಿಳೆಯರು ಜಾತಿ ದಮನದ ಎಲ್ಲಾ ರೂಪಗಳ ವಿರುದ್ಧವೂ ಹೋರಾಟದ ಪ್ರತಿಜ್ಞೆ ಕೈಗೊಂಡಾಗ ಭಾರೀ ಕರಡಾತನದ ಮೂಲಕ ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕೂಲಿ, ಭೂಮಿ ಮತ್ತು ಘನತೆಗಾಗಿ ನಡೆಸುವ ಈ ಹೋರಾಟದಲ್ಲಿ ರಾಜಿಗೆ ಅವಕಾಶವೇ ಇಲ್ಲ ಎಂದು ಸಾರಲಾಯಿತು. ಅಸ್ಪೃಶ್ಯತೆ ಆಚರಿಸುವವರೊಂದಿಗೆ ಸರಕಾರದ ಆಡಳಿತ ಮತ್ತು ಪೋಲೀಸರು ಮಾತನಾಡುತ್ತಿದ್ದರಂತೆ ಹಲವು ಕಡೆಗಳಿಂದ ಅವರಿಗೆ ಚೀಟಿಗಳು ಬಂದವು - ನಮ್ಮೂರಿನಲ್ಲಿಯೂ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಆದ್ದರಿಂದ ನಮ್ಮೂರಿಗೆ ಬನ್ನಿ ಎಂದು ಆಹ್ವಾನ ನೀಡುತ್ತಿದ್ದ ಚೀಟಿಗಳು ಅವು.

ಈ ಮಹಿಳಾ ಜಾಥಾ ಮೇಲೆ ಹೇಳಿದ ಹಳ್ಳಿಗೆ ಬಂದಾಗ ಭಾರೀ ಸ್ವಾಗತ ಕಾದಿತ್ತು. ಪ್ರತಿಭಟನೆಯ, ಕ್ರೋಧದ ಅಭಿವ್ಯಕ್ತಿ ಮುಗಿಲು ಮುಟ್ಟಿತ್ತು. ಎಲ್ಲಾ ಚಹಾ-ಕಾಫಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಲು ನಿರ್ಧರಿಸಲಾಗಿತ್ತು. ಮೆರವಣಿಗೆ ಊರ ಬೀದಿಗಳಲ್ಲಿ ಸಾಗುತ್ತಿದ್ದಂತೆ ಹತ್ತಾರು ಯುವಜನರು ಸೇರಿಕೊಂಡರು. ಊರಿನ ಬೀದಿಗಳು ಕಿಕ್ಕಿರಿದು ತುಂಬಿದವು. ತಹಶೀಲ್ದಾರರು, ಜಿಲ್ಲಾ ಪೋಲೀಸ್ ಮುಖ್ಯಸ್ಥರು ಬಂದು ಈ ಪದ್ಧತಿಯನ್ನು ನಿಲ್ಲಿಸುವ ಆಶ್ವಾಸನೆ ನೀಡಿದರು. ಆದರೆ ಮಹಿಳೆಯರು ಆಶ್ವಾಸನೆ ಗಳನ್ನು ನಂಬಲು ನಿರಾಕರಿಸಿದರು. ಆಗ ಅಧಿಕಾರಿಗಳು ಊರಿನ ಚಹಾ-ಕಾಫಿ ಅಂಗಡಿ ಮಾಲಕರು ಹಾಗೂ ಮೇಲ್ಜಾತಿಗಳ ಪ್ರತಿನಿಧಿಗಳು ಸಹಿ ಹಾಕಿದ ಒಂದು ಲಿಖಿತ ಒಪ್ಪಂದವನ್ನು ತಂದರು. ಸ್ವತಃ ತಹಶೀಲ್ದಾರ್ ಅಸ್ಪೃಶ್ಯತೆಯ ಆಚರಣೆಯಲ್ಲಿ ತೊಡಗಿರುವವನ್ನು ಜೈಲಿಗೆ ಹಾಕುವ ಲಿಖಿತ ಭರವಸೆ ನೀಡಿದರು.

ಈಗ ಮಹಿಳೆಯರು ಸುತ್ತಲಿನ ಇತರ ಹಳ್ಳಿಗಳಿಗೂ ಈ ಹೋರಾಟವನ್ನು ಒಯ್ಯಲು ನಿರ್ಧರಿಸಿದ್ದಾರೆ. ಈ ಚಾರಿತ್ರಿಕ ಸಂದರ್ಭದಲ್ಲಿ ಎಐಡಿಡಬ್ಲ್ಯುಎ ಮುಖಂಡರಾದ ಪಾಪಾ ಉಮಾನಾಥ್, ಬೃಂದಾ ಕಾರಟ್, ಮೈಥಿಲಿ ಶಿವರಾಮನ್, ಎಸ್.ಸುಧಾ ಹಾಗೂ ಯು.ವಾಸುಕಿ ಭಾಗವಹಿಸಿದರು.

(ಐಎನ್‌ಎನ್)

ಪುಟ 4 ರಿಂದ

ಸಮಾವೇಶ.........................

ಕಣ್ಣಿಗೆ ಬೀಳದಂತೆ ಓಡಬೇಕು, ಅವಿತುಕೊಳ್ಳಬೇಕು. ಇಂತಹ ಕ್ರೂರ ಪರಿಸ್ಥಿತಿಯಲ್ಲಿ 1924ರಲ್ಲಿ ವೈಕೊಂ ಸತ್ಯಾಗ್ರಹ ಅಲ್ಲಿನ ದೇವಸ್ಥಾನದ ಮುಂದೆ ನಡೆದಾಡುವ ಹಕ್ಕನ್ನು ಕೆಳಜಾತಿಯವರಿಗೆ, ದಲಿತರಿಗೆ ಕೊಡಲು ನಡೆದಿತ್ತು. ಇದು ಅಂದಿನ ಕಾಂಗ್ರೆಸ್ ನಾಯಕರು ನಡೆಸಿದ್ದು. ಇದಕ್ಕೆ ಅಖಿಲ ಭಾರತ ಮಟ್ಟದ ಖ್ಯಾತಿ ಬಂದಿತ್ತು. ಅಖಿಲ ಭಾರತ ಮಟ್ಟದ ನಾಯಕರು ಭಾಗವಹಿಸಿ ಬೆಂಬಲಿಸಿದ್ದರು. ಗಾಂಧೀಜಿ, ಅಕಾಲಿಗಳು, ಪೆರಿಯಾರ್‌ರ ಬೆಂಬಲ ಸಿಕ್ಕಿತ್ತು. ಆಮೇಲೆ ನಡೆದ ಗುರುವಾಯೂರು ದೇವಾಲಯ ಪ್ರವೇಶದ ಬಗ್ಗೆ ನಡೆದ ಚಳುವಳಿಯ ನಾಯಕತ್ವ ವಹಿಸಿದವರು ರಾಜ್ಯದ ಕಮ್ಯುನಿಸ್ಟ್ ಚಳುವಳಿಯ ಪ್ರವರ್ತಕರಾದ ಎ.ಕೆ.ಗೋಪಾಲನ್, ಕೃಷ್ಣ ಪಿಳ್ಳೆ. ಇದೇ ನಾಯಕರು ಜಾತಿಭೇದ, ಅಸ್ಪೃಶ್ಯತೆ ವಿರುದ್ಧ ಹೋರಾಡುತ್ತಲೇ ಮುಂದಿನ ಹಂತದಲ್ಲಿ ಭೂಮಿಯ ಹೋರಾಟದ ನಾಯಕತ್ವ ವಹಿಸಿದರು.

1957 ರಲ್ಲಿ, 1967 ರಲ್ಲಿ ಇದರ ಫಲವಾಗಿ ಬಂದ ಕಮ್ಯುನಿಸ್ಟ್ ನಾಯಕತ್ವದ ಸರ್ಕಾರಗಳು ಆಗಲೇ ಸಾಮಾಜಿಕ ಅಸಮಾನತೆಯ ವಿರುದ್ಧ ತಲೆ ಎತ್ತಿ ನಿಂತಿದ್ದ ಭೂಹೀನ ಕೆಳಜಾತಿಯವರು ಮತ್ತು ದಲಿತರು ಆದಿವಾಸಿಗಳಿಗೆ ಭೂ ಹಂಚುವಿಕೆ ಮೂಲಕ ಆರ್ಥಿಕ ಅಸಮಾನತೆ ವಿರುದ್ಧ ಹೋರಾಡಿ ಗೆಲ್ಲುವ ಚೈತನ್ಯ ತಂದುಕೊಟ್ಟಿತು. ಇದು ಕೇರಳದ ಹಾದಿ. ಈಗ ಜಾತಿ (ಸವರ್ಣೀಯರದ್ದು - ದಲಿತರದ್ದೂ) ಚಳುವಳಿಗಳ ಸಂಘಟನೆಗಳು ಹಾದಿ ತಪ್ಪಿಸಲು ಮೀಸಲಾತಿ, ಮತಾತಂತರದ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಿವೆ. ಭೂಮಿ ಪ್ರಶ್ನೆಯನ್ನು ಅವು ಎತ್ತುವುದೇ ಇಲ್ಲ. ಸರ್ಕಾರ ಸಹ ಮೀಸಲಾತಿ ಮತ್ತು ಕೆಲವು ಸಾಮಾಜಿಕ ಕಲ್ಯಾಣ ಕ್ರಮ (ಅವು ಭ್ರಷ್ಟಾಚಾರದ ತಾಣಗಳು, ಅದಕ್ಕೆ ಕೊಟ್ಟ ಹಣ ಸಾಲದು, ಅದೂ ಜಾರಿಯಾಗಿ ಅರ್ಧದಷ್ಟು ಜನರಿಗೆ ಮುಟ್ಟುವುದಿಲ್ಲ) ಗಳಿಂದ ಸಮಸ್ಯೆ ಬಗೆಹರಿಯುತ್ತದೆ ಎಂಬ ತಪ್ಪು ಕಲ್ಪನೆಯಲ್ಲಿದ್ದಾರೆಂದರು ವಿಜಯರಾಘವನ್.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ನಿತ್ಯಾನಂದ ಸ್ವಾಮಿ. ಉದ್ಘಾಟಿಸಿದ್ದು ಪ್ರೊ. ಚಂದ್ರಶೇಖರ ಪಾಟೀಲ. ಸಮಾವೇಶದ ಮುಂದೆ ನಿರ್ಣಯವೊಂದನ್ನು ಮಂಡಿಸಿದವರು ನಿತ್ಯಾನಂದ ಸ್ವಾಮಿ, ಅನುಮೋದಿಸಿದವರು ಜೀತದಾಳಾಗಿದ್ದು ಈಗ ಕೃಷಿಕೂಲಿಕಾರರ ನಾಯಕರಾಗಿರುವ ಗಂಗಾವತಿಯ ಬಾಳಪ್ಪ. ವೇದಿಕೆಯ ಮೇಲೆ ಇದ್ದವರು ಜಿ.ಎನ್.ನಾಗರಾಜ್, ಚಂದ್ರಪ್ಪ ಹೊಸ್ಕೇರಾ.

ಗಾಂಧೀಜಿ - ಬ್ರಾಹ್ಮಣ ಸಂವಾದ ನಡೆದ ಮನೆಯ ಮೇಲೆ ಕೆಂಬಾವುಟ!

ಕೇರಳದಲ್ಲಿ ಜಾತಿಭೇದದ ವಿರುದ್ಧ ಎರಡು ಪ್ರಮುಖ ಚಳುವಳಿಗಳು ನಡೆದಾಗಲೂ - ವೈಕೋ ಸತ್ಯಾಗ್ರಹದ ಸಮಯದಲ್ಲಿ ಗಾಂಧೀಜಿಗೂ ಬ್ರಾಹ್ಮಣನಿಗೂ ಒಂದು ಸಂವಾದ ನಡೆಯಿತಂತೆ. ಬ್ರಾಹ್ಮಣ ಗಾಂಧೀಜಿ ವೈಕೋಂ ಸತ್ಯಾಗ್ರಹಕ್ಕೆ ಬೆಂಬಲ ಕೊಡುವುದನ್ನು ವಿರೋಧಿಸಿದ. ಅಸ್ಪೃಶ್ಯತೆ ಹಿಂದೂ ಧರ್ಮದ ಭಾಗ - ಹಿಂದೂ ನಂಬಿಕೆಯಾದ ಪುನರ್ಜನ್ಮ ಒಪ್ಪುವುದಾದರೆ ಅಸ್ಪೃಶ್ಯತೆಯನ್ನು ಒಪ್ಪಬೇಕು ಎಂದು ಗಾಂಧೀಜಿಗೆ ಸವಾಲು ಹಾಕಿದ. ಹಿಂದಿನ ಜನ್ಮದಲ್ಲಿ ಗೋಹತ್ಯೆ, ಬ್ರಹ್ಮಹತ್ಯೆ, ನರಹತ್ಯೆ ಮಾಡಿದವರೇ ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುವುದು ಎಂದ. ಗಾಂಧೀಜಿ ಹಿಂದೂ ಧರ್ಮ, ಪುನರ್ಜನ್ಮ ಜಾತಿ ಪದ್ಧತಿ ಸರಿ, ಅಸ್ಪೃಶ್ಯತೆ ಮಾತ್ರ ಹಿಂದೂಧರ್ಮದ ಕಳಂಕ ಎಂದು ಆತನ ಜತೆ ವಾದಿಸಿದರು. 50 ವರ್ಷಗಳ ನಂತರ ಈ ಸಂವಾದ ನಡೆದ ಮನೆಯ ಮೇಲೆ ಕೆಂಬಾವುಟ ಹಾರುತ್ತಿತ್ತಂತೆ. ಅದು ಕಮ್ಯುನಿಸ್ಟ್ ಪಕ್ಷದ ಆಫೀಸಾಗಿತ್ತು. ಇದು ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿ ಅದನ್ನು ಆರ್ಥಿಕ ಅಸಮಾನತೆ ವಿರುದ್ಧ ಹೋರಾಟಕ್ಕೆ ವಿಸ್ತರಿಸಿದ ಕೇರಳ ಕಮ್ಯುನಿಸ್ಟರ ಮಾದರಿಯ ಪ್ರತೀಕ.

ಸಮಾವೇಶದಲ್ಲಿ ಭಾಗವಹಿಸಿದವರು



ಪುಟ 4 ರಿಂದ

.... ನಿರ್ಣಯ

ಪಕ್ಷಗಳು ಪಾಳೆಗಾರಿ ಶಕ್ತಿಗಳ ಹಿಡಿತದಲ್ಲಿಯೇ ಇರುವುದರಿಂದ ಸರ್ಕಾರಗಳು ಸಹ ಸಹಜವಾಗಿಯೇ ಯಾವುದೇ ಪಾಳೆಗಾರಿ ವಿರೋಧಿ ನಿಲುಮೆ ತಾಳುವಂತಿರಲಿಲ್ಲ. ಆದ್ದರಿಂದಲೇ ವಿಜ್ಞಾನ ತಂತ್ರಜ್ಞಾನ ಇಷ್ಟೊಂದು ಬೆಳೆದಿರುವ ಈ ಕಾಲಘಟ್ಟದಲ್ಲಿಯೂ ಜಾತಿ ಪದ್ಧತಿಯ ಅನಿಷ್ಟ ಮಾನವ ನಾಗರೀಕತೆಯನ್ನು ಕೆಣಕುತ್ತಾ ಉಳಿದುಕೊಂಡಿದೆ.

ಆದ್ದರಿಂದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘವು ಈ ಅನಿಷ್ಟ ಪದ್ಧತಿಯ ಮುಂದುವರಿಕೆಗೆ ರಾಜ್ಯ ಸರ್ಕಾರವನ್ನೇ ಪ್ರಮುಖ ಆರೋಪಿ ಎಂದು ಗುರುತಿಸಿಕೊಳ್ಳುತ್ತದೆ ಮತ್ತು ಸರ್ಕಾರ ತನ್ನ ಭೂಮಾಲಕ ವರ್ಗಗಳ ಪರವಾದ ಧೋರಣೆಯನ್ನು ಬದಲಾಯಿಸುವಂತೆ ಮಾಡಲು ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸುವ ಸಂಕಲ್ಪ ಮಾಡುತ್ತದೆ. ರಾಜ್ಯದಲ್ಲಿ ಜೀವಂತವಾಗಿರುವ ಅಸ್ಪೃಶ್ಯತಾ ಆಚರಣೆಗಳ ಬಗ್ಗೆ ತನಿಖಾ ಆಯೋಗವನ್ನು ರಚಿಸಬೇಕೆಂದು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡು ರಚನೆಯಾಗಬೇಕು. ಈ ಆಯೋಗವು ರಾಜ್ಯದಲ್ಲಿ ಯಾವ ಯಾವ ವಿಧದ ಅಸ್ಪೃಶ್ಯತಾ ಆಚರಣೆಗಳು ಜಾರಿಯಲ್ಲಿವೆ ಎಂಬುದನ್ನು ಪತ್ತೆ ಹಚ್ಚಿ ಅವುಗಳ ನಿವಾರಣೆಗೆ ಪರಿಣಾಮಕಾರಿ ಪರಿಹಾರಗಳನ್ನು ಶಿಫಾರಸು ಮಾಡಬೇಕು.

ಎರಡನೆಯದಾಗಿ, ಆಯಾ ತಾಲೂಕುಗಳಲ್ಲಿ ಹಾಗೂ ಜಿಲ್ಲೆಗಳಲ್ಲಿ ಅಸ್ಪೃಶ್ಯತೆಯನ್ನು ತಡೆಗಟ್ಟಲು ಆಯಾ ತಹಶೀಲ್ದಾರರನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. ಅಸ್ಪೃಶ್ಯತೆಯ ಆಚರಣೆಯನ್ನು ತಡೆಗಟ್ಟಲು ವಿಫಲರಾಗುವ ಅಧಿಕಾರಿಯ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ಮೂರನೆಯದಾಗಿ, ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯ ವಿರುದ್ಧ ಸರ್ಕಾರವೇ ವ್ಯಾಪಕವಾದ ಒಂದು ಜನಾಂದೋಲನವನ್ನು ರೂಪಿಸಬೇಕು. ಸರ್ಕಾರದ ಎಲ್ಲಾ ಇಲಾಖೆಗಳನ್ನು ಸಂಘ ಸಂಸ್ಥೆಗಳನ್ನು, ಸಮಾಜ ಸೇವಕರನ್ನು ವ್ಯಾಪಕವಾಗಿ ಈ ಆಂದೋಲನದಲ್ಲಿ ತೊಡಗಿಸುವಂತಾಗಬೇಕು. ಸರ್ಕಾರವೇ ಈ ಬಗ್ಗೆ ಮುತುವರ್ಜಿ ವಹಿಸಿಕೊಂಡು ಕಾರ್ಯೋನ್ಮುಖವಾಗಬೇಕು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘವು ಅಸ್ಪೃಶ್ಯತೆ ಹಾಗೂ ಜಾತಿ ಪದ್ಧತಿಯ ವಿರುದ್ಧ ಈ ಕೆಳಗಿನಂತೆ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲು ನಿರ್ಧರಿಸುತ್ತದೆ.

1. ಸಂಘದ ಎಲ್ಲಾ ಗ್ರಾಮ ಹಾಗೂ ತಾಲೂಕು ಘಟಕಗಳು ತಮ್ಮ ತಮ್ಮ ಪ್ರದೇಶದಲ್ಲಿ ಇನ್ನೂ ಜೀವಂತವಾಗಿರುವ ಅಸ್ಪೃಶ್ಯತಾ ಆಚರಣೆಗಳ ವಿವರವಾದ ಅಧ್ಯಯನ ನಡೆಸಿ ಅವುಗಳ ವಿರುದ್ಧ ಪ್ರಚಾರ ಪ್ರಕ್ಷೋಭೆ ನಡೆಸಬೇಕು. ಸಂಘದ ಒಳಗೆ ಎಲ್ಲಾ ರೀತಿಯ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡತಕ್ಕದ್ದು.

2. ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯ ಕುರಿತು ಬರುವ ಆಗಸ್ಟ್ 15 ರ ಒಳಗಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಮಾವೇಶ ಗಳನ್ನು ನಡೆಸುವುದು ಸಮಾವೇಶಗಳಲ್ಲಿ ಮೂಡಿಬರುವ ಬೇಡಿಕೆಗಳ ನಿರ್ಣಯಗಳ ಆಧಾರದಲ್ಲಿ ಆಗಸ್ಟ್ 15 ರ ಒಳಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸಮಾವೇಶಗಳನ್ನು ನಡೆಸುವುದು ಸಮಾವೇಶಗಳಲ್ಲಿ ಮೂಡಿಬರುವ ಬೇಡಿಕೆಗಳ ನಿರ್ಣಯಗಳ ಆಧಾರದಲ್ಲಿ ಆಗಸ್ಟ್ 15 ರಂದು ಸಾಮೂಹಿಕ ಧರಣಿ ಸತ್ಯಾಗ್ರಹಗಳನ್ನು ನಡೆಸುವುದು.

ಲೋಕಸಂಚಾರ

ಶರತ್ ಚಂದ್ರ

ಐಎಂಎಫ್‌ನ ಹಾದಿ ಕಣ್ಣೀರ ಕೋಡಿ ಹರಿಸುವ ಹಾದಿ. ದಕ್ಷಿಣ ಪೂರ್ವ ಏಶ್ಯಾದ ದೇಶಗಳು ಈ ಹಾದಿಯಲ್ಲಿ ಸಾಗಿ ಕಣ್ಣೀರ ಕೋಡಿ ಹರಿಸಿದವು. ಈಗ ದಕ್ಷಿಣ ಅಮೆರಿಕದ ದೇಶಗಳ ಸರದಿ. ಕಣ್ಣೀರ ಹಾದಿಯಲ್ಲಿ ಸಾಗಿದ ಈ ದೇಶಗಳ ಜನ ಸುಮ್ಮನೆ ಕೂತಿಲ್ಲ. ಈ ಹಾದಿಯ ಅಪಾಯ ಅರಿತಾಗ ದಂಗೆ ಎದ್ದಿದ್ದಾರೆ. ಐಎಂಎಫ್ ಮತ್ತು ಅವರ ಅಡಿಯಾಳಾದ ದೇಶದ ಆಳರಸರು ಮುಟ್ಟಿಕೊಂಡು ನೋಡುವ ಹಾಗೆ ವಾಪಸು ಹೊಡೆದಿದ್ದಾರೆ. ಈಗ ದಕ್ಷಿಣ ಅಮೆರಿಕಾದ ಇಕ್ವೇಡೋರ್‌ನ ಜನರ ದಂಗೆ ಅಲ್ಲಿನ ಆಳರಸರಲ್ಲಿ ಎಷ್ಟು ಭಯ ತಂದಿತ್ತು ಎಂದು ಓದಿ ನೋಡಿ. ಈ ಪುಟ್ಟ ದೇಶದ ಜನರನ್ನು ಇಂತಹ ದಂಗೆಯ ಅಂಚಿಗೆ ತಳ್ಳಿದ ಐಎಂಎಫ್‌ನ ಕಣ್ಣೀರ ಹಾದಿಯ ಪರಿ ನೋಡಿ.

ಐಎಂಎಫ್ ಕಣ್ಣೀರ ಹಾದಿಗೆ ಇಕ್ವೆಡೋರ್ ಜನರ ಸವಾಲು

ಐಎಂಎಫ್‌ನ ಛಾಪು ಈಗ ಎಲ್ಲಾ ದೇಶಗಳ ಆರ್ಥಿಕ, ರಾಜಕೀಯ ನೀತಿಗಳ ಮೇಲೆ ಇದೆ. ಜನರ ಬೆನ್ನ ಬೆಲೆ ಐಎಂಎಫ್ ಬರೆ ಬಿದ್ದಿರುತ್ತದೆ. ಆದರೆ ಅವರು ಎಂದೂ ಈ ಐಎಂಫ್ ಧಣಿಗಳ ಮುಖ ನೋಡಿರುವುದಿಲ್ಲ. ಆದರೆ ಇಕ್ವೇಡೊರ್‌ನ ಜನಗಳಿಗೆ ಆ ದುರ್ಭಾಗ್ಯವೂ ಲಭಿಸಿತು. ಮಾರ್ಚ್ 16, 1999, ಇಕ್ವೆಡೋರ್ ನ ದೂರದರ್ಶನದಲ್ಲಿ ಐಎಂಎಫ್ ಮ್ಯಾನೇಜಿಂಗ್ ಡೈರಕ್ಟರ್, ಇಕ್ವೆಡೊರ್‌ನ ಬಿಕ್ಕಟ್ಟಿನ 'ಪರಿಹಾರ'ಕ್ಕೆ ಅಂತರ್‍ರಾಷ್ಟ್ರೀಯ ಬೆಂಬಲ ಸಿಗಬೇಕಾದರೆ ದೇಶದಲ್ಲಿ 'ಐಕ್ಯತೆ' ಇರಲೇಬೇಕು ಎಂದು ಹೇಳಿದ. ಆತ ಹೇಳಬೇಕಂದಿದ್ದು ಐಎಂಎಫ್‌ನ 'ಔಷಧಿ' ಜನ ಸ್ವೀಕರಿಸಲೇಬೇಕು ಅಂತ. ಆದರೂ ಐಎಂಎಫ್‌ನ ಔಷಧಿ ಜನ ಸ್ವೀಕರಿಸಲಿಲ್ಲ. ಜನರ ದಂಗೆಗೆ ತತ್ಕ್ಷಣದ ಕಾರಣವಾದ ಎಲ್ಲಾ ಪ್ರಾಥಮಿಕ ವಸ್ತುಗಳ ಬೆಲೆ ಒಂದೂವರೆಪಟ್ಟಾದ್ದನ್ನು (ಪೆಟ್ರೋಲ್ ಬೆಲೆ ಮೂರು ಪಟ್ಟು ಏರಿತ್ತು) ಪೂರ್ಣವಾಗಿ ಹಿಂತೆಗೆದುಕೊಳ್ಳ ಬೇಕಾಯಿತು.

ಐ.ಎಂ.ಎಫ್.ನ ಕಲ್ಯಾಣ ವೆಚ್ಚಗಳ ಕಡಿತದ ವಿರುದ್ಧ ಇಕ್ವೆಡೊರ್ ಜನರ ದಂಗೆ ಉಕ್ಕೇರಿದಾಗ ಇಕ್ವೆಡೋರ್‌ನ ಅಧ್ಯಕ್ಷ ತುರ್ತು ಪರಿಸ್ಥಿತಿ ಘೋಷಿಸಿ ಜನರನ್ನು ದಮನ ಮಾಡಲು ಪ್ರಯತ್ನಿಸಿದ. ಆದರೆ ಜನರ ದಂಗೆ ವಿಸ್ತಾರವಾಯಿತು. ಮಾರ್ಚ್ 10 ರಿಂದ 18 ರವರೆಗೆ ರಾಷ್ಟ್ರೀಯ ಸಾರ್ವತ್ರಿಕ ಮುಷ್ಕರ ನಡೆಯಿತು. ಬೆಲೆ ಏರಿಕೆ ವಾಪಸ್ಸು ತೆಗೆದುಕೊಳ್ಳುವವರೆಗೆ ಸಾರ್ವತ್ರಿಕ ಮುಷ್ಕರ ನಿಂತಿರಲಿಲ್ಲ. ಐಎಂಎಫ್ ಅಧ್ಯಕ್ಷರ ಬೆದರಿಕೆಗೆ ಜನ ಸೊಪ್ಪು ಹಾಕಿರಲಿಲ್ಲ. ಆದರೆ ಐ.ಎಂ.ಎಫ್. ಒದಗಿಸಿದ ಸಾಲದಿಂದಲೇ ದೇಶದ ಅಧ್ಯಕ್ಷ (ಅರಬ್ ಮೂಲದ ವಲಸೆಗಾರರ ಕುಟುಂಬಕ್ಕೆ ಸೇರಿದ) ಜಾಮೀಲ್ ಮಾಳಾರ್ 7 ತಿಂಗಳ ಸರ್ಕಾರ ಬಿಕ್ಕಟ್ಟು ಮುಂದೂಡಿತ್ತು.

ಮಾರ್ಚ್ '99 ರ ಬಿಕ್ಕಟ್ಟು

ಬಿಕ್ಕಟ್ಟು ಆರಂಭವಾದಾಗ ಅಧ್ಯಕ್ಷ ಜಮೀಲ್ ಸರ್ಕಾರ ಕಂಗಾಲಾಗಿತ್ತು. ಅಧ್ಯಕ್ಷರ ಪ್ರತಿಕೃತಿಯನ್ನು ದೇಶದ ತುಂಬೆಲ್ಲಾ ಗಲ್ಲಿಗೇರಿಸಲಾಗಿತ್ತು. ದೇಶದ 1-2 ಕೋಟಿ ಜನ ಸರ್ಕಾರದ ವಿರುದ್ಧ ದಂಗೆ ಎದ್ದಿತ್ತು. ದೇಶದ ಬಹುಭಾಗ ಕಾರ್ಮಿಕರನ್ನು ಪ್ರತಿನಿಧಿಸುವ ಯುನೈಟೆಡ್ ವರ್ಕರ್ಸ್ ಫ್ರಂಟ್ ಮತ್ತು ದೇಶದ ಮೂಲನಿವಾಸಿಗಳನ್ನು ಪ್ರತಿನಿಧಿಸುವ ನ್ಯಾಶನಲ್ ಇಂಡಿಯನ್ ಕಾನ್‌ಫೆಡರೇಶನ್ ಆಫ್ ಇಕ್ವಡೋರ್ (conaie) ಜಂಟಿಯಾಗಿ ಏರ್ಪಡಿಸಿದ್ದ ಮಾರ್ಚ್ 10-11ರ ಸಾರ್ವಜನಿಕ ಮುಷ್ಕರಕ್ಕೆ ಕರೆ ನೀಡುತ್ತಿದ್ದಂತೆ ದೇಶದ ಹಣಕಾಸು ಮಾರುಕಟ್ಟೆ ಅಲ್ಲೋಲಕಲ್ಲೋಲ ವಾಗಿತ್ತು. ಇಕ್ವಡೋರ್ ನಾಣ್ಯ ಸುಕರ್‌ನ ಮೌಲ್ಯ ಶೇಕಡಾ 40ರಷ್ಟು ಕುಸಿದಿತ್ತು. ಸರ್ಕಾರ ಗಾಬರಿಗೊಂಡು ಬ್ಯಾಂಕಿನಿಂದ ಹಣ ವಾಪಸ್ಸು ಪಡೆಯುವುದನ್ನು ನಿಷೇಧಿಸಿದರು. ಪ್ರಾಥಮಿಕ ವಸ್ತುಗಳ ಬೆಲೆ ಶೇಕಡಾ 50 ರಷ್ಟು, ಪೆಟ್ರೋಲ್ ಬೆಲೆ ಎರಡರಷ್ಟು ಏರಿಸಿತ್ತು. ತುರ್ತುಪರಿಸ್ಥಿತಿ ಘೋಷಿಸಿ ಸೈನ್ಯವನ್ನು ಮುಖ್ಯವಾಗಿ ತೈಲ ಸ್ಥಾವರಗಳ 'ರಕ್ಷಣೆ'ಗೆ ಕಳಿಸಲಾಗಿತ್ತು. ಪ್ರತಿದಿನ ಸೈನ್ಯ ಮತ್ತು ಜನರ ನಡುವೆ ಘರ್ಷಣೆಗಳಾಗುತ್ತಿದ್ದವು.

ಮುಷ್ಕರ ಎರಡನೇ ದಿನ ಪ್ರವೇಶಿಸುತ್ತಿದ್ದಂತೆ ಪ್ರಮುಖ ನಗರಗಳಲ್ಲಿ ಮೂರು ಲಕ್ಷ ಟ್ಯಾಕ್ಸಿ ಡ್ರೈವರ್ಸ್ ಮುಷ್ಕರ ಪ್ರವೇಶಿಸಿ ತೈಲ ಉತ್ಪಾದನೆ 410 ಸಾವಿದ ಬ್ಯಾರೆಲ್‌ಗಳಿಂದ 18 ಸಾವಿರ ಬ್ಯಾರೆಲ್‌ಗಳಿಗೆ ಕುಸಿದಿತ್ತು. ಆಗಲೇ ಗಾಬರಿಗೊಂಡು ಅಧ್ಯಕ್ಷ ಜಾಮಿಲ್ ಐ.ಎಂ.ಎಫ್. ಮ್ಯಾನೇಜಿಂಗ್ ಡೈರೆಕ್ಟರರ 'ದೂರದರ್ಶನ' ಮಾಡಿಸಿದ್ದು ಜನಗಳಿಗೆ.

ಪ್ರತಿರೋಧ ಹೊಸದಲ್ಲ

ಇಕ್ವೆಡೊರ್‌ನ ತೀವ್ರ ಆರ್ಥಿಕ ಬಿಕ್ಕಟ್ಟಾಗಲಿ, ಅದಕ್ಕೆ ಜನರ ತೀವ್ರ ಪ್ರತಿರೋಧವಾಗಲಿ ಎರಡೂ ಹೊಸದಲ್ಲ. ಐ.ಎಂ.ಎಫ್.ನ ವಿನಾಶಕಾರಿ ನೀತಿ ವಿರುದ್ಧ ಹೋರಾಟದ ಹಾದಿ ನೋಡಿ 50 ರ ದಶಕದಲ್ಲಿ ಇಕ್ವೆಡೊರ್‌ನ ಕೃಷಿ ಉತ್ಪನ್ನಗಳ ಬೆಲೆ ಏರುಪೇರಿನಿಂದ ದೇಶ ತತ್ತರಿಸಿತ್ತು. ಇಕ್ವೆಡೊರ್ ಕಚ್ಚಾವಸ್ತುಗಳು ಸಮೃದ್ಧವಾಗಿರುವ ದೇಶ. ಬಾಳೆಹಣ್ಣು, ಕೋಕೋ, ಕಾಫಿ ಮತ್ತು ತೈಲ ಈ ದೇಶದ ಮುಖ್ಯ ಉತ್ಪನ್ನಗಳು. ಇವು ದೇಶದ ಬೆಳವಣಿಗೆಗೆ ಇಂಜಿನ್‌ಗಳಾಗಲಿಲ್ಲ. ಆದರೆ ಈ ಎಲ್ಲಾ ಉತ್ಪನ್ನಗಳ ಬಹುಪಾಲು ದೈತ್ಯ ಕೃಷಿ-ಉತ್ಪನ್ನ, ತೈಲ ಕಂಪನಿಗಳ ಕೈಯಲ್ಲಿದೆ. ಅವುಗಳ ಬೆಲೆಗಳ ಏರುಪೇರು ಇಕ್ವೆಡಾರ್‌ನ ಆರ್ಥಿಕವನ್ನು ಹಾಳುಗೆಡಹಿವೆ. ಉದಾಹರಣೆಗೆ 1950 ರಿಂದ 60 ರವರೆಗೆ ಕೊಕೊ ಉತ್ಪಾದನೆ ಶೇಕಡಾ 30 ರಷ್ಟು ಏರಿಕೆಯಿಂದ, ದೇಶಕ್ಕೆ ಬಂದ ಆದಾಯ ಏರಿಕೆ ಶೇಕಡ 10 ಮಾತ್ರ. ಉಳಿದಿದ್ದೆಲ್ಲಾ ಈ ಅಮೆರಿಕನ್ ಕಂಪನಿಗಳು ಗುಳುಂ ಮಾಡಿದ್ದವು ಇಲ್ಲವೇ ಅಮೇರಿಕನ್ ಬಳಕೆದಾರರಿಗೆ ಬೆಲೆ ಇಳಿಸಲಾಗಿತ್ತು. ಇದು ಜನಜೀನವನ್ನು ದುರ್ಬಲಗೊಳಿಸಿತು. 1970ರ ಹೊತ್ತಿಗೆ ಇಕ್ವೆಡೋರ್‌ನ ಶೇಕಡಾ 70 ಜನ ಪೋಷಕ ಆಹಾರದ ಕೊರತೆಯಿಂದ ಬಳಲುತ್ತಿದ್ದರು. ಈಗಲೂ ಅದೇ ಸ್ಥಿತಿ ಇದೆ. 1969ರಲ್ಲಿ ಭೂಸುಧಾರಣೆಗೆ ನಡೆದ ದುರ್ಬಲ ಪ್ರಯತ್ನ ವಿಫಲವಾಯಿತು. (ನಮ್ಮ ವಿನೋಬಾಭಾವೆಯವರ ಭೂದಾನದಂತೆ ಬಂಜರು ಭೂಮಿಯನ್ನು ಬಡವರಿಗೆ ಸ್ವಲ್ಪ ಪ್ರಮಾಣದಲ್ಲಿ ಕೊಡಲಾಗಿದೆ)

ಈಗಿನ ಸ್ಥಿತಿ -
ಐಎಂಎಫ್ ನೀತಿಗಳ ಫಲ

1998 ರ ಕೊನೆ ಹೊತ್ತಿಗೆ ಇಕ್ವೆಡೋರ್‌ನ ವಿದೇಶಿ ಸಾಲ 13 ಶತಕೋಟಿ ಡಾಲರಿಗೆ ಮುಟ್ಟಿತ್ತು (ಇದು ಅಲ್ಲಿನ ಒಟ್ಟು ಉತ್ಪನ್ನದ ಶೇಕಡಾ 60.1)ಸಾಲದೆಂಬಂತೆ ಇಕ್ವೆಡೋರ್‌ನ ಶ್ರೀಮಂತರಷ್ಟು ಕಾನೂನು ಭಂಜಕರು ಬೇರೆಲ್ಲೂ ಸಿಗಲಿಕ್ಕಿಲ್ಲ. ಆದಾಯ ತೆರಿಗೆ ಸಂಗ್ರಹ ಈ ದೇಶದಲ್ಲಿ ಶೇಕಡಾ 30 ಕ್ಕಿಂತಲೂ ಕಡಿಮೆ.

ಆದರೆ ಐಎಂಎಫ್‌ನ ಸಮಜಾಯಿಷಿ ಇತ್ತೀಚಿನ ಎಲ್‌ನಿನೊ, ಬೆಳೆಗಳನ್ನು ಹಾಳು ಮಾಡಿದ 'ಏಶಿಯನ್ ಫ್ಲೂ' ರೋಗ ಎಂದು. ಈ ವರ್ಷದ ಬಿಕ್ಕಟ್ಟಿಗೆ ಈ ಎರಡು ಕಾರಣಗಳು ಸ್ವಲ್ಪ 'ಕೊಡುಗೆ' ಕೊಟ್ಟಿವೆಯಾದರೂ ಅವೇ ಕಾರಣ ಎಂದು ಹೇಳುವಂತಿಲ್ಲ. ಇಪತ್ತು ವರ್ಷದ ಹಿಂದಿನವರೆಗೆ ಹಲವು ವರ್ಷಗಳ ಕಾಲ ಮಿಲಿಟರಿ ಸರ್ವಾಧಿಕಾರಿಗಳ ಬೂಟುಗಳಡಿಯಲ್ಲಿ ನರಳಿದ ಇಕ್ವೆಡೋರ್, ನಂತರವೂ ನೈಜ ಪ್ರಜಾಪ್ರಭುತ್ವ ಕಾಣಲಿಲ್ಲ. 50 ರ ದಶಕದ ಆರಂಭದಲ್ಲಿ ದೊಡ್ಡ ಪ್ರಮಾಣದಲ್ಲಿ ಐಎಂಎಫ್ ಜಾಗತೀಕರಣದ ನೀತಿಗಳನ್ನು ದೇಶದ ಮೇಲೆ ಹೇರತೊಡಗಿದಂತೆ, ಬಿಕ್ಕಟ್ಟು ತೀವ್ರವಾಯಿತು. 1994 ರಿಂದ ಜಾಗತೀಕರಣದ ವಿರುದ್ಧ ಪ್ರತಿರೋಧ ತೀವ್ರವಾಗುತ್ತಿದ್ದರೂ ಇಲ್ಲಿನ ಚುನಾವಣೆಗಳಲ್ಲಿ ಜಾಗತೀಕರಣದ ನೀತಿಗಳು ದೇಶಕ್ಕೆ ಮಾರಕವೇ ಇಲ್ಲವೆ ಎಂಬ ಬಗ್ಗೆ ಚರ್ಚೆ ಚುನಾವಣಾ ವಿಷಯವಾಗಲಿಲ್ಲ. ಈಗಲೂ ಅಧ್ಯಕ್ಷ ಐಎಂಎಫ್ ನೀತಿಗಳನ್ನು ಬಿಟ್ಟುಕೊಟ್ಟಿಲ್ಲ. ಶೇಕಡಾ 63 ಜನ ಈಗಲೂ ಬಡತನದ ರೇಖೆಯ ಕೆಳಗೆ ಇದ್ದಾರೆ. ಈಗಲೂ ಸರ್ಕಾರ ಬಿಕ್ಕಟ್ಟಿಗೆ ಹುಡುಕುವ ಪರಿಹಾರ ಜನಪರ ಅಲ್ಲವೇ ಅಲ್ಲ. ಇಂಡೋನೇಶ್ಯಾ, ರಶ್ಯಾಗಳಲ್ಲಿ ಹಿಂದೆ ಯೋಚಿಸಿದಂತೆ ತನ್ನ ನಾಣ್ಯ ಬಿಟ್ಟುಕೊಟ್ಟು ಅಮೆರಿಕನ್ ಡಾಲರನ್ನೇ ನಾಣ್ಯವಾಗಿ ಸ್ವೀಕರಿಸುವ ಹಾದಿಯಲ್ಲಿದೆ. ಇತ್ತೀಚೆಗೆ ಅರ್ಜೆಂಟಿನಾ ಆ ರೀತಿ ಮಾಡಿದೆ. ಆದರೆ ಕೇವಲ 1.2 ಶತಕೋಟಿ ಡಾಲರು ವಿದೇಶಿ ವಿನಿಮಯ ಹೊಂದಿರುವ ದೇಶಕ್ಕೆ ಇದು ಪರಿಹಾರವಲ್ಲ.

ಇಕ್ವೆಡೋರ್‌ನ ಜನರ ಹೋರಾಟ ನಡೆದು ಬಂದ ದಾರಿ ನೋಡಿದರೆ, ಮಾರ್ಚ್ ದಂಗೆ ಹೊಸ ರೂಪಗಳಲ್ಲಿ ಪುನಃ ಅವತರಿಸುತ್ತದೆ ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದು.

ಐಎಂಎಫ್ ವಿನಾಶಕಾರಿ ನೀತಿಗಳ ವಿರುದ್ಧ ಇಕ್ವೆಡೋರ್‌ನ ಜನರ ಹೋರಾಟ ನಡೆದು ಬಂದ ದಾರಿ

- 1994 ರಲ್ಲಿ ಮೆಕ್ಸಿಕೊದ ಚಿಯಾಪಾಸ್‌ನಲಿ ಝಪಾಟಿಸ್ಟರು ಸಶಸ್ತ್ರ ದಂಗೆಗೆ ಇಳಿದು ದೇಶವನ್ನು ನಡುಗಿಸುತ್ತಿದ್ದಂತೆ ಇಕ್ವೆಡೋರ್ ನಲ್ಲೂ ರೈತ ಯೂನಿಯನ್‌ಗಳು, ಆದಿವಾಸಿ ಇಂಡಿಯನ್ನರ ಸಂಘಟನೆಗಳು ಎರಡು ವಾರಗಳ ಕಾಲ ದೇಶದ ಗ್ರಾಮೀಣ ಪ್ರದೇಶಗಳನ್ನು ಹೆಚ್ಚು ಕಡಿಮೆ ವಶಪಡಿಸಿಕೊಂಡಿದ್ದವು.
- 1997 ಫೆಬ್ರವರಿ 5 ರಂದು 20 ಲಕ್ಷ ಜನ ಸಾರ್ವತ್ರಿಕ ಮುಷ್ಕರ ಹೂಡಿದರು. ಗಗನಕ್ಕೇರಿದ ಬೆಲೆಗಳ (ಪೆಟ್ರೋಲ್ ಬೆಲೆ ಮೂರೂವರೆ ಪಟ್ಟು, ಟೆಲಿಫೋನ್ ದರ 8 ಪಟ್ಟು ಏರಿತ್ತು) ಇಳಿಕೆ ಮುಷ್ಕರದ ಮುಖ್ಯ ಬೇಡಿಕೆಯಾಗಿತ್ತು. ಆ ಬಿಕ್ಕಟ್ಟಿನಲ್ಲಿ ಆಗಿನ ಅಧ್ಯಕ್ಷ ಬುಕಾರಾಮ್ ರಾಜೀನಾಮೆ ಕೊಡಬೇಕಾಗಿ ಬಂದಿತ್ತು.
- ಅಕ್ಟೋಬರ್ 1, 1998 ರಂದು ಐಎಂಎಫ್ ನೀತಿಗಳ ವಿರುದ್ಧ ಒಂದು ದಿನದ ಸಾರ್ವತ್ರಿಕ ಮುಷ್ಕರ ನಡೆಯಿತು. ಇಕ್ವೆಡೋರ್‌ನ ನಾಣ್ಯದ ಬೆಲೆ ಶೇಕಡಾ 15 ರಷ್ಟು ಕುಸಿದದ್ದು ತೀವ್ರ ಅತೃಪ್ತಿಗೆ ಕಾರಣವಾಗಿತ್ತು.
- ಫೆಬ್ರವರಿ 4, 1999 1.2 ಲಕ್ಷ ಶಿಕ್ಷಕರು ಅನಿರ್ದಿಷ್ಟ ಮುಷ್ಕರ ಆರಂಭಿಸಿದರು. ಸಂಬಳ ಏರಿಕೆ ಜತೆ, ತೆರಿಗೆಯ ಸರಿಯಾದ ಕಲೆಕ್ಷನ್, ಭ್ರಷ್ಟಾಚಾರ ಪ್ರಕರಣಗಳಲ್ಲಿ ಆಸ್ತಿ ಕುಸಿತ ಇವು ಅವರ ಬೇಡಿಕೆಗಳಾಗಿದ್ದವು. ಈ ಶಿಕ್ಷಕರ ಒಂದು ವಿಭಾಗ ಇನ್ನೂ ಮುಷ್ಕರದಲ್ಲಿದೆ.

ಚುಟುಕು ಸುದ್ದಿಗಳು

ಯುಗೋಸ್ಲಾವಿಯಾದ ಚೀನಾ ರಾಯಭಾರ ಕಚೇರಿ ಮೇಲೆ ನಾಟೋ ಧಾಳಿ

ಯುಗೋಸ್ಲಾವಿಯದ ಚೀನಾ ರಾಯಭಾರ ಕಚೇರಿ ಮೇಲೆ ನಾಟೋ ದಾಳಿಗೆ ಚೀನಾ ತೀವ್ರವಾಗಿ ಪ್ರತಿಭಟಿಸಿದ್ದು, ಅಧ್ಯಕ್ಷ ಕ್ಲಿಂಟನ್‌ರು ಅದು 'ತಾಂತ್ರಿಕ ತಪ್ಪು' ಯೋಜಿತ ದಾಳಿ ಅಲ್ಲ ಎಂದು ಕ್ಷಮೆ ಕೋರಬೇಕಾಗಿ ಬಂದಿದೆ. ಚೀನದಾದ್ಯಂತ ಇದರ ವಿರುದ್ಧ ಅಭೂತಪೂರ್ವ ಕೋಪೋದ್ರಿಕ್ತ ಪ್ರತಿಭಟನೆಗಳು ನಡೆದಿದ್ದು, ಚೀನಾದ ಸರ್ಕಾರ ಕ್ಲಿಂಟನರ 'ಕ್ಷಮಾಯಾಚನೆ'ಯನ್ನು ತಿರಸ್ಕರಿಸಿದೆ. ರಶ್ಯ ಸಹ ಇದನ್ನು ತೀವ್ರವಾಗಿ ಖಂಡಿಸಿದೆ.

ರಶ್ಯಾ ಪ್ರಧಾನಿ ಪ್ರಿಮೊಕೊವ್ ವಜಾ - ಹೊಸ ಬಿಕ್ಕಟ್ಟು

ರಶ್ಯಾದ ತಿಕ್ಕಲು ಅಧ್ಯಕ್ಷ ಯೆಲ್ಸಿನ್ ತಮ್ಮ ತಿಕ್ಕಲುತನಕ್ಕೆ ಕೊನೆಯಿಲ್ಲವೆಂದು ತೋರಿಸಿದ್ದಾರೆ. ದೇಶಕ್ಕೆ ಸ್ವಲ್ಪಮಟ್ಟಿಗೆ ಉತ್ತಮ ಆಡಳಿತ ಕೊಡಲು ಆರಂಭಿಸಿದ್ದ ಪ್ರಧಾನಿ ಪ್ರಿಮೊಕೊವ್ ಮತ್ತು ಅವರ ಮಂತ್ರಿ ಮಂಡಲವನ್ನು ವಜಾ ಮಾಡಿದ್ದಾರೆ. ರಶ್ಯಾದ ಆರ್ಥಿಕವನ್ನು ಕಳೆದ ಕೆಲವು ತಿಂಗಳುಗಳ ನಂತರವೂ ಸುಧಾರಿಸಲು ಸಾಧ್ಯವಾಗದಿರುವುದು ಕಾರಣ ಅಂತ ಅವರ ಅಂಬೋಣ. ಆದರೆ ನಿಜವಾದ ಕಾರಣ ಅವರ ವಿರುದ್ಧ ಆರಂಭವಾಗಿರುವ 'ದೋಷಾರೋಪಣೆ' ಮೊಕದ್ದಮೆ ಎನ್ನಲಾಗಿದೆ.

ನೇಪಾಳಿ ಹಿರಿಯ ಕಮ್ಯುನಿಸ್ಟ್ ನಾಯಕ ಅಧಿಕಾರಿ ನಿಧನ

ನೇಪಾಳಿ ಕಮ್ಯುನಿಸ್ಟ್ ಪಕ್ಷ (ಸಂಯುಕ್ತ ಮಾರ್ಕ್ಸ್‌ವಾದಿ ಲೆನಿನ್‌ವಾದಿ)ಹಿರಿಯ ನಾಯಕ ಮನಮೋಹನ ಅಧಿಕಾರಿ ನಿಧನ ಹೊಂದಿದ್ದಾರೆ. ಅವರು ಈಗ ನೇಪಾಳದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪ್ರಚಾರ ಮಾಡುತ್ತಿರುವಾಗ ಅಸ್ವಸ್ಥರಾಗಿ ನಿಧನರಾದರು. 1942 ರಲ್ಲಿ ಕ್ವಿಟ್ - ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದ ಅಧಿಕಾರಿ ಅವರು ನೇಪಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರಾಗಿದ್ದು ನೇಪಾಳಿ ರಾಜಕೀಯದ 'ಭೀಷ್ಮ ಪಿತಾಮಹ' ಎಂದೆನಿಸಿಕೊಂಡಿದ್ದರು. ನೇಪಾಳದ ರಾಜ ಪ್ರಭುತ್ವ ಪರವಾಗಿದ್ದ 'ಪಂಚಾಯತ್ ರಾಜ್.....'ನ ವಿರುದ್ಧ ಹೋರಾಟದ ಮುಂಚೂಣಿ ನಾಯಕರಾಗಿದ್ದರು.

ಯುಗೋಸ್ಲಾವಿಯದಲ್ಲಿ ಮುಂದುವರಿಯುತ್ತಿದೆ ಸಾಮ್ರಾಜ್ಯಶಾಹಿ ಭಂಡತನ ಈಗಲಾದರೂ ಭಾರತ ಸರ್ಕಾರ ಕಾರ್ಯಪ್ರವೃತ್ತವಾಗಬೇಕು

ಯುಗೋಸ್ಲಾವಿಯಾದ ಮೇಲೆ ನಾಟೋ ಬಾಂಬ್ ದಾಳಿ ಮುಂದುವರೆಯುತ್ತಿರುವುದನ್ನು ಸಿಪಿಐ(ಎಂ)ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಭಂಡತನ ಎಂತಹ ಮಟ್ಟ ತಲುಪಿದೆಯೆಂದರೆ ಮಾತುಕತೆ ನಡೆಯುತ್ತಿರುವಾಗಲೂ ಏಕಪಕ್ಷೀಯ ಬಾಂಬು ಧಾಳಿಗಳನ್ನು ನಿಲ್ಲಿಸಲಾಗಿಲ್ಲ. ಅಂತರ್‍ರಾಷ್ಟ್ರೀಯ ಕಾನೂನನ್ನು, ಜನಗಳ ಇಚ್ಛೆಯನ್ನು ಯಾವುದೇ ಹಿಂಜರಿಕೆಯಿಲ್ಲದೆ ಉಲ್ಲಂಘಿಸಿ ಈಗಾಗಲೇ ಹಲವಾರು ಮುಗ್ಧ ಜೀವಗಳ ಬಲಿ ತೆಗೆದುಕೊಳ್ಳಲಾಗಿದೆ.

ಬಾಂಬು ಧಾಳಿ ಎಷ್ಟೊಂದು ಬೇಕಾಬಿಟ್ಟಿಯಾಗಿ ನಡೆಯುತ್ತಿದೆ, ಮುಗ್ಧ ನಾಗರೀಕರ ಬಲಿ ತೆಗೆದುಕೊಳ್ಳುತ್ತಿದೆ ಎಂಬುದಕ್ಕೆ ಯುಗೋಸ್ಲಾವಿಯದ ರಾಜಧಾನಿ ಬೆಲ್‌ಗ್ರೇಡಿನಲ್ಲಿರುವ ಚೀನಾದ ರಾಯಭಾರ ಕಚೇರಿಯ ಮೇಲಿನ ಬಾಂಬುಧಾಳಿ ಎತ್ತಿ ತೋರಿದೆ. ಒಂದು ಸಾರ್ವಭೌಮ ದೇಶದ ಮೇಲೆ ಭೀಕರ ಏಕಪಕ್ಷೀಯ ಧಾಳಿ ಆರಂಭಿಸಿರುವ ಹೊಣೆ ಅಮೇರಿಕನ್ ಅಧ್ಯಕ್ಷ ಬಿಲ್ ಕ್ಲಿಂಟನ್‌ರಷ್ಟೇ ಎಂದು ಇತಿಹಾಸದಲ್ಲಿ ದಾಖಲಾಗುತ್ತದೆ ಎಂದುಸಿಪಿಐ(ಎಂ) ಎಚ್ಚರಿಸಿದೆ.

ಈ ಬರ್ಬರ ಬಾಂಬುಧಾಳಿ ತಕ್ಷಣ ನಿಲ್ಲಬೇಕು. ವಿಶ್ವಸಂಸ್ಥೆಯ ಭದ್ರತಾ ಸಮಿತಿ ತನ್ನ ಅಧಿಕಾರವನ್ನು ಚಲಾಯಿಸಬೇಕು, ಹಲವು ದೇಶಗಳು, ವಿಶೇಷವಾಗಿ ರಶ್ಯಾ ಮುಂದಿಟ್ಟಿರುವ ಶಾಂತಿ ಪ್ರಸ್ತಾವಗಳನ್ನು ಪರಿಶೀಲಿಸುವಂತೆ ಮಾಡಬೇಕು.

ಚೀಣೀ ರಾಯಭಾರಿ ಕಚೇರಿಯ ಮೇಲಿನ ಧಾಳಿಯ ಬಗ್ಗೆ ಖೇದ ವ್ಯಕ್ತಪಡಿಸುವಾಗಲೂ ಅಮೆರಿಕನ್ ಅಧ್ಯಕ್ಷರು ತಮ್ಮ ಅಸಮರ್ಥನೀಯ ಮಿಲಿಟರಿ ಕಾರ್ಯಾಚರಣೆಯನ್ನು ಬೆಂಬಲಿಸದ ದೇಶಗಳೆಲ್ಲಾ ಇಂತಹ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಪರೋಕ್ಷ ಬೆದರಿಕೆ ಹಾಕಿದ್ದಾರೆ. ಈ ಸಾಮ್ರಾಜ್ಯಶಾಹಿ ಅಹಂಕಾರಕ್ಕೆ ತಕ್ಕ ಉತ್ತರ ನೀಡಬೇಕು ಎಂದುಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಎಲ್ಲಾ ಶಾಂತಿಪ್ರಿಯ ಜನಗಳು ಯುಗೋಸ್ಲಾವಿಯದ ವಿರುದ್ಧ ಅಟ್ಟಹಾಸದ ಧಾಳಿಗಳನ್ನು ಪ್ರತಿಭಟಿಸಬೇಕು, ಭಾರತ ಸರ್ಕಾರ ಈಗಲಾದರೂ ಕೇವಲ ಹೇಳಿಕೆಗಳನ್ನಷ್ಟೇ ನೀಡಿ ಸುಮ್ಮನಾಗದೆ ಸಾಮ್ರಾಜ್ಯಶಾಹಿ ಅಹಂಕಾರದ ಈ ಹೀನ ಪ್ರದರ್ಶನವನ್ನು ನಿಲ್ಲಿಸಲು ಎಲ್ಲಾ ಅಲಿಪ್ತ ದೇಶಗಳನ್ನು ಅಣಿನೆರೆಸಲು ಮುತುವರ್ಜಿ ವಹಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಎಲ್ಲೆಲ್ಲೂ ವಿಶ್ವಕಪ್ ಕ್ರಿಕೆಟ್ ಭರಾಟೆ

ಇನ್ನು ಒಂದೂವರೆ ತಿಂಗಳ ಕಾಲ ಭಾರತದ ಹೆಚ್ಚಿನ ಜನತೆಯ ಗಮನವೆಲ್ಲಾ ಕ್ರಿಕೆಟ್ ಕಡೆಗೆ ಏಳನೇ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಮೇ 14 ರಿಂದ ಇಂಗ್ಲೆಂಡಿನಲ್ಲಿ ಆರಂಭವಾಗಿದೆ. ಉರಿ ಬಿಸಿಲಿನಲ್ಲಿ ಐದು ದಿನಕಾಲ (ಒಂದು ವಿರಾಮ ದಿನ ಸೇರಿದರೆ ಆರು) ಸಾವಿರಾರು ಮಂದಿ ಪ್ರೇಕ್ಷಕರು ನೋಡುವಂತೆ ಲಕ್ಷಾಂತರ ಶ್ರೋತೃಗಳು ಮೈಯೆಲ್ಲಾ ಕಿವಿ ಮಾಡಿ ಕೇಳುವಂತೆ ಮಾಡುವ ಆಟವಾಗಿತ್ತು ಕ್ರಿಕೆಟ್. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಐದು ದಿನದ ಟೆಸ್ಟ್ ಆಟ ಸ್ವಾರಸ್ಯ ಕಳೆದುಕೊಂಡು ಕೇವಲ ಸಂಪ್ರದಾಯವಾಗಿ ಉಳಿದಿದೆ. ರೇಡಿಯೋ ಸ್ಥಾನವನ್ನು ದೂರದರ್ಶನ ಆಕ್ರಮಿಸಿಕೊಂಡಿದೆ. ಏಕದಿನದ ಕ್ರಿಕೆಟ್ ಇಂದು ಜನರ ಆಸಕ್ತಿ ಕೆರಳಿಸಿದೆ. ಈ ಸಂದರ್ಭದಲ್ಲಿ ವಿಶ್ವದಲ್ಲಿ ಹಾಗೂ ಭಾರತದಲ್ಲಿ ಕ್ರಿಕೆಟ್‌ನ ಉಗಮ ಮತ್ತು ಬೆಳವಣಿಗೆ ಕಡೆ ಒಂದು ಕಿರು ನೋಟ

ಆರ್.ಡಿ.ಮೆಲ್ಕಿಯೋರ್

ಕ್ರಿಕೆಟ್‌ನ ಉಗಮ ಐಸ್‌ಲ್ಯಾಂಡಿನಲ್ಲಿ ಆಯಿತೆಂಬ ಅಭಿಪ್ರಾಯವಿದೆ. ಕ್ರಿ.ಶ.400ರಲ್ಲಿ ಜೂಟ್ ಜನಾಂಗದವರು ಈ ಆಟವನ್ನು ಇಂಗ್ಲೆಂಡಿಗೆ ತಂದರು. ಮುಂದೆ ಇಂಗ್ಲೆಂಡಿನಲ್ಲಿ ಈ ಆಟ ತೀರಾ ಜನಪ್ರಿಯವಾಯಿತು. ಹಿಂದೆ ಇಂಗ್ಲೆಂಡಿನಲ್ಲಿ ಸಭ್ಯತೆ ಎಂದರೆ ಕ್ರಿಕೆಟ್ ಎಂದು ಹೆಸರಾಗಿತ್ತು. ಈ ಆಟದ ಬಗ್ಗೆ 1598 ರಿಂದ ಲಿಖಿತ ದಾಖಲೆ ಲಭ್ಯವಿದೆ. 1744ರಿಂದ ಕ್ರಿಕೆಟ್ ಬಗ್ಗೆ ನಿಯಮಗಳ ಲಿಖಿತ ದಾಖಲೆ ಇದೆ. 1787ರಲ್ಲಿ ಇಂಗ್ಲೆಂಡಿನಲ್ಲಿ ಪ್ರತಿಷ್ಠಿತ ಮೆಲಬೋರ್ನ್ ಕ್ರಿಕೆಟ್ ಕ್ಲಬ್ ಸ್ಥಾಪಿತವಾಗಿ ಅಲ್ಲಿಂದ ಕ್ರಿಕೆಟ್ ನಿಯಮಾವಳಿಗಳು ರೂಪಿತವಾಗತೊಡಗಿದವು. ಮುಂದೆ ಇಲ್ಲಿಂದಲೇ ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಆರಂಭವಾಯಿತು. ಬ್ರಿಟಿಷರು ವಿಶ್ವದಲ್ಲೆಲ್ಲಾ ವಸಾಹತು ಸ್ಥಾಪಿಸಲು ತೊಡಗಿದಾಗಿನಿಂದ ವಸಾಹತುಗಳೊಡನೆ ಆಯಾ ದೇಶಗಳಿಗೆ ಬ್ರಿಟಿಷರ ಬಳುವಳಿಯಾಗಿ ಕ್ರಿಕೆಟ್ ಹರಡಿತು. ಈ ರೀತಿ ಭಾರತ, ಪಾಕಿಸ್ತಾನ, ಶ್ರೀಲಂಕಾ, ದಕ್ಷಿಣ ಆಫ್ರಿಕಾ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಜಿಂಬಾಬ್ವೆ ದೇಶಗಳು ಇಂದಿಗೂ ಅಗ್ರಗಣ್ಯ ಕ್ರಿಕೆಟ್ ರಾಷ್ಟ್ರಗಳಾಗಿವೆ. ಭಾರತಕ್ಕೆ ಬ್ರಿಟಿಷರೊಡನೆ ಈ ಆಟ ಬಂದಿತು. ಹಾಗೂ 1792ರಲ್ಲಿ ಕಲ್ಕತ್ತಾ ಕ್ರಿಕೆಟ್ ಕ್ಲಬ್ ಆರಂಭವಾಯಿತು. ಆದರೆ ಈ ಕ್ಲಬ್‌ನಲ್ಲಿ ಯಾರೂ ಭಾರತೀಯ ಆಟಗಾರರಿರಲಿಲ್ಲ. ಮುಂದೆ ಬ್ರಿಟೀಷರ ಅಡಿಯಾಳುಗಳಾಗಿದ್ದ ಭಾರತದ ಐಷಾರಾಮಿ ರಾಜ ಕುಟುಂಬಗಳು ಕ್ರಿಕೆಟ್ ಅನ್ನು ಭಾರತದಲ್ಲಿ ಜನಪ್ರಿಯಗೊಳಿಸಿದವು. ಭಾರತದ ರಾಜರ ಹಾಗೂ ರಾಜಕುಮಾರರ ಕ್ರಿಕೆಟ್ ಆಟದ ಬಗ್ಗೆ ಹಾಸ್ಯಾಸ್ಪದ ಆದರೂ ನಿಜವಾದ ಅನೇಕ ಪ್ರಸಂಗಗಳಿವೆ. ರಾಜ ಮನೆತನದವರ ಕ್ರಿಕೆಟ್ ಪರಂಪರೆ ಇಂದಿಗೂ ಭಾರತದಲ್ಲೆಲ್ಲ ಮುಂದುವರೆದಿದೆ. ರಣಜಿತ್‌ಸಿಂಗ್, ದುಲಪ್ ಸಿಂಗ್ ರಿಂದ ಆರಂಭಿಸಿ, ಗಾಯಕ್‌ವಾಡ್ ಕುಟುಂಬ, ಯಜುವೇಂದ್ರ ಸಿಂಗ್, ಹಿರಿಯ ಹಾಗೂ ಕಿರಿಯ ಪಟೌಡಿಗಳು ಭಾರತದ ಕ್ರಿಕೆಟ್ ರಂಗದಲ್ಲಿ ಆಡಿ ಹೋಗಿದ್ದಾರೆ. ಇಂದಿನ ಭಾರತದ ತಂಡದ ಉಪನಾಯಕ ಅಜಯ್ ಜಡೇಜಾ ಹಾಗೂ ಭಾರತದ ಕೋಚ್ ಅನ್ಶುಮನ್ ಗಾಯಕ್‌ವಾಡ್ ಕೂಡ ರಾಜ ಮನೆತನದವರು. ಮುಂದೆ 1848ರಲ್ಲಿ ಮುಂಬೈನಲ್ಲಿ ಶ್ರೀಮಂತ ಪಾರ್ಸಿಗಳು ಓರಿಯೆಂಟಲ್ ಕ್ರಿಕೆಟ್ ಕ್ಲಬ್ ಆರಂಭಿಸಿದರು.



ಟೆಸ್ಟ್‌ನಿಂದ ಏಕ ದಿನದ ಪಂದ್ಯದವರೆಗೆ

ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿ ನಿಯಮಗಳ ಪ್ರಕಾರ 5 ದಿನದ ಟೆಸ್ಟ್ ಕ್ರಿಕೆಟ್ ಅಧಿಕೃತ ಕ್ರಿಕೆಟ್ ಪಂದ್ಯವಾಗಿತ್ತು. (ಅಂತರಾಷ್ಟ್ರೀಯ ಮಟ್ಟದಲ್ಲಿ) ಭಾರತ ತನ್ನ ಮೊದಲ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ ವಿರುದ್ಧ 1932ರಲ್ಲಿ ಇಂಗ್ಲೆಂಡ್‌ನಲ್ಲಿ ಆಡಿತು. 1971 ರವರೆಗೆ 5 ದಿನಗಳ ಟೆಸ್ಟ್‌ನಲ್ಲಿ ಪಂದ್ಯ ಸಾಂಪ್ರದಾಯಿಕ ಕ್ರಿಕೆಟ್ ಆಗಿತ್ತು. 1971ರಲ್ಲಿ ಮಳೆಯ ಕಾರಣ ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯ ನಡೆಯಲಿಲ್ಲ. ಪಂದ್ಯದ ಕೊನೆಯ ದಿನ ಪ್ರೇಕ್ಷಕರನ್ನು ರಂಜಿಸಲು 40 ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯ ನಡೆದು ಇದು ಮೊದಲ ಏಕ ದಿನದ ಕ್ರಿಕೆಟ್ ಪಂದ್ಯವಾಗಿ ಜನಪ್ರಿಯವಾಯಿತು. ಈ ಒಂದು ದಿನದ ಆಟದ ಜನಪ್ರಿಯತೆ ಮುಂದೆ ವಿಶ್ವಕಪ್ ಕ್ರಿಕೆಟ್ ಉಗಮಕ್ಕೆ ಕಾರಣವಾಯಿತು. ಆರಂಭದಲ್ಲಿ ಸಾಂಪ್ರದಾಯಿಕ ಆಟಗಾರರು ಏಕದಿನದ ಕ್ರಿಕೆಟನ್ನು ವಿರೋಧಿಸುತ್ತಲೇ ಇದ್ದರು. 1980ರ ದಶಕದಲ್ಲಿ ಆಸ್ಟ್ರೇಲಿಯಾದ ಟೆಲಿವಿಷನ್ ಮಾಧ್ಯಮದ ಒಡೆಯ ಕೆರಿ ಪ್ಯಾಕರ್ ಐ.ಸಿ.ಸಿ. ನಿಯಮಗಳಿಗೆ ವಿರುದ್ಧವಾಗಿ ಏಕ ದಿನದ ಕ್ರಿಕೆಟ್ ಪಂದ್ಯಗಳನ್ನು ನಡೆಸಿದ. ಅಂದು ಈ ಪಂದ್ಯಗಳಲ್ಲಿ ಭಾಗವಹಿಸಿದವರನ್ನು ಆಯಾ ರಾಷ್ಟ್ರಗಳ ಕ್ರಿಕೆಟ್ ಮಂಡಳಿಗಳು ಬಹಿಷ್ಕಾರದಲ್ಲಿಟ್ಟರು. ಆದರೆ ಕೆರಿ ಪ್ಯಾಕರ್ ಆರಂಭಿಸಿದ ಹಗಲು-ರಾತ್ರಿಯ ಬಣ್ಣದ ಸಮವಸ್ತ್ರದ ಏಕ ದಿನದ ಕ್ರಿಕೆಟ್ ಮುಂದೆ ಹೊಸ ಪರಂಪರೆಯೊಂದಕ್ಕೆ ನಾಂದಿಯಾಯಿತು.

ಕ್ರಿಕೆಟ್ ವಿಶ್ವದ ಜನಪ್ರಿಯ ಆಟವೇ ?

ಕ್ರಿಕೆಟ್ ವಿಶ್ವದ ಜನಪ್ರಿಯ ಆಟವಲ್ಲ ಎಂಬುದು ಮಾಧ್ಯಮಗಳ ಸಮೀಕ್ಷೆಗಳು ತಿಳಿಸುತ್ತವೆ. ಇಂದು ಕ್ರಿಕೆಟ್ ಉಗಮವಾಗಿ 3 ಶತಮಾನಗಳು ಕಳೆದಿದ್ದರೂ ಕ್ರಿಕೆಟ್ ಕೇವಲ ಬೆರಳೆಣಿಕೆಯ ರಾಷ್ಟ್ರಗಳಲ್ಲಿ ಜನಪ್ರಿಯವಾಗಿದೆ. ಐ.ಸಿ.ಸಿ. ಸದಸ್ಯತ್ವ ಪಡೆದು ಟೆಸ್ಟ್ ಕ್ರಿಕೆಟ್ ಆಡುವ ರಾಷ್ಟ್ರಗಳು ಪ್ರಪಂಚದಲ್ಲಿ ಕೇವಲ 9 ಮಾತ್ರ. ಈ 9 ರಾಷ್ಟ್ರಗಳಲ್ಲಿ ಕೂಡಾ ಏಷ್ಯಾ ಉಪಖಂಡದಲ್ಲಿರುವ ಪಾಕಿಸ್ತಾನ, ಭಾರತ ಹಾಗೂ ಶ್ರೀಲಂಕಾದಲ್ಲಿ ಕ್ರಿಕೆಟ್ ಜನಪ್ರಿಯವಾಗಿದೆ. ಹಿಂದೆ ಕ್ರಿಕೆಟ್‌ನಲ್ಲಿ ದಿಗ್ಗಜ ರಾಷ್ಟ್ರವಾದ ವೆಸ್ಟ್ ಇಂಡೀಸ್‌ನಲ್ಲಿ ಕೂಡಾ ಕ್ರಿಕೆಟ್ ಜನಪ್ರಿಯತೆ ಕಳೆದುಕೊಂಡಿದೆ. ದಕ್ಷಿಣ ಆಫ್ರಿಕಾ, ಜಿಂಬಾಬ್ವೆ, ಆಸ್ಟ್ರೇಲಿಯಾ ಹಾಗೂ ನ್ಯೂಜಿಲ್ಯಾಂಡ್‌ಗಳಲ್ಲೂ ಕೂಡಾ ಕ್ರಿಕೆಟ್ ಜನಪ್ರಿಯತೆ ಸೀಮಿತವಾಗಿದೆ. ಕ್ರಿಕೆಟ್‌ನ ಉಗಮವಾದ ಇಂಗ್ಲೆಂಡ್‌ನಲ್ಲಿ ಇಂದು ಫುಟ್ಬಾಲ್ ಪ್ರಮುಖ ಜನಾಕರ್ಷಣೆಯ ಆಟವಾಗಿದೆ. ಒಂದು ಆಟ ಒಲಂಪಿಕ್ ಮಾನ್ಯತೆ ಪಡೆಯಬೇಕಾದರೆ ಪ್ರಪಂಚದ ಕನಿಷ್ಟ 20 ರಾಷ್ಟ್ರಗಳಲ್ಲಿ ಈ ಆಟ ಜಾರಿಯಲ್ಲಿರಬೇಕು. ಆದರೆ ವಾಸ್ತವಾಂಶವೆಂದರೆ ಪ್ರಪಂಚದ 20 ರಾಷ್ಟ್ರಗಳಲ್ಲೂ ಕೂಡಾ ಈ ಆಟ ಜಾರಿಯಲಿಲ್ಲ. ಕ್ರಿಕೆಟ್ ಜನಪ್ರಿಯವಾಗಿರುವ ಭಾರತ, ಪಾಕಿಸ್ತಾನ, ಶ್ರೀಲಂಕಾ, ವೆಸ್ಟ್ ಇಂಡೀಸ್ ರಾಷ್ಟ್ರಗಳು ಇತರೆ ಕ್ರೀಡೆಗಳಲ್ಲಿ ಅಂದರೆ ಒಲಂಪಿಕ್ಸ್‌ನಲ್ಲಿ ತೀರಾ ಹಿಂದೆ ಉಳಿದಿವೆ. ಈ ರಾಷ್ಟ್ರಗಳಲ್ಲೂ ಕ್ರಿಕೆಟ್ ಇತರೆ ಕ್ರೀಡೆಗಳ ಬೆಳವಣಿಗೆಗೆ ಮಾರಕವಾಗಿದೆ. ಇನ್ನೊಂದು ಗಮನಿಸಬೇಕಾದ ವಾಸ್ತವ ಅಂಶ ಏನೆಂದರೆ ಕ್ರಿಕೆಟ್ ಆಡುವ ರಾಷ್ಟ್ರಗಳಲ್ಲಿ ಕೇವಲ ಅಂತರಾಷ್ಟ್ರೀಯ ಪಂದ್ಯಗಳು ಮಾತ್ರ ಜನ ಆಕರ್ಷಣೆಯ ಪಂದ್ಯಗಳಾಗಿವೆ.

ಏಕೆ ಈ ವಿಶ್ವಕಪ್ ಕ್ರಿಕೆಟ್ ಉನ್ಮಾದ :

ಬಹುರಾಷ್ಟ್ರೀಯ ಕಂಪನಿಗಳು ಸುದ್ದಿಮಾಧ್ಯಮಗಳು ಪಂದ್ಯದ ಮೇಲೆ ಜೂಜು ನಡೆಸುವ ಬುಕ್ಕಿಗಳು ವಿಶ್ವಕಪ್ ಕ್ರಿಕೆಟ್ ಬಗ್ಗೆ ಇಂದು ಒಂದು ಉನ್ಮಾದವನ್ನು ಉಂಟು ಮಾಡಿರುತ್ತಾರೆ. ಬಹುರಾಷ್ಟ್ರೀಯ ಲಘು ಪಾನೀಯ ತಯಾರಕರಾದ ಕೊಕೊಕೊಲಾ, ಪೆಪ್ಸಿ ಕಂಪನಿಗಳು, ಬಹುರಾಷ್ಟ್ರೀಯ ಸಿಗರೇಟ್ ಕಂಪನಿಗಳು ಕೋಟ್ಯಾಂತರ ರೂಪಾಯಿಗಳನ್ನು ಪ್ರಾಯೋಜನದ ರೂಪದಲ್ಲಿ ಪ್ರಚಾರಕ್ಕೆ ವಿನಿಯೋಗಿಸುತ್ತಿವೆ. ಇಂದು ಭಾರತದ ಎಲ್ಲಾ ಪ್ರಮುಖ ಉದ್ದಿಮೆಗಳು, ವಾಹನ ತಯಾರಕರು ಕ್ರಿಕೆಟ್ ಮೂಲಕ ಪ್ರಚಾರ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕ್ರಿಕೆಟ್‌ನ ಎಲ್ಲಾ ಅಂಗಗಳಲ್ಲಿ ಇಂದು ಪ್ರಚಾರದ ವಿಷಯ ಕಾಣುತ್ತಿದೆ. ಆಟಗಾರರ ಸಮವಸ್ತ್ರದ ಮೇಲೆ, ಬ್ಯಾಟ್ ಹಾಗೂ ವಿಕೆಟ್‌ಗಳ ಮೇಲೆ, ಆಟದ ಹುಲ್ಲಿನ ಮೈದಾನದ ಮೇಲೆ ಪ್ರಾಯೋಜಕ ಕಂಪನಿಗಳ ಹೆಸರುಗಳು ಮುದ್ರಿತವಾಗುತ್ತಿವೆ. ಆಟದ ಮೇಲೆ ಪಣ ಕಟ್ಟುವ ಜನರಿಂದ ಹಾಗೂ ಬುಕ್ಕಿಗಳಿಂದ ಇಂದು ಅನೇಕ ಹಗರಣಗಳು ಭಾರತ, ಆಸ್ಟ್ರೇಲಿಯಾ, ಪಾಕಿಸ್ತಾನಗಳಲ್ಲಿ ಸೃಷ್ಟಿಯಾಗಿವೆ. ಆಟದ ಫಲಿತಾಂಶದ ಮೇಲೆ ಹಣ ಕಟ್ಟಿಸಿಕೊಳ್ಳುವ ಬುಕ್ಕಿಗಳು ಕ್ರಿಕೆಟ್ ಬಗ್ಗೆ ದೊಡ್ಡ ಉನ್ಮಾದವನ್ನೇ ಉಂಟು ಮಾಡಿರುತ್ತಾರೆ.

ಈ ಎಲ್ಲಾ ವಿಷಯಗಳ ನಡುವೆ ಇಂದು ವಿಶ್ವಕಪ್ ನಡೆಯುವ ಇಂಗ್ಲೆಂಡ್‌ನಲ್ಲಿ ಅಂದರೆ ಕ್ರಿಕೆಟ್‌ನ ತವರೂರಿನಲ್ಲಿ ಈ ವಿಶ್ವಕಪ್ ಪಂದ್ಯಾವಳಿ ಬಗ್ಗೆ ಯಾವುದೇ ಉನ್ಮಾದ ಉತ್ಸಾಹ ಜನಪ್ರಿಯತೆ ಕಾಣುತ್ತಿಲ್ಲ. ಇಂಗ್ಲೆಂಡ್ ಜನತೆ ಈ ಪಂದ್ಯಾವಳಿ ಬಗ್ಗೆ ತಣ್ಣಗೆ ಕುಳಿತಿದೆ.

'ಕ್ರಿಕೆಟ್ ನಮ್ಮ ಧರ್ಮ' ಎಂಬ ಘೋಷಣೆ ಜನಪ್ರಿಯಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಈ ವಾಕ್ಯ ನಿಜವಾಗಿರುವುದಿಲ್ಲ. ಬದಲಾಗಿ ಕೇವಲ ಬಹುರಾಷ್ಟ್ರೀಯ ಕಂಪನಿಗಳ ಸುದ್ದಿ ಮಾಧ್ಯಮಗಳ ಹಾಗೂ ಜೂಜು ಕೋರ ಬುಕ್ಕಿಗಳಿಂದ ಈ ವಾಕ್ಯ ಉದ್ಭವವಾಗಿರುತ್ತದೆ.

ಏಳನೇ ವಿಶ್ವಕಪ್

ಇದರಲ್ಲಿ 12 ದೇಶಗಳು ಭಾಗವಹಿಸುತ್ತಿವೆ. 'ಎ' ಗುಂಪಿನಲ್ಲಿ ಭಾರತದೊಂದಿಗೆ, ಶ್ರೀಲಂಕಾ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಜಿಂಬಾಬ್ವೆ ಮತ್ತು ಕೀನ್ಯಾ. 'ಬಿ' ಗುಂಪಿನಲ್ಲಿ ಆಸ್ಟ್ರೇಲಿಯಾ, ವೆಸ್ಟ್‌ಇಂಡಿಸ್, ಪಾಕಿಸ್ತಾನ, ನ್ಯೂಜಿಲೆಂಡ್, ಬಾಂಗ್ಲಾದೇಶ ಹಾಗೂ ಸ್ಕಾಟ್‌ಲ್ಯಾಂಡ್ ಇವೆ.

ಮೇ 14 ರಿಂದ 31 ರವರೆಗೆ ಪ್ರತಿಯೊಂದು ತಂಡವೂ ಉಳಿದೆಲ್ಲಾ ತಂಡಗಳೊಂದಿಗೆ ಆಟವಾಡುತ್ತದೆ. ಹೀಗೆ ಒಟ್ಟು 30 ಪಂದ್ಯಗಳು ನಡೆಯಲಿವೆ. ಎರಡನೇ ಹಂತದಲ್ಲಿ ಒಂದು ಗುಂಪಿನಲ್ಲಿ ಮೊದಲ ಮೂರು ಸ್ಥಾನ ಪಡೆದ ಪ್ರತಿಯೊಂದು ತಂಡವೂ ಇನ್ನೊಂದು ಗುಂಪಿನಲ್ಲಿ ಮೊದಲ ಮೂರು ಸ್ಥಾನ ಪಡೆದು ಪ್ರತಿಯೊಂದು ತಂಡದೊಂದಿಗೆ ಆಟವಾಡುತ್ತದೆ. ಈ 9 ಪಂದ್ಯಗಳಲ್ಲಿ ಮೊದಲ ನಾಲ್ಕು ಸ್ಥಾನ ಪಡೆದ ತಂಡಗಳು ಸೆಮಿಫೈನಲ್ ಪ್ರವೇಶಿಸುತ್ತವೆ. ನಂತರ ಜೂನ್ 20 ರಂದು ಫೈನಲ್. ಅಂದರೆ ಮುಂದಿನ 5 ವಾರಗಳಲ್ಲಿ 42 ಪಂದ್ಯಗಳು ನಡೆಯಲಿವೆ. ಭಾರತದ ಕ್ರಿಕೆಟ್ ಪ್ರೇಮಿಗಳಿಗೆ ಬಿಡುವಿಲ್ಲದ ವೀಕ್ಷಣೆ.ಬ್ಯಾಟ್‌ಬಾಲ್‌ಗಳ ಚಾಕಚಕ್ಯತೆಯ ಪ್ರದರ್ಶನ.ಜತೆಗೆ ಈ ಅಪಾರ ಸಂಖ್ಯೆಯ ಕ್ರಿಕೆಟ್ ಪ್ರೇಮಿಗಳನ್ನು ದೊಡ್ಡ ಮಾರುಕಟ್ಟೆಯಾಗಿ ಕಾಣುವ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳ ಜಾಹೀರಾತುಗಳ ಭರಾಟೆ - ಭಾರತ ತಂಡಕ್ಕೆ ವಿಜಯ ತೋರುವ ಹೆಸರಲ್ಲಿ. 1983 ರಲ್ಲಿ ಒಮ್ಮೆ ವಿಶ್ವಕಪ್ ಗೆದ್ದ ಭಾರತ ಈ 'ಶತಮಾನದ ಕೊನೆಯ ವಿಶ್ವ ಕಪ್' ನ್ನು ಗಳಿಸುತ್ತದೆ ಎಂಬ ನಿರೀಕ್ಷೆಯನ್ನು ಸೃಷ್ಟಿಸಿ ತಮ್ಮ ಮಾಲುಗಳ ಜಾಹೀರಾತಿನಲ್ಲಿ ಇವು ತೊಡಗಿವೆ. ಭಾರತದ ಕ್ರಿಕೆಟ್ ಪ್ರೇಮಿಗಳಲ್ಲಿ ಉಂಟಾಗಿರುವ ಈ ನಿರೀಕ್ಷೆ ಈಡೇರುತ್ತದೆಯೇ ಅಥವಾ ಇದುಕೇವಲ ದೊಡ್ಡ ಕಂಪನಿಗಳ ಜಾಹೀರಾತು ಸಂತೆಯಾಗಿಯೇ ಉಳಿಯುತ್ತದೆಯೇ ಕಾದು ನೋಡಬೇಕು.

ನೆಲದ ಹಾಳೆಯಲಿ

ನೆಲದ ಹಾಳೆಯಲ್ಲಿ ಬೆವರ ಹನಿಗಳಲಿ
ನೀನು ಬರೆದ ಕವನಾ...
ನಿನ್ನ ಬಂಧುಗಳ ಎದೆಯ ಧ್ವನಿಯಾಗಿ
ಹೊರಗೆ ಬರಲಿ ಅಣ್ಣಾ
ಗುಡುಗಲೀ ಮುರಿದು ಮೂಕಮೌನ

ದಲಿತ ವೇದನೆಯ ಬರಹ ಕಾವ್ಯದಲಿ
ಬರೆದುದೆಲ್ಲ ಇರಲಿ
ನಿನ್ನ ನೋವುಗಳು ನಿನ್ನ ಧಾಟಿಯಲಿ
ನರಳಿ ಅರಳಿ ಬರಲೀ....
ಜನತೆಯ ಎದೆಗೆ ತಿಳಿವು ತರಲೀ....

ನಿನ್ನ ಹಿರಿಮಗಳ ತುಂಬುದೇಹದಲಿ
ಚೆಂದ ಬರೆದ ಚಿತ್ರಾ
ಕದ್ದು ನೋಡುತಿವೆ ಕಳ್ಳ ಕಣ್ಣುಗಳು
ಹರಿದು ಪದರ ಪದರಾ....
ನಗಲಿವೆ ಚಿವುಟಿ ಚೆಲುವ ಚಿಗುರಾ...

ಕವಿಯೂ ನೀನಾಗಿ ಕಾವ್ಯ ಬರೆದು ಬಿಡು
ಧಣಿಗಳೆದೆಯ ಮೇಲೆ
ರೋಕನಾಕ ಬರೆ ಮಾತು ತುಂಬಿ ಬಿಡು
ನಿನಗೆ ಜಯದ ಮಾಲೆ
ಕಾದಿದೆ ನಿನಗು ಸುಖವು ನಾಳೆ...

ಕಣ್ಣಗೂಡಿನಲಿ ಹಣತೆ ಅಳುತಲಿದೆ
ಎಣ್ಣೆ ಇಲ್ಲ ಅದಕೆ
ಎದೆಯ ಗರ್ಭದಲಿ ನೂರು ಕನಸು ಇದೆ
ನನಸು ಆಗದೇಕೆ
ಕನಸಲೇ ಬದುಕು ಮುಗಿಯಬೇಕೆ...?

- ಕೆ.ಬಿ.ಸಿದ್ದಯ್ಯ

ಇದು ನಿಮಗೆ ಗೊತ್ತೆ?

ವಾಜಪೇಯಿ ಸರಕಾರ ವಿಶ್ವಾಸ ಮತ ಕಳೆಕೊಂಡ ಮೇಲೆ 500 ರೈಲ್ವೆ ಪಾಸುಗಳನ್ನು ತನ್ನ ಚೇಲಾಗಳಿಗೆ ಹಂಚಿದೆ. ಹೀಗೆಂದು ದಿಲ್ಲಿಯ 'ಸ್ಟೇಟ್ಸ್‌ಮನ್' ಪತ್ರಿಕೆ (ಮೇ 1) ವರದಿ ಮಾಡಿದೆ. ಈ ಪಾಸುಧಾರರು ಪ್ರಥಮ ದರ್ಜೆ ಅಥವಾ ಹವಾನಿಯಂತ್ರಣ ಬೋಗಿಗಳಲ್ಲಿ ಪ್ರಯಾಣಿಸಲು ಅವಕಾಶ ನೀಡುವಂತದ್ದು. ಗಮನಾರ್ಹ ಸಂಗತಿಯೆಂದರೆ ಏಪ್ರಿಲ್ 12 ರಿಂದ ಈ ಪಾಸುಗಳು ಜಾರಿಗೆ ಬಂದವು. ಆದರೆ ವಾಸ್ತವವಾಗಿ ಏಪ್ರಿಲ್ 23 ರಂದು ಈ ಪಾಸುಗಳನ್ನು ನೀಡುವ ನಿರ್ಣಯ ಕೈಗೊಳ್ಳಲಾಯಿತು. ಅಂದರೆ ವಿಶ್ವಾಸಮತ ಕಳೆಕೊಂಡ ಸರಕಾರದ ರೈಲ್ವೇ ಮಂತ್ರಿ ಹಿಂದಿನ ದಿನಾಂಕ ಹಾಕಿ ಈ ಪಾಸುಗಳನ್ನು ನೀಡಿದ್ದಾರೆ. ಬಿಜೆಪಿ ನೇತೃತ್ವದ ಸರಕಾರದ ಅನೈತಿಕತೆಯ ಮತ್ತೊಂದು ಉದಾಹರಣೆಯಿದು.

ಧರ್ಮದ ಹೆಸರಿನಲ್ಲಿ ಗೂಂಡಾಗಿರಿ

ನಾನು ಕೋಮುವಾದಕ್ಕೆ ಸಂಬಂಧಪಟ್ಟ ಎಲ್ಲವನ್ನೂ ತಿರಸ್ಕರಿಸುತ್ತೇನೆ. ಧರ್ಮದ ಹೆಸರಿನಲ್ಲಿ ದ್ವೇಷಿಸುವುದು ಹಾಗೂ ಹೊಡೆದಾಡುವುದನ್ನು ತಿರಸ್ಕರಿಸುತ್ತೇನೆ. ಧರ್ಮದ ಹೆಸರಿನಲ್ಲಿ ನಡೆಸುವ ಹಿಂಸೆ ಗೂಂಡಾಗಿರಿಯಲ್ಲದೆ ಮತ್ತೇನೂ ಅಲ್ಲ.

- ಶಾರುಖ್ ಖಾನ್
ಚಲನಚಿತ್ರ ನಟ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಜನಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ